ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 10 ಸಂಚಿಕೆ 30 ಜುಲೈ 24, 2016 ಪುಟ 16 ರೂ.10/-

Web : www.janashakthi.co.in e-mail : js_weekly@yahoo.com

ಪೆರುಮಾಳ್ ಮುರುಗನ್

"ನಾನು ಮತ್ತೆ ಬರೆಯುತ್ತೇನೆ"





"ನಾವೂ ಕಾರ್ಮಿಕರು"


ಆರು ಲಕ್ಷ ಅಂಗನವಾಡಿ ನೌಕರರ ಕೂಗು

ಜಮ್ಮು-ಕಾಶ್ಮೀರ: ದಬ್ಬಾಳಿಕೆ ನಿಲ್ಲಿಸಿ, ಸಂವಾದ ಆರಂಭಿಸಿ-ಪ್ರಕಾಶ ಕಾರಟ್

ಪರ್ಯಾಯ ದಾರಿ ತೆರೆದ ಎಲ್‌ಡಿಎಫ್ ಬಜೆಟ್



ಮೌಢ್ಯತೆಯ ಮಸೂದೆಗೆ 'ಗ್ರಹಣ'ವೇಕೆ?



ಜನರ ಉಳಿತಾಯಗಳನ್ನು ನುಂಗಿದ

ಮಹಾಹಗರಣ

ಪ್ರಧಾನಿಗಳಿಗೆ ಯೆಚೂರಿ ಪತ್ರ



ಸೆಪ್ಟೆಂಬರ್ 2 ಸಾರ್ವತ್ರಿಕ ಮುಷ್ಕರದತ್ತ...

ಗುತ್ತಿಗೆ ಕಾರ್ಮಿಕರ ಶೋಷಣೆಯನ್ನೇ ಕಾನೂನು ಬದ್ಧಗೊಳಿಸಬೇಡಿ

ಎಡಪಕ್ಷಗಳಿಲ್ಲದ ಪರ್ಯಾಯ ಸಾಧ್ಯವೇ ?

– ಜಿ.ವಿ.ಶ್ರೀರಾಮರೆಡ್ಡಿ

ಕಾಶ್ಮೀರದಲ್ಲಿ ಭುಗಿಲೆದ್ದಿರುವ ಜನತೆಯ ಅಸಂತುಷ್ಟಿ ಸರ್ವಪಕ್ಷ ಸಭೆ ಕರೆಯಲು ಸಿಪಿಐ(ಎಂ) ಆಗ್ರಹ

ಕಾಶ್ಮೀರದಲ್ಲಿ ಹದಗೆಡುತ್ತಿರುವ ಪರಿಸ್ಥಿತಿಯ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಂಭೀರ ಆತಂಕ ವ್ಯಕ್ತಪಡಿಸಿದೆ. ಇದುವರೆಗೆ 32 ಮಂದಿ ಸತ್ತಿದ್ದಾರೆ, ಅವರಲ್ಲಿ ಹೆಚ್ಚಿನವರು ಯುವಜನರು, ನೂರಾರು ಜನ ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ.

ಎನ್‌ಕೌಂಟರ್‌ನಲ್ಲಿ ಬುರ್ಹಾನ್ ವಾನಿ ಮತ್ತು ಆತನ ಸಹಚರರ ಸಾವಿನ ನಂತರ ದೊಡ್ಡಪ್ರಮಾಣದಲ್ಲಿ ಜನತೆಯ ಅಸಂತುಷ್ಟಿ ಭುಗಿಲೆದ್ದಿದೆ. **ಪ್ರತಿಭಟನಾಕಾರರ ಮೇಲೆ ಪೋಲೀಸರು ಮತ್ತು ಸಶಸ್ತ್ರ ಪಡೆಗಳು ಅಮಾನುಷ ಬಲಪ್ರಯೋಗ ನಡೆಸಿರುವುದರಿಂದ ಸಾವುಗಳಾಗಿವೆ ಎನ್ನುತ್ತ ಪೊಲಿಟ್‌ಬ್ಯುರೊ ಇದನ್ನು ಖಂಡಿಸಿದೆ.** ಆಡಳಿತ ಪ್ರತಿಭಟನಾಕಾರರ ಮೇಲೆ ವಿಪರೀತ ಬಲಪ್ರಯೋಗ ನಡೆಸಬಾರದು, ಅಮಾಯಕ, ಅನಾಮಧೆಯ ಪ್ರತಿಭಟನಾಕಾರರ ಸಾವಿಗೆ ಕಾರಣರಾದವರನ್ನು ಗುರುತಿಸಿ ಶಿಕ್ಷಿಸಬೇಕು ಸಿಪಿಐ(ಎಂ) ಆಗ್ರಹಿಸಿದೆ.

ಈಗ ಹೆಚ್ಚುತ್ತಿರುವ ಅಸಂತುಷ್ಟಿ ಜನತೆಯಲ್ಲಿ ಉಂಟಾಗಿರುವ ತೀವ್ರ ಪರಕೀಯ ಭಾವದ,ದಮನಕಾರಿ ಧೋರಣೆಗಳು ಮತ್ತು ನಿಶ್ಶಸ್ತ್ರ ನಾಗರಿಕರನ್ನು ಭದ್ರತಾ ಪಡೆಗಳು ಕೊಲ್ಲುತ್ತಿರುವುದರ ಮೇಲಿನ ಸಿಟ್ಟಿನ ಒಂದು ಅಭಿವ್ಯಕ್ತಿ ಕೂಡ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ. ಕಾನೂನು ವ್ಯವಸ್ಥೆ ಕಾಪಾಡಲು ಮತ್ತು ನಾಗರಿಕ ಆಡಳಿತ ನಡೆಸಲು ಉಗ್ರಗಾಮಿಗಳ ಚಟುವಟಿಕೆಗಳನ್ನು ತಡೆಯಬೇಕು ಎಂಬುದೇನೋ ನಿಜವಾದರೂ, ಕಲ್ಲೆಸೆಯುವ ಪ್ರತಿಭಟನಾಕಾರರ ಮೇಲೆ ಇಂತಹ ಬಲಪ್ರಯೋಗಕ್ಕೆ ಅದು ಒಂದು ನೆವವಾಗಬಾರದು.

ಕೇಂದ್ರ ಸರಕಾರ ಮತ್ತು ಸ್ವತಃ ಬಿಜೆಪಿ ಸಮ್ಮಿಶ್ರ ಸರಕಾರದ ಭಾಗವಾಗಿರುವ ರಾಜ್ಯಸರಕಾರ ರಾಜ್ಯದಲ್ಲಿ ಈ ಹೆಚ್ಚುತಿರುವ ಅಸಂತೋಷವನ್ನು ಕೊನೆಗೊಳಿಸಲು ಮತ್ತು ರಾಜ್ಯದಲ್ಲಿ ಶಾಂತಿ ಮತ್ತು ಸಾಮಾನ್ಯ ಪರಿಸ್ಥಿತಿಯನ್ನು ನೆಲೆಗೊಳಿಸಲು ಎಲ್ಲ ರಾಜಕೀಯ ಶಕ್ತಿಗಳು ಮತ್ತು ಗುಂಪುಗಳೊಂದಿಗೆ ಸಂವಾದದ ರಾಜಕೀಯ ಪ್ರಕ್ರಿಯೆಯನ್ನು ಆರಂಭಿಸಬೇಕು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕೇಂದ್ರೀಯ ಮಟ್ಟದಲ್ಲಿ ತಕ್ಷಣವೇ ಕೇಂದ್ರ ಗೃಹಮಂತ್ರಿಗಳು ಒಂದು ಸರ್ವಪಕ್ಷ ಸಭೆಯನ್ನು ಕರೆಯಬೇಕು ಎಂದು ಆಗ್ರಹಿಸಿದೆ.

ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆಯನ್ನು ರದ್ದುಮಾಡಿ–ಸಿಪಿಐ(ಎಂ)

ಸಶಸ್ತ್ರ ಪಡೆಗಳ ವಿಶೇಷ ಅಧಿಕಾರಗಳ ಕಾಯ್ದೆ(ಎಎಫ್‌ಎಸ್‌ಪಿಎ)ಯನ್ನು ಬಳಸುವುದರ ಬಗ್ಗೆ ಸುಪ್ರಿಂ ಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ಈ ಕಾಯ್ದೆಯನ್ನು ರದ್ದು ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೋ ಕೇಂದ್ರ ಸರಕಾರವನ್ನು ಆಗ್ರಹಿಸಿದೆ.

ಸುಪ್ರಿಂ ಕೋರ್ಟ್ ಹೇಗೆ ಈ ಕರಾಳ ಕಾಯ್ದೆ ನಾಗರಿಕರ ಸುರಕ್ಷಿತತೆ ಮತ್ತು ಜೀವಗಳಿಗೆ ಒಂದು ಬೆದರಿ–ಕೆಯಾಗಿದೆ ಎಂಬುದನ್ನು ಎತ್ತಿ ತೋರಿದೆ. ಈ ಕಾಯ್ದೆ ಭದ್ರತಾ ಪಡೆಗಳಿಗೆ ಯಾವುದೇ ಶಿಕ್ಷೆಯ ಭಯವಿಲ್ಲದೆ ಜನಗಳನ್ನು ಕೊಲ್ಲಲು ಅವಕಾಶ ಮಾಡಿಕೊಟ್ಟಿದೆ. ಇಂತಹ ಕೊಲೆಗಳು "ಕಾನೂನಿನ ಆಳ್ವಿಕೆಯನ್ನು ನಾಶ ಮಾಡುವಂತವು ಮತ್ತು ನೇರವಾಗಿ ಅಸಂವಿಧಾನಿಕ" ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ. ಆದ್ದರಿಂದ ಸರಕಾರ ಈ ತೀರ್ಪಿಗೆ ಕಿವಿಗೊಟ್ಟು ಈ ಕಾಯ್ದೆಯನ್ನು ರದ್ದು ಮಾಡಲೇ ಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಮಣಿಪುರದಲ್ಲಿ ಹುಸಿ ಎನ್‌ಕೌಂಟರ್ ನಡೆಸಿ ಜನಗಳನ್ನು ಕೊಲ್ಲಲಾಗಿದೆ, ಆದ್ದರಿಂದ ಅದಕ್ಕೆ ಅವಕಾಶ ಮಾಡಿಕೊಟ್ಟಿರುವ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರಗಳ ಕಾಯ್ದೆ (ಎಎಫ್‌ಎಸ್‌ಪಿಎ) ಯನ್ನು ರದ್ದು ಮಾಡಬೇಕು ಎಂದು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿರುವ ಇಬ್ಬರು ನ್ಯಾಯಾಧೀಶರ ಸುಪ್ರಿಂ ಕೋರ್ಟ್ ಪೀಠ ಜುಲೈ 8ರಂದು ಮಣಿಪುರ ಸರಕಾರ ಎನ್‌ಕೌಂಟರ್‌ಗಳಲ್ಲಿ ಸತ್ತವರ ಕುಟುಂಬಗಳಿಗೆ ಪರಿಹಾರ ಕೊಟ್ಟಿದೆ ಎಂಬುದೇ ಇಂತಹ ಎನ್‌ಕೌಂಟರ್‌ಗಳು ಹುಸಿ ಎಂಬುದನ್ನು ಸೂಚಿಸುತ್ತವೆ ಎಂದು ಆಭಿಪ್ರಾಯ ಪಡುತ್ತ ಪರಿಹಾರ ನೀಡಿದ ನಂತರ ಮಣಿಪುರ ಸರಕಾರ ಏನು ಕ್ರಮಗಳನ್ನು ಕೈಗೊಂಡಿದೆ ಎಂದು ನ್ಯಾಯಾಲಯಕ್ಕೆ ತಿಳಿಸಬೇಕು ಎಂದು ಹೇಳಿದೆ. ಹಾಗೆಯೇ ಕೇಂದ್ರ ಸರಕಾರ, ಮಣಿಪುರ ಸರಕಾರ ಮತ್ತು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೂ ಇದುವರೆಗೂ ಎಫ್‌ಐಆರ್‌ನ್ನೇ ಸಲ್ಲಿಸದ 62 ಕೇಸುಗಳು ಸೇರಿದಂತೆ ಎಲ್ಲ ಎನ್‌ಕೌಂಟರ್‌ಗಳ ಕುರಿತು ಒಂದು ಸಮಗ್ರ ವರದಿಯನ್ನು ಸಲ್ಲಿಸಬೇಕು ಎಂದಿದೆ.

ಗ್ರಾಮೀಣ ಸಂಕಟ ಹೆಚ್ಚುತ್ತಿದೆ, ಕೃಷಿ ಬಿಕ್ಕಟ್ಟು ಆಳಗೊಳ್ಳುತ್ತಿದೆ,

ಪ್ರತಿಭಟನಾ ಚಳುವಳಿಗಳನ್ನು ನಡೆಸಲು ಕೃಷಿ ಕೂಲಿಕಾರರ ಸಂಘದ ಕರೆ

ಕೃಷಿ ಕೂಲಿಕಾರರ ಕೂಲಿ, ಉದ್ಯೋಗ,ಸಾಮಾಜಿಕ ಭದ್ರತೆ ಮತ್ತು ಭೂಮಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಎತ್ತಿಕೊಂಡು ಪ್ರತಿಭಟನಾ ಚಳುವಳಿಗಳನ್ನು ಸಂಘಟಿಸಬೇಕು, ಇದನ್ನು ಮೊದಲು ಗ್ರಾಮ ಮಟ್ಟದಿಂದ ಪ್ರಾರಂಭಿಸಿ ಜಿಲ್ಲಾ ಮತ್ತು ರಾಜ್ಯಮಟ್ಟಕ್ಕೆ ಒಯ್ಯಬೇಕು ಎಂದು **ಅಖಿಲ ಭಾರತ ಕೃಷಿ ಕೂಲಿಗಾರರ ಸಂಘದ ಕೇಂದ್ರೀಯ ಕಾರ್ಯಕಾರಿ ಸಮಿತಿ** ಕರೆ ನೀಡಿದೆ.

ಜುಲೈ 10 ಮತ್ತು 11ರಂದು ದಿಲ್ಲಿಯಲ್ಲಿ ನಡೆದ ಈ ಸಭೆಯಲ್ಲಿ ದೇಶದ ವಿವಿಧ ರಾಜ್ಯಗಳಿಂದ 37 ಕೃಷಿ ಕೂಲಿಗಾರರ ಆಂದೋಲನದ ಮುಖಂಡರು ಭಾಗವಹಿಸಿದ್ದರು. ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಕಾನೂನಿನ(ಮನರೇಗ)ಅಡಿಯಲ್ಲಿ ಎಷ್ಟು ಉದ್ಯೋಗ ಒದಗಿಸಲಾಗಿದೆ ಎಂಬ ಸರಕಾರೀ ದಾವೆಗಳನ್ನು ಬಯಲಿಗೆಳೆಯುವ ಒಂದು ಶ್ವೇತಪತ್ರ ಪ್ರಕಟಿಸಲೂ ಈ ಮುಖಂಡರು ನಿರ್ಧರಿಸಿರುವುದಾಗಿ ಸಂಘ ಹೇಳಿದೆ.

ಜಿಲ್ಲಾ ಮತ್ತು ರಾಜ್ಯಮಟ್ಟಗಳಲ್ಲಿ ಮನೆ ಇಲ್ಲದವರ ಮತ್ತು ಭೂರಹಿತರ ಸಮಾವೇಶಗಳನ್ನೂ ನಡೆಸಬೇಕು, ಬರಪೀಡಿತ ಪ್ರದೇಶಗಳಲ್ಲಿ ಜನಗಳು ಮಧ್ಯಪ್ರವೇಶಿಸುವಂತೆ ಅವರನ್ನು ಅಣಿನೆರೆಸಿ ಪರಿಹಾರ ಕ್ರಮಗಳನ್ನು ಬಲಗೊಳಿಸುವಂತೆ ಮಾಡಬೇಕು ಹಾಗೂ ಎಲ್ಲ ಕಾರ್ಮಿಕ ಸಂಘಟನೆಗಳ ಜಂಟಿ ಕರೆಯಂತೆ ನಡೆಯಲಿರುವ ಸಪ್ಟಂಬರ್ 2ರ ಸಾರ್ವತ್ರಿಕ ಮುಷ್ಕರವನ್ನು ಬೆಂಬಲಿಸಿ ಯಶಸ್ವಿಗೊಳಿಸಬೇಕು ಎಂದೂ ಕೇಂದ್ರ ಕಾರ್ಯಕಾರಿ ಮಂಡಳಿ ಕರೆ ನೀಡಿದೆ.

ಗ್ರಾಮೀಣ ಸಂಕಟ ಹೆಚ್ಚುತ್ತಿದೆ, ಕೃಷಿ ಬಿಕ್ಕಟ್ಟು ಆಳಗೊಳ್ಳುತ್ತಿದೆ, ಕೃಷಿ ಕೂಲಿಕಾರರ ಕೂಲಿಗಳು ಮತ್ತು ಉದ್ಯೋಗಾವಕಾಶಗಳು ಹೆಚ್ಚುತ್ತಿಲ್ಲ, ಅವು ಸ್ಥಗಿತಗೊಂಡಿವೆ, ಇಲ್ಲವೇ ಇಳಿಯುತ್ತಿವೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎ.ವಿಜಯರಾಘವನ್ ಮಂಡಿಸಿದ ವರದಿ ಗಂಭೀರ ಆತಂಕ ವ್ಯಕ್ತಪಡಿಸಿದೆ.

ಜನಗಳಿಗೆ ಪರಿಹಾರ ಕೊಡುವ ಇಚ್ಛಾಶಕ್ತಿ ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಇಲ್ಲ ಎಂದು ದೇಶದ ಸರ್ವೋಚ್ಚ ನ್ಯಾಯಾಲಯದ ಟಿಪ್ಪಣಿಯೇ ಬಯಲು ಮಾಡಿದ ನಂತರವೂ ಮನರೇಗದ ಬಗ್ಗೆ ಸುಳ್ಳು ದಾವೆಗಳ ಮೂಲಕ ಅದರ ಅಡಿಯಲ್ಲಿ ಸಾಕಷ್ಟು ಉದ್ಯೋಗಗಳನ್ನು ಒದಗಿಸುವಲ್ಲಿ ಆಗಿರುವ ವಿಫಲತೆಯನ್ನು ಮುಚ್ಚಿಕೊಳ್ಳಲಾಗುತ್ತಿದೆ ಎಂಬ ಸಂಗತಿಯತ್ತವೂ ಪ್ರಧಾನ ಕಾರ್ಯದರ್ಶಿಗಳ ವರದಿ ಗಮನ ಸೆಳೆಯಿತು. ಕೇಂದ್ರ ಬಜೆಟಿನಲ್ಲಿ ಸಾಕಷ್ಟು ಹಣ ಒದಗಿಸದಿರುವುದರಿಂದ ಹೆಚ್ಚಿನ ರಾಜ್ಯಗಳಲ್ಲಿ 150 ದಿನಗಳ ಕೆಲಸ ಒದಗಿಸಬೇಕೆಂಬ ನಿರ್ದೇಶನ ಜಾರಿಯಾಗುವುದು ಅಸಾಧ್ಯವಾಗಿದೆ ಎಂದು ಚರ್ಚೆಯಲ್ಲಿ ಭಾಗವಹಿಸಿದ ರಾಜ್ಯಗಳ ಮುಖಂಡರುಗಳು ತಿಳಿಸಿದರು.

ಸತತ ಎರಡು ವರ್ಷಗಳ ಬರದ ನಂತರವೂ ಸರಕಾರಗಳು ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಂಡಿಲ್ಲ, ಇನ್ನೊಂದೆಡೆಗೆ ಅವು ಕಾಳಸಂತೆಕೋರರಿಗೆ ಮುಕ್ತ ಅವಕಾಶ ಒದಗಿಸಿದವು, ಇದರಿಂದಾಗಿ ಬೆಲೆಗಳು ವಿಪರೀತವಾಗಿ ಹೆಚ್ಚುವಂತಾಗಿದೆ ಎಂದು ಚರ್ಚೆಯಲ್ಲಿ ಭಾಗವಹಿಸಿದ ಮುಖಂಡರುಗಳು ಅಭಿಪ್ರಾಯ ಪಟ್ಟರು.

ಕೇಂದ್ರ ಸರಕಾರದ ಕುಮ್ಮಕ್ಕಿನಿಂದ ಹಲವು ರಾಜ್ಯಗಳಲ್ಲಿ ಹಾನಿಕಾರಕ ಭೂಸ್ವಾಧೀನ ಧೋರಣೆಗಳನ್ನು ಅನುಸರಿಸಲಾಗುತ್ತಿದೆ ಎಂಬ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ವಿವೇಚನಾಹೀನ ಧೋರಣೆಗಳನ್ನು ಅನುಸರಿಸಲಾಗುತ್ತಿದೆ ಎಂದು ಚರ್ಚೆಯಲ್ಲಿ ಭಾಗವಹಿಸಿದ ಹಲವು ಮುಖಂಡರು ಹೇಳಿದರು. ಆಂಧ್ರಪ್ರದೇಶ ಮತ್ತು ತೆಲಂಗಾಣ ಸರಕಾರಗಳಂತೂ ಈ ವಿಷಯದಲ್ಲಿ ಸ್ಪರ್ಧೆಗಿಳಿದಂತೆ ಕಾಣುತ್ತದೆ.

ಭಾರತದ ರೈತ ಆಂದೋಲನದ ಹಿರಿಯ ಮುಖಂಡರಾದ ಎಸ್.ರಾಮಚಂದ್ರನ್ ಪಿಳ್ಳೆ ಹಾಗೂ ಕೃಷಿ ಕೂಲಿಕಾರರ ಸಂಘದ ಜಂಟಿ ಕಾರ್ಯದರ್ಶಿ ಸುನೀತ್ ಚೋಪ್ರಾ ಚರ್ಚೆಯಲ್ಲಿ ಭಾಗವಹಿಸಿದರು. ಸುನಿತ್ ಚೋಪ್ರಾ ಜಗತ್ತಿನಾದ್ಯಂತ ನವ–ಉದಾರವಾದಿ ಧೋರಣೆಗಳು ಗ್ರಾಮೀಣ ಬದುಕಿನ ಮೇಲೆ, ಉದ್ಯೋಗದ ಮತ್ತು ಆಹಾರದ ಭದ್ರತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ ಎನ್ನುತ್ತ ಭಾರತದಲ್ಲಿ ಈ ಗ ಕಾಣುತ್ತಿರುವ ಬಹುವಿಧ ಬಿಕ್ಕಟ್ಟು ಕೂಡ ಇದರದೇ ಭಾಗ ಎಂಬುದನ್ನು ನಾವು ಮನಗಾಣಬೇಕು ಮತ್ತು ಸಾಮೂಹಿಕ ಕಾರ್ಯಾಚರಣೆಗಳ ಮೂಲಕ ಇದನ್ನು ಸೋಲಿಸಬೇಕು ಎಂದರು.

ಅರುಣಾಚಲ ಪ್ರದೇಶದಲ್ಲಿ ರಾಜ್ಯಪಾಲರ ಕ್ರಮ ಕಾನೂನುಬಾಹಿರ–ಸುಪ್ರಿಂ ಕೋರ್ಟ್ ತೀರ್ಪು: ಮೋದಿ ಸರಕಾರದ ರಾಜಕೀಯ ನೈತಿಕತೆಯ ಮುಂದೆ ಪ್ರಶ್ನೆಚಿಹ್ನೆ–ಸಿಪಿಐ(ಎಂ)

ಕಳೆದ ಡಿಸೆಂಬರಿನಲ್ಲಿ ಅರುಣಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಸರಕಾರವನ್ನು ವಜಾಮಾಡಿ ರಾಷ್ಟ್ರಪತಿ ಆಳ್ವಿಕೆ ಹೇರಿದ್ದನ್ನು ಮತ್ತು ಅದಕ್ಕೆ ಸಮಬಂಧಪಟ್ಟ ರಾಜ್ಯಪಾಲರ ಎಲ್ಲ ಕ್ರಮಗಳು ಕಾನೂನುಬಾಹಿರ ಮತ್ತು ಸಂವಿಧಾನದ ಅಂಶಗಳನ್ನು ಉಲ್ಲಂಘಿಸಿವೆ ಎಂದು ದೇಶದ ಸರ್ವೋಚ್ಚ ನ್ಯಾಯಾಲಯದ ಐವರು ನ್ಯಾಯಾಧೀಶರಿದ್ದ ಸಂವಿಧಾನ ಪೀಠ ಜುಲೈ 13ರಂದು ತೀರ್ಪು ನೀಡಿದೆ. ಈ ಮೂಲಕ ಮೊತ್ತಮೊದಲ ಬಾರಿಗೆ ಅಧಿಕಾರ ನಡೆಸುತ್ತಿರುವ ಸರಕಾರ ತಂತಾನೇ ರದ್ದಾಗಿದೆ.

ಇದು ಮುಂದೆ ಈ ವಿಷಯದಲ್ಲಿ ಒಂದು ದೃಷ್ಟಾಂತವಾಗುವ ತೀರ್ಪು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಇದನ್ನು ಸ್ವಾಗತಿಸಿದೆ.

ಡಿಸೆಂಬರ್ 2015ರಲ್ಲಿ ಕೆಲವು ಕಾಂಗ್ರೆಸ್‌ನ ಭಿನ್ನಮತೀಯ ಶಾಸಕರ ದೂರಿನ ಮೇಲೆ ಅಲ್ಲಿಯ ರಾಜ್ಯಪಾಲರು ಸಭಾಧ್ಯಕ್ಷರ ನಿರ್ಧಾರವನ್ನು ಮೀರಿ ಜನವರಿ 14ರಂದು ನಡೆಯಬೇಕಾಗಿದ್ದ ವಿಧಾನಸಭೆಯ ಅಧಿವೇಶನವನ್ನು ಅದರ ಮೊದಲೇ ಅಂದರೆ ಡಿಸೆಂಬರ್ 16 ಕ್ಕೆ ನಡೆಸಬೇಕೆಂದು ಆದೇಶ ನೀಡಿದರು. ಮುಖ್ಯಮಂತ್ರಿ ನಬಂ ತುಕಿ ಮತ್ತು ಅವರನ್ನು ಬೆಂಬಲಿಸುತ್ತಿದ್ಧ ಕಾಂಗ್ರೆಸ್ ಶಾಸಕರು ಇದನ್ನು ವಿರೋಧಿಸಿದರು. ಅವರೆಲ್ಲ ಗೈರು ಹಾಜರಾಗಿದ್ದ ಈ ಸಭೆ ವಿಧಾನಸಭಾಧ್ಯಕ್ಷರ ವಿರುದ್ಧ ಕ್ರಮ ಕೈಗೊಂಡಿತು. ಭಿನ್ನಮತೀಯರು ಕಲಿಖೊ ಪುಲ್ ಅವರನ್ನು ತಮ್ಮ ಹೊಸ ನಾಯಕನಾಗಿ ಆರಿಸಿಕೊಂಡರು. ವಿಧಾನಸಭಾಧ್ಯಕ್ಷರು ಇದರ ವಿರುದ್ಧ ಗುವಾಹಾಟಿ ಹೈಕೋರ್ಟಿಗೆ ಹೋದರು. ಹೈಕೋರ್ಟ್ ಅವರ ಅರ್ಜಿಯನ್ನು ಮನ್ನಿಸದಿದ್ದಾಗ ಸುಪ್ರಿಂ ಕೋರ್ಟಿಗೆ ಹೋದರು. ಇದರ ವಿಚಾರಣೆಯನ್ನು ಸಂವಿಧಾನ ಪೀಠಕ್ಕೆ ಒಪ್ಪಿಸಲಾಯಿತು.

ಕೇಂದ್ರ ಸರಕಾರ ನಬಂ ತುಕಿಯವರನ್ನು ವಜಾ ಮಾಡಿ ಜನವರಿ 26ರಂದು ರಾಷ್ಟ್ರಪತಿ ಆಳ್ವಿಕೆ ಹೇರಿತು. ನಬಂ ತುಕಿ ಇದರ ವಿರುದ್ಧ ಸುಪ್ರಿಂ ಕೋರ್ಟಿಗೆ ಹೋದರು. ಫೆಬ್ರುವರಿ 19ರಂದು ರಾಷ್ಟ್ರಪತಿ ಆಳ್ವಿಕೆಯನ್ನು ತೆಗೆಯಲಾಯಿತು. ಮರುದಿನವೇ ಭಿನ್ನ ಮತೀಯ ನಾಯಕ ಕಲಿಖೊ ಪುಲ್ ಅವರು ಬಿಜೆಪಿಯ ಬೆಂಬಲದಿಂದ ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದರು.

ಈಗ ಸುಪ್ರಿಂ ಕೋರ್ಟ್ ವಿಧಾನಸಭಾ ಅಧಿವೇಶನವನ್ನು ನಿಗದಿತ ದಿನಾಂಕದಿಂದ ಮೊದಲೇ ನಡೆಸಲು ಅದೇಶಿಸಿದ್ದು ಕಾನೂನು ಬಾಹಿರ ಹಾಗೂ ಸಂವಿಧಾನದ ಉಲ್ಲಂಘನೆ ಎಂದು ತೀರ್ಪು ನೀಡಿ, ನಂತರದ ಕ್ರಮಗಳನ್ನೆಲ್ಲ, ಅಂದರೆ ಡಿಸೆಂಬರ್ 16ರಂದು ನಡೆದ ಸಭೆ, ರಾಷ್ಟ್ರಪತಿ ಆಳ್ವಿಕೆಯ ಹೇರಿಕೆ, ಅದನ್ನು ತೆಗೆದದ್ದು ಮತ್ತು ಭಿನ್ನಮತೀಯ ನಾಯಕ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದು ಇವೆಲ್ಲವನ್ನೂ ರದ್ದು ಮಾಡಿದೆ.

ಈ ಮೂಲಕ ಈ ಸಂವಿಧಾನ ಪೀಠದ ಈ ಅತ್ಯಂತ ಮಹತ್ವದ ತೀರ್ಪು ಅರುಣಾಚಲ ಪ್ರದೇಶದಲ್ಲಿ ಕೇಂದ್ರ ಸರಕಾರದ ಹಸ್ತಕ್ಷೇಪದ ಮೂಲಕ ಸರಕಾರದ ಬದಲಾವಣೆಯನ್ನು ತಲೆಕೆಳಗಾಗಿಸಿದೆ ಮತ್ತು ನಮ್ಮ ಸಂವಿಧಾನದ ಒಕ್ಕೂಟ ಸ್ವರೂಪವನ್ನು ಉಲ್ಲಂಘಿಸಲು ಸಾಧ್ಯವಿಲ್ಲ ಎಂಬುದನ್ನು ಎತ್ತಿ ಹಿಡಿದಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಉತ್ತರಾಖಂಡದ ಅನುಭವವನ್ನು ಅನುಸರಿಸಿ ಈ ಸುಪ್ರಿಂ ಕೋರ್ಟ್ ತೀರ್ಪು ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ರಾಜಕೀಯ ನೈತಿಕತೆ ಮತ್ತು ಹೊಣೆಗಾರಿಕೆಯನ್ನು ಪ್ರಶ್ನಿಸುವಂತಾಗಿದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಈ ಸಂವಿಧಾನಬಾಹಿರ ನಿರ್ಧಾರ ಕೈಗೊಳ್ಳುವುದಕ್ಕೆ ಹೊಣೆಗಾರರು ಯಾರು ಎಂಬುದನ್ನು ಕೇಂದ್ರ ಸರಕಾರ ನಿಗದಿ ಮಾಡಬೇಕಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕೇಂದ್ರ ಸರಕಾರ ಈ ತೀರ್ಪಿಗೆ ಕಿವಿಗೊಟ್ಟು ಪ್ರತಿಪಕ್ಷಗಳ ಸರಕಾರಗಳಿರುವ ರಾಜ್ಯಗಳಲ್ಲಿ ಕೇಂದ್ರೀಯ ಆಳ್ವಿಕೆಯನ್ನು ಹೇರುವ ಈ ಹೆಚ್ಚುತ್ತಿರುವ ಸರ್ವಾಧಿಕಾರಶಾಹಿ ಪ್ರವೃತ್ತಿಯನ್ನು ನಿಲ್ಲಿಸಬೇಕು ಎಂದು ಹೇಳಿದೆ.

aAiAvÉAzAgÉEzAA

ಪ್ರಜಾಪ್ರಭುತ್ವ ಎಂದರೆ ಸಮಾಜದ ಎಲ್ಲ ಕೇಂದ್ರ ಸಂಸ್ಥೆಗಳು ಜನಗಳ ಹತೋಟಿಯಲ್ಲಿರಬೇಕು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಈ ನಿರೂಪಣೆಯ ಪ್ರಜಾಪ್ರಭುತ್ವ ನಮಗೆ ಸಿಗುವುದಿಲ್ಲ.....

....ಬಂಡವಾಳಶಾಹಿ, ಮೂಲತಃ, ಎಲ್ಲವೂ ಮಾರಾಟಕ್ಕಿರುವ ಒಂದು ವ್ಯವಸ್ಥೆ, ನಿಮ್ಮ ಬಳಿ ಎಷ್ಟು ಹೆಚ್ಚು ಹಣವಿದೆಯೋ ಅಷ್ಟನ್ನು ಪಡೆಯಬಹುದು. ನಿರ್ದಿಷ್ಟವಾಗಿ, ಇದು ಸ್ವಾತಂತ್ರ್ಯದ ವಿಷಯದಲ್ಲೂ ನಿಜ. ಸ್ವಾತಂತ್ರ್ಯ ಕೂಡ ಮಾರಾಟಕ್ಕಿರುವ ಒಂದು ಸರಕು. ನೀವು ಶ್ರೀಮಂತರಾದರೆ ಅದನ್ನು ಬಹಳ ಪ್ರಮಾಣದಲ್ಲಿ ಹೊಂದಬಹುದು.



–ಪ್ರೊ. ನೋಮ್ ಚೋಮ್ಸ್ಕಿ
ಭಾಷಾಶಾಸ್ತ್ರಜ್ಞ ಮತ್ತು
ಹಿರಿಯ ಅಮೆರಿಕನ್ ಚಿಂತಕ

ಪರ್ಯಾಯ ಚಿಂತನಾ ಸಮಾವೇಶದ ಬಗ್ಗೆ ಒಂದು ಚಿಂತನೆ

ಜಿ.ವಿ.ಶ್ರೀರಾಮ ರೆಡ್ಡಿ

ಇದೇ ತಿಂಗಳು 9–10 ರಂದು ಎಸ್.ಆರ್.ಹಿರೇಮಠರ ಜನ ಸಂಗ್ರಾಮ ಪರಿಷತ್, ರಾಜ್ಯ ರೈತ ಸಂಘದ ಪುಟ್ಟಣ್ಣಯ್ಯ, ಕರ್ನಾಟಕ ಸರ್ವೋದಯ ಪಕ್ಷದ ದೇವನೂರು ಮಹದೇವ ಮತ್ತು ಇತರರು ಧಾರವಾಡದಲ್ಲಿ ಪರ್ಯಾಯ ಚಿಂತನಾ ಸಮಾವೇಶವನ್ನು ನಡೆಸಿ ಜನ ಪರ್ಯಾಯದ ಬಗ್ಗೆ ಚಿಂತನೆಯನ್ನು ನಡೆಸಿದ್ದಾರೆ. ಸಮಾನತೆ, ಸ್ವಾತಂತ್ರ್ಯ, ನ್ಯಾಯ ಮತ್ತು ಭ್ರಾತೃತ್ವ ಆಧರಿಸಿ ಪ್ರಜಾಪ್ರಭುತ್ವ ಸ್ಥಾಪಿಸುವುದು, ಕಾರ್ಪೊರೇಟ್‌ಪರವಾಗಿರುವ ಮತಾಂಧ, ಜಾತಿವಾದಿ ಮತ್ತು ಭ್ರಷ್ಟ ಶಕ್ತಿಗಳನ್ನು ಹಿಮ್ಮೆಟ್ಟಿಸುವದಕ್ಕಾಗಿ ಮಹಾಮೈತ್ರಿ ರಚಿಸಲು ಸಾಧ್ಯವಾದಷ್ಟು ಸಮಾನ ಮನಸ್ಕರನ್ನು ಒಗ್ಗೂಡಿಸಲು ಈ ಸಮಾವೇಶವು ನಿರ್ಧರಿಸಿತು ಎಂದು ವರದಿಯಾಗಿದೆ.

ದೇಶದ ಇವತ್ತಿನ ರಾಜಕೀಯ ಆರ್ಥಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸ್ಥಿಗೆ ಪರ್ಯಾಯವಾಗಿ ಜನಾಂದೋಲನದ ಮೂಲಕ ಒಂದು ಪರ್ಯಾಯವನ್ನು ರೂಪಿಸಬೇಕೆಂಬುದು ಅಲ್ಲಿನ ಚರ್ಚೆಯ ಸಾರಾಂಶ. ಈಗಿನ ಸಂದರ್ಭದಲ್ಲಿ ಇದು ಸ್ವಾಗತಾರ್ಹ. ಆದರೆ ಇಲ್ಲಿ ಹಲವು ಗಂಭೀರ ಪ್ರಶ್ನೆಗಳು ಏಳುತ್ತವೆ.

ಮೊದಲನೆಯದಾಗಿ, ಈ ಪರ್ಯಾಯ ಕರ್ನಾಟಕಕ್ಕೆ ಸೀಮಿತವೋ? ಅಥವಾ ದೇಶಕ್ಕೆಲ್ಲಾ ಪರ್ಯಾಯವೋ? ಎನ್ನುವುದರ ಬಗ್ಗೆ ಸರಿಯಾದ ಸ್ಪಷ್ಟನೆ ಇಲ್ಲ. "ಆಮ್‌ಆದ್ಮಿ" ಪಕ್ಷದ ಸಂಸ್ಥಾಪಕರಾಗಿದ್ದ, ಈಗ ಅದ–ರಿಂದ ದೂರ ಸರಿದಿರುವ ಖ್ಯಾತ ವಕೀಲ ಪ್ರಶಾಂತ ಭೂಷಣ್ ಮತ್ತು ಯೋಗೇಂದ್ರ ಯಾದವ್ ಅವರು ಭಾಗವಹಿಸಿದ್ದಾರೆ.

ಎರಡನೆಯದು, ಸಮಾವೇಶದಲ್ಲಿ ಮಾತನಾಡಿದ ಜನಸಂಗ್ರಾಮ ಪರಿಷತ್‌ನ ಹಿರೇಮಠ ಅವರು ಈ ಪರ್ಯಾಯವು ರಾಜಕೀಯ ಪಕ್ಷಗಳಿಂದ ಸಾಧ್ಯವಿಲ್ಲವೆಂದು ಸ್ಪಷ್ಟ ಪಡಿಸಿದ್ದಾರೆ. ಹಾಗಾದರೆ, ಇವರು ಇನ್ನೊಂದು ರಾಜಕೀಯ ಪಕ್ಷವನ್ನು ಕಟ್ಟುತ್ತಾರಾ? ಅಥವಾ ರಾಜಕೀಯೇತರ ಪರ್ಯಾಯವನ್ನು ರೂಪಿಸಲು ಹೊರಟಿದ್ದಾರಾ ಎಂಬ ಪ್ರಶ್ನೆ ಏಳುತ್ತದೆ.

ಈ ಸಮಾವೇಶದಲ್ಲಿ ಕಾರ್ಪೊರೇಟ್ ಕಂಪನಿಗಳ ಬಗ್ಗೆ ಮಾತನಾಡಿದ್ದಾರೆ, ಕೋಮುವಾದದ ಬಗ್ಗೆಯೂ ಪ್ರಸ್ತಾಪವಾಗಿದೆ. ಆದರೆ ನವ–ಉದಾರೀಕರಣ ನೀತಿಗಳ ಬಗ್ಗೆ ಮಾತಿಲ್ಲ. ಜನಾಂದೋಲನಗಳ ಮುಖಾಂತರ ಪರ್ಯಾಯವನ್ನು ರೂಪಿಸಬೇಕೆಂದು ಹೇಳಿದ್ದಾರೆ. ಜನಾಂದೋಲನಗಳ ಮುಖಾಂತರ ಪರ್ಯಾಯ ರೂಪಿಸಬೇಕೆನ್ನುವುದು ಸರಿ. ಆದರೆ ಈ ಜನಾಂದೋಲನಗಳನ್ನು ನಡೆಸುವುದು ಹೇಗೆ, ಯಾವ ಪ್ರಶ್ನೆಗಳ ಮೇಲೆ ಈ ಆಂದೋಲನದಲ್ಲಿ ವಿವಿಧ ಜನವಿಭಾಗಗಳನ್ನು ಅಣಿನೆರೆಸುವುದು, ಈ ಬಗ್ಗೆ ಸ್ಪಷ್ಟತೆ ಕಾಣುತ್ತಿಲ್ಲ.

ಅಂದರೆ, ಈ ಜನಾಂದೋಲನಕ್ಕೆ ಸ್ಪಷ್ಟವಾದ ಆರ್ಥಿಕ ಧೋರಣೆಗಳು, ರಾಜಕೀಯ ನೀತಿಗಳು ಸಾಮಾಜಿಕ ನೀತಿಗಳು ಮತ್ತು ಸಾಂಸ್ಕೃತಿಕ ನೀತಿಗಳನ್ನು ರೂಪಿಸದಿದ್ದರೆ ಈ ಜನಾಂದೋಲನಗಳು ಕಡೆಗೆ ದಿಕ್ಕು ತಪ್ಪಿ ಆರಾಜಕತೆಯಡಿಗೆ ಹೋಗುವುದಿಲ್ಲವೆ? ಇದಕ್ಕೆ 80 ರ ದಶಕದಲ್ಲಿ ರಾಜ್ಯದಲ್ಲಿ ಪ್ರಾರಂಭವಾದ ರೈತ ಚಳುವಳಿ ಮತ್ತು ದಲಿತ ಚಳುವಳಿಗಳು ಉದಾಹರಣೆಗಳು ಅಲ್ಲವೆ?. ಅದೇ ರೈತ ಚಳುವಳಿಯ ಒಂದು ಬಣ ಮತ್ತು ಅದೇ ದಲಿತ ಚಳುವಳಿಯ ಒಂದು ಬಣ ಇದರಲ್ಲಿ ಭಾಗಿಯಾಗಿದೆ ಮತ್ತು ಅದೇ ದಲಿತ ಚಳುವಳಿ ಒಂದು ಭಾಗವಾಗಿದ್ದ ಒಬ್ಬ ಮುಖಂಡರು ಇದರಲ್ಲಿ ಭಾಗಿಯಾಗಿದ್ದಾರೆ.

'ರಾಜಕೀಯ'ವಿಲ್ಲದ ಪರ್ಯಾಯ ?

ಈ ಹಿನ್ನೆಲೆಯಲ್ಲಿ ಈ ಚಿಂತನಾ ಸಮಾವೇಶವನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಹಲವು ದ್ವಂದ್ವಗಳು ಮತ್ತು ವಿರೋಧಾಭಾಸಗಳು ಇದರಲ್ಲಿ ಎದ್ದು ಕಾಣುತ್ತವೆ.

ಧಾರವಾಡದ ಚಿಂತನಾ ಸಮಾವೇಶದಲ್ಲಿ ಎತ್ತಿರುವ ಎರಡು ಅಂಶಗಳನ್ನು ಮಾತ್ರ ಇಲ್ಲಿ ವಿಶ್ಲೇಷಣೆಗೆ ಒಳಪಡಿಸೋಣ. ಒಂದು, ರಾಜಕೀಯ ಪಕ್ಷಗಳಿಂದ ಪರ್ಯಾಯ ಸಾಧ್ಯವಿಲ್ಲ ಎಂಬ ಅಂಶ. ಎರಡು, ಜನಚಳುವಳಿಗಳಿಂದ ಪರ್ಯಾಯ ರೂಪಿಸಬೇಕೆಂಬ ಅಂಶ. ರಾಜಕೀಯ ಪಕ್ಷಗಳಿಂದ ಪರ್ಯಾಯ ಸಾಧ್ಯವಿಲ್ಲವೆಂದರೆ, ರಾಜಕೀಯೇತರ ಪರ್ಯಾಯ ಎಂಬುದು ಒಂದು ಸಾಮಾನ್ಯ ತಿಳುವಳಿಕೆ. ಇಲ್ಲಿ ರಾಜಕೀಯ ಎಂದರೆ ಏನು? ವಿಧಾನ ಮಂಡಲಗಳಲ್ಲಿ ಮತ್ತು ಸಂಸತ್ತಿನಲ್ಲಿ ಸೀಟುಗಳನ್ನು ಗಿಟ್ಟಿಸಿಕೊಳ್ಳುವುದು ಮಾತ್ರವೇ? ಹಾಗೆ ಯೋಚಿಸಿದಾಗ ಮಾತ್ರ ರಾಜಕೀಯ ಚಳುವಳಿ ಮತ್ತು ಜನಚಳುವಳಿಗಳ ನಡುವೆ ವೈರುಧ್ಯ ಕಾಣುತ್ತದೆ. ಹಾಗಿಲ್ಲದಿದ್ದರೆ, ರಾಜಕೀಯ ನೀತಿಗಳ ಮಹತ್ವ, ಅವಿಲ್ಲದೆ ಯಾವುದೇ ಪರ್ಯಾಯವನ್ನು ರೂಪಿಸಲು ಸಾಧ್ಯವಿಲ್ಲ ಎಂಬದು ಸ್ಪಷ್ಟವಾಗಿ ಕಾಣುತ್ತದೆ.

ರಾಜಕೀಯ ನೀತಿಗಳು ಮತ್ತು ಆರ್ಥಿಕ ನೀತಿಗಳು ಒಂದಕ್ಕೊಂದು ಪೂರಕ ಎಂಬುದನ್ನು ಜಗತ್ತಿನ ಇತಿಹಾಸ ಸ್ಪಷ್ಟಪಡಿಸಿದೆ. ಅಷ್ಟೆ ಅಲ್ಲ, ಇವೆರಡೂ ಪರಸ್ಪರ ಅವಲಂಬಿತವಾಗಿರುವಂತವು. ಅದಕ್ಕೋಸ್ಕರವೇ ಇದನ್ನು ರಾಜಕೀಯ ಅರ್ಥಶಾಸ್ತ್ರ ಎಂದು ಕರೆಯುವುದು. ಇದು ಹಲವಾರು ಶತಮಾನಗಳಿಂದ ಜಗತ್ತಿನಲ್ಲಿ ಒಂದೊಂದು ಹಂತದಲ್ಲಿ ಒಂದೊಂದು ಸ್ವರೂಪದಲ್ಲಿ ಬೆಳೆಯುತ್ತಾ ಬಂದಿದೆ. ನಿರ್ದಿಷ್ಟ ರಾಜಕೀಯ ಆರ್ಥಿಕ ನೀತಿಗಳಲ್ಲದೆ ಯಾವುದೆ ಬದಲಾವಣೆ ಆಗಿರುವುದಕ್ಕೆ ಇತಿಹಾಸದಲ್ಲಿ ಉದಾಹರಣೆಗಳಿಲ್ಲ. ಒಂದು ವೇಳೆ ಅಂತಹ ಪ್ರಯತ್ನ ನಡೆದರೆ ಅದು ಯಶಸ್ವಿಯಾಗುವುದಿಲ್ಲ. ಅದಕ್ಕೆ ಆಗಲೇ ಕರ್ನಾಟಕ ರಾಜ್ಯ ಉದಾಹರಣೆಗಳನ್ನು ಕೊಟ್ಟಿದೆ. ಇಂತಹ ಉದಾಹರಣೆಗಳು ದೇಶದ ಇತರೆಡೆಗಳಲ್ಲೂ ಇವೆ, ಜಗತ್ತಿನ ಇತರೆಡೆಗಳಲ್ಲೂ ಇವೆ. ಗೊತ್ತು ಗುರಿ ಇಲ್ಲದ ಜನಾಂದೋಲನಗಳು ಮತ್ತು ಪರ್ಯಾಯಗಳು ಕಡೆಗೆ ಅರಾಜ–ಕತೆಯತ್ತ ಹೋಗಿ ಜನರಲ್ಲಿ ಭ್ರಮನಿರಸನ ಉಂಟಾಗಿ ಅಂತಿಮವಾಗಿ ಆಂದೋಲನಗಳ ಬಗ್ಗೆ ಅನುಮಾನಗಳು ಉಂಟಾಗುತ್ತವೆ.

ಇಂದು ನವ ಉದಾರೀಕರಣಗಳ ನೀತಿಗಳು ಹಂತಹಂತವಾಗಿ ಜನರ ಬದುಕನ್ನೇ ನಾಶ ಮಾಡುತ್ತಿವೆ. ಅಸಮಾನತೆ ದಿನೇ ದಿನೇ ಹೆಚ್ಚಾಗುತ್ತಾ ಇದೆ. ದೇಶದ ಸಂಪತ್ತು ಬೆರಳೆಣಿಕೆಯಷ್ಟು ಜನರ ಒಡೆತನಕ್ಕೆ ಒಳಪಟ್ಟಿದೆ. ನಿರ್ಗತಿಕರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಲೇ ಇದೆ. ಈ ಅಂತರವನ್ನು ತೊಡೆದುಹಾಕದೆ ಸಮಾನತೆ ಸಾಧ್ಯವಿಲ್ಲ. ಇದಕ್ಕೆ ಪರ್ಯಾಯ ಎಂದರೆ ಏನು? ಯಾವ ನೀತಿಗಳು ಈ ಅಸಮಾನತೆಯನ್ನು ಹುಟ್ಟು ಹಾಕಿವೆಯೋ ಆ ನೀತಿಗಳನ್ನು ಬದಲಾಯಿಸುವುದಕ್ಕೆ ಪರ್ಯಾಯ ನೀತಿಗಳು ಬೇಕು. ಆ ನೀತಿಗಳು ಯಾವುವು ಎಂಬುದು ಧಾರವಾಡದ ಚಿಂತನಾ ಸಮಾವೇಶದಲ್ಲಿ ಸ್ಪಷ್ಟವಾಗಿಲ್ಲ. ಬದಲಿಗೆ ಸ್ಪಷ್ಟವಾದ ಪರ್ಯಾಯ ನೀತಿಗಳನ್ನು ರೂಪಿಸುವ ಕಾರ್ಯಕ್ರಮವಿರುವ ಎಡಪಕ್ಷಗಳ ಮುಖ್ಯವಾಗಿ ಸಿಪಿಐ(ಎಂ) ಪಕ್ಷವನ್ನು ಅವಹೇಳನ ಮಾಡಲಾಗಿದೆ. ಕಮ್ಯುನಿಸ್ಟ್ ಸರ್ಕಾರ ನಾಶವಾಗಲು 20 ವರ್ಷಗಳೇ ಬೇಕಾಯಿತು "ಆಮ್‌ಆದ್ಮಿ" ಸರ್ಕಾರ ಒಂದು ವರ್ಷದಲ್ಲೇ ನಾಶವಾಯಿತೆಂದು ಹೇಳಲಾಯಿತು(ಯೋಗೇಂದ್ರ ಯಾದವ್). ಹಾಗಾದರೆ ಇವರು ಯಾವ ರೀತಿಯ ಪರ್ಯಾಯವನ್ನು ರೂಪಿಸಲು ಹೊರಟಿದ್ದಾರೆ? ಕಾರ್ಪೊರೇಟ್–ವಿರೋಧಿ ಭಾವನೆಗಳು ಸಮಾವೇಶದಲ್ಲಿ ವ್ಯಕ್ತಗೊಂಡಿವೆ, ಆದರೆ ಅದಕ್ಕೆ ಕಾರಣವಾದ ನವ–ಉದಾರವಾದಿ ಆರ್ಥಿಕ ನೀತಿಗಳ ವಿರುದ್ಧ ಆರಂಭದಲ್ಲೇ ಎಚ್ಚರಿಸಿ, ಅವುಗಳ ವಿರುದ್ಧ ವಿವಿಧ ದುಡಿಯುವ ಜನವಿಭಾಗಗಳನ್ನು ಅಣಿನೆರೆಸಿ

ಪುಟ 4 ಕ್ಕೆ

ಮೌಢ್ಯಾಚರಣೆಗಳ ನಿರ್ಬಂಧಕ್ಕೆ ವಿಳಂಬವೇಕೆ?

ಎಸ್.ವೈ. ಗುರುಶಾಂತ್

ಕರ್ನಾಟಕದಲ್ಲಿ ಮೌಢ್ಯ ನಿಷೇಧದ ಮಸೂದೆ ವಿಧಾನ ಸಭೆಯಲ್ಲಿ ಮಂಡಿಸಿ ಅಂಗೀಕಾರವಾಗುವುದು ಎಂದು ಎಂಬ ಪ್ರಶ್ನೆ ಬೃಹದಾಕಾರವಾಗಿ ಕಾಡುತ್ತಿದೆ. ಕಳೆದ ಮೂರು ವರ್ಷಗಳಿಂದಲೂ ಕರಡೊಂದನ್ನು ಅಂತಿಮಗೊಳಿಸಿ ಅಂಗೀಕರಿಸುವ ಪ್ರಯತ್ನಗಳು ಸಫಲವಾಗುತ್ತಲೇ ಇಲ್ಲ. ಒಂದೊಂದು ಸಂದರ್ಭಕ್ಕೂ ಒಂದೊಂದು ನೆಪಗಳು, ಮತ್ತೇನೋ ಕಾರಣಗಳು 'ರಾಹು–ಕೇತು'ಗಳಂತೆ ಅಡ್ಡಿ ಬರುತ್ತಲೇ ಇವೆ! ಅದರಲ್ಲಿ ಅಧಿಕಾರ–ಕೇಂದ್ರದ ಹೊರಗೆ ಅಂ–ದರೆ ಸಮಾಜದ ನಡುವಿನಿಂದ ಬರುವವು ಒಂದೆಡೆಯಾದರೆ ಸರ್ಕಾರದ ಒಳಗಿನಿಂದಲೇ ಬರುವಂಥಹವು ಇನ್ನೊಂದು ಬಗೆಯವು. ಹಾಗಾಗಿಯೇ ಬರುವ ಪ್ರಶ್ನೆ ಮೌಢ್ಯತೆಯ ಮಸೂದೆಗೆ ಬಡಿದಿರುವ 'ಗ್ರಹಣದ ವಿಮೋಚನೆ' ಎಂದು?

ವಿರೋಧವೇಕೆ?

ಈಗಲೂ ಈ ಮಳೆಗಾಲದ ಅಧಿವೇಶನದ ಸಂದರ್ಭಕ್ಕೆ ಅಂದರೆ 2016 ರ ಜುಲೈ 8 ರಂದು ಸಚಿವ ಸಂಪುಟದಲ್ಲಿ ಅಂಗೀಕರಿಸಿ, ಕರಡು ಮಸೂದೆಯನ್ನು ವಿಧಾನಸಭೆಯ ಮುಂದಿರಿಸಿ, ಚರ್ಚಿಸಿ ಅಂಗೀಕರಿಸುವ ನಿರ್ಧಾರವನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಪ್ರಕಟಿಸಿದ್ದರು. ಇದು ತಿಳಿಯುತ್ತಿದ್ದಂತೆ ಯಥಾಸ್ಥಿತಿವಾದಿಗಳು, ವಿಶೇಷವಾಗಿ ಸಂಘ ಪರಿವಾರದ ವಿವಿಧ ಅಂಗಗಳು ವಿರೋಧ ವ್ಯಕ್ತಪಡಿಸಿ ಬೀದಿಗಳಲ್ಲಿ ಮತ ಪ್ರದರ್ಶನವನ್ನು ನಡೆಸಿದರು. ಭಾರತದ ಸಂವಿಧಾನದ ಮೇಲೆ ಪ್ರಮಾಣ ಮಾಡಿ ಆರಿಸಿ ಬಂದ ಬಿಜೆಪಿ ಪಕ್ಷದ ನಾಯಕ ಕೆ.ಎಸ್.ಈಶ್ವರಪ್ಪರಂತಹ ಜನಪ್ರತಿನಿಧಿಗಳು 'ಮೂಢ ನಂಬಿಕೆಗಳ ಆಚರಣೆ ತಮ್ಮ ಉಜ್ವಲ ಪರಂಪರೆಯ ಭಾಗವೆಂದೂ, ಅವುಗಳನ್ನೂ ಪಾಲಿಸುವುದು ಜನರ ಜನ್ಮಸಿದ್ಧ ಹಕ್ಕೆಂಬಂತೆ, ಅವನ್ನು ನಿಷೇಧಿಸಲು ಬಿಡುವುದಿಲ್ಲ, ಯಾವ ಬೆಲೆಯನ್ನಾದರೂ ತರುತ್ತೇವೆ' ಎಂದು ಭ್ರಾಹ್ಮಣರ ಸಮ್ಮೇಳನದಲ್ಲಿ ಗುಡುಗಿದರು! ಇನ್ನು ಸಂಘಪರಿವಾರ ಹಿಂದೂ ಜಾಗೃತ ಸಮಿತಿ ಮತ್ತು ಮುತಾಲಿಕ್ ಸೇನೆಗಳಿಗೆ ಪ್ರತಿಭಟನೆ ನಡೆಸುವ ಮೊದಲ ಕಂತನ್ನು ನೀಡಿದೆ. ಇವರೆಲ್ಲಾ ಕೂಗಾಡುತ್ತಿದ್ದಾರೆ–ಯೇ ಹೊರತು ಮೌಢ್ಯತೆ ಆಚರಣೆಗಳನ್ನು ನಿರ್ಬಂಧಿಸಿದರೆ ಹಿಂದೂ ಧರ್ಮದ ವಿರೋಧ ಹೇಗಾಗುತ್ತದೆ ಎಂಬುದನ್ನು ಹೇಳುತ್ತಿಲ್ಲ! ಬರೀ ಆವೇಶ, ವಿರೋಧಕ್ಕಾಗಿ ಕಡು ವಿರೋಧ!

ಕಾಯ್ದೆಯ ಅಗತ್ಯತೆ, ಆಂದೋಲನ

ಇಂತಹ ವಿರೋಧ ಅನಿರೀಕ್ಷಿತವೇನಲ್ಲ. 2013 ರಲ್ಲಿಯೇ ಕಾಯ್ದೆ ತರುವ ಪ್ರಸ್ತಾಪ ಬಂದಾಗಲೇ ತೀವ್ರ ಆಕ್ರೋಶ, ವಿರೋಧ, ಕೈ ಬಿಡಬೇಕೆಂಬ ಒತ್ತಾಯ, ಒತ್ತಡಗಳು ಬಂದಿದ್ದವು. ಬಿಜೆಪಿ–ಆರೆಸ್ಸೆಸ್ ವಲಯದಿಂದ, ಘನ ಪ್ರತಿಷ್ಠಿತರು ಎಂಬ ಮಠಾಧೀಶರಿಂದ, ಮುಖ್ಯವಾಗಿ, ಸರ್ಕಾರ ಇನ್ನೂ ಕರಡನ್ನು ಅಂಗೀಕರಿಸಿಯೇ ಇಲ್ಲದಿರುವಾಗ, ಕೇವಲ ಕೆಲ ಪ್ರಸ್ತಾಪಗಳನ್ನೇ ತಿರುಚಿದ ಮಾಧ್ಯಮಗಳು ನಭೋಮಂಡಲ ಬಿರಿಯುವಂತೆ ಮೌಢ್ಯತೆಯ ನಿರ್ಬಂಧದ ಪ್ರಸ್ತಾವವೇ ಮಹಾ ಗಂಡಾಂತರ, ಪ್ರಳಯಕ್ಕೆ ನಾಂದಿ ಎಂದೆಲ್ಲಾ ಬೊಬ್ಬಿಟ್ಟವು. ಹಸಿ ಸುಳ್ಳುಗಳ ಸರಮಾಲೆ ಕಟ್ಟಿ ಜನರಿಗೆ ಮಂಕುಬೂದಿ ಎರಚಿ ಯಾಮಾರಿಸುವ ಹುಸಿ ಜೋತಿಷಿಗಳನ್ನು, ಭೋಂಗಾ ಪಂಡಿತರನ್ನು ಎತ್ತಿ ಕಟ್ಟಿದವು. ಮೂಲ ವಿಚಾರವೇ ಪ್ರಸ್ತಾಪಿತವಾಗದಂತೆ, ತಿರುಚಿ, ವಿಕೃತಗೊಳಿಸಿ ಸ್ಥಾಪಿತ ಹಿತಾಸಕ್ತಿಗಳ ರಕ್ಷಣೆಗೆ ಟೊಂಕ ಕಟ್ಟಿದ್ದವು. ಈ ಎಲ್ಲಾ ಬಾಹ್ಯ ಒತ್ತಡಗಳು, ಸ್ವತಃ ಕಾಂಗ್ರೆಸ್ ಪಕ್ಷದೊಳಗೇ ಇದ್ದ ಲೆಕ್ಕಾಚಾರದ ಗೊಣಗಾಟ'ದ ವಿರೋಧಗಳಿಂದ ಅವಸರ ಬೇಡ ಎಂದು ಅದನ್ನು ಮುಂದಕ್ಕೆ ಹಾಕಲಾಯಿತು. ಈ ಬೆನ್ನಲ್ಲೇ ಎಡ ಶಕ್ತಿಗಳು, ವಿಶೇಷವಾಗಿ ನಿಡುಮಾಮಿಡಿ ಶ್ರೀಗಳ ಮುತುವರ್ಜಿಯಲ್ಲಿ ಪ್ರಗತಿಪರ ಮಠಾದೀಶರ ವೇದಿಕೆ ನೇತೃತ್ವದಲ್ಲಿ ಸುಮಾರು 180ಕ್ಕೂ ಹೆಚ್ಚಿನ ಮಠಾಧೀಶರು ಹಾಗೂ ಪ್ರಮುಖ ಪ್ರಗತಿಪರ ಚಿಂತಕರು 'ಅಂತಹ ಕಾಯ್ದೆ ತರುವುದು ತೀರಾ ಅಗತ್ಯವೆಂದೂ, ಅಂತಹ ಪ್ರಯತ್ನ ಧರ್ಮ ವಿರೋಧಿಯೂ ಅಲ್ಲ, ಧರ್ಮ ಬಾಹಿರವೂ ಅಲ್ಲ, ಅದು ಮಾನವೀಯತೆಯನ್ನು ಎತ್ತಿಹಿಡಿದು, ರಕ್ಷಿಸುವ ಮಹತ್ತರ ಕೆಲಸ' ವೆಂದು ಪ್ರತಿಪಾದಿಸಿ ಧರಣಿ ಸತ್ಯಾಗ್ರಹಗಳನ್ನು ನಡೆಸಿದ್ದು ಗಮನಾರ್ಹ. ಇದೇ ವೇದಿಕೆ ನೇತೃತ್ವದಲ್ಲಿಯೂ ಮಡೆಸ್ನಾನ, ಪಂಕ್ತಿಬೇಧದ ಅನಿಷ್ಠ ಪದ್ಧತಿ ವಿರುದ್ಧ ದನಿ ಎತ್ತಿದ್ದು ಸಹ ಮಹತ್ವದ್ದು. ಸಿಪಿಐ(ಎಂ) ಮತ್ತು ಎಡ ಚಿಂತನೆಯ ಹಲವಾರು ಸಂಘಟನೆಗಳೂ, ಜನ ವಿಜ್ಞಾನ ಚಳುವಳಿಗಳು ಮೌಢ್ಯತೆ ನಿಷೇಧ ಕಾಯ್ದೆಗಾಗಿ ಜನಜಾಗೃತಿ ಆಂದೋಲನ ನಿರಂತರಗೊಳಿಸಿದವು.

ಒಂದೆಡೆ ಯಥಾಸ್ಥಿತಿಯನ್ನು ಕಾಯ್ದುಕೊಳ್ಳ ಬೇಕೆಂಬ ಪ್ರತಿಗಾಮಿ ಶಕ್ತಿಗಳು, ಅದರ ವಕ್ತಾರರು, ಇನ್ನೊಂದೆಡೆ ಮಾನವನ ಘನತೆ ಉಳಿಸಿ, ಅಮಾನವೀಯ ಶೋಷಣೆಗೆ ತಡೆಯೊಡ್ಡಿ ಸಮಾಜ ಪ್ರಗತಿಗಭಿಮುಖವಾಗಿ ಚಲಿಸಬೇಕೆಂಬ ಪ್ರಗತಿಪರ ಶಕ್ತಿಗಳು ಹೀಗೆ ವೈಚಾರಿಕ ಸಂಘರ್ಷ ನಡೆದೇ ಬಂದಿದೆ.

ಈ ಕೆಲ ವರುಷಗಳ ಹಿಂದೆ, ಮಹಾರಾಷ್ಟ್ರದಲ್ಲಿ ಜನರ ನಡುವೆ ವೈಜ್ಞಾನಿಕ ಮನೋಭಾವ ಬೆಳೆಸಲು, ಅಂಧಭಕ್ತಿ, ಅತಿಧಾರ್ಮಿಕತೆ ಹಾಗೂ ಪರಂಪರಾನುಗತ ಆಚರಣೆಗಳ ಹೆಸರಿನಲ್ಲಿ ಅಮಾನವೀಯ ಮೌಢ್ಯತೆಯ ಪದ್ಧತಿಗಳ ವಿರುದ್ಧ ನಿರಂತರ ಹೋರಾಡುತ್ತಿದ್ದ ಖ್ಯಾತ ಚಿಂತಕ ಡಾ.ನರೇಂದ್ರ ದಾಬೋಲ್ಕರ್‌ರವರನ್ನು ಪ್ರತಿಗಾಮಿಗಳು ಗುಂಡಿಟ್ಟು ಕೊಂದದ್ದು ಅಘಾತಕರ ಘಟನೆಯಾಗಿದೆ. ಇದಕ್ಕೆ ಜನತೆಯಿಂದ ಬಂದ ಪ್ರತಿರೋಧ ಮತ್ತು ಆಗ್ರಹವನ್ನು ಲಕ್ಷಿಸಿ ಮಹಾರಾಷ್ಟ್ರದ

ಪುಟ 15 ಕ್ಕೆ

ಪರ್ಯಾಯ ಚಿಂತನಾ ಸಮಾವೇಶ.........

ಪುಟ 3 ರಿಂದ

ಹೋರಾಡಿಕೊಂಡು ಬಂದಿರುವ ಎಡ ರಾಜಕೀಯ ಶಕ್ತಿಗಳನ್ನು ದೂರವಿಟ್ಟು ಇಂತಹ ಒಂದು ಜನಪರ್ಯಾಯ ಸಾಧ್ಯವೇ?

ಗ್ರೀಸಿನ ಅನುಭವ

ಎಡಪಕ್ಷಗಳನ್ನು ಹೊರತುಪಡಿಸಿ ತಮಗೆ ತಾವೇ ಪ್ರಗತಿಪರರು ಜನಪರರು ಎಂದು ಹೇಳಿಕೊಂಡ ಗುಂಪುಗಳು, ಸಾಮಾಜಿಕ ಚಳುವಳಿಗಳ ಕೆಲವು ಸಂಘಟನೆಗಳು ಸೇರಿ ಗ್ರೀಸಿನಲ್ಲಿ ಭಾರೀ ಜನ ಬೆಂಬಲದೊಂದಿಗೆ ಆರಿಸಿ ಬಂದರು, ತಾವೂ ಕಾರ್ಪೋರೇಟ್ ಕಂಪನಿಗಳ ವಿರೋಧಿಗಳು ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್ ನೀತಿಗಳ ವಿರೋಧಿಗಳೆಂದು ಘೋಷಿಸಿಕೊಂಡರು. ಆದ-ರೆ ಗ್ರೀಸಿನ ಅನುಭವ ಏನು ತೋರಿಸುತ್ತದೆ? ಅಲ್ಲಿನ ಸಿರಿಜಾ ಸರ್ಕಾರದ ಪರಿಸ್ಥಿತಿ ಏನಾಯ್ತು? ಸಮಾವೇಶದಲ್ಲಿ ದೇವನೂರ ಮಹಾದೇವ ಗ್ರೀಸಿನ ಅನುಭವದ ಬಗ್ಗೆ ಮಾತಾಡಿದ್ದಾರೆ. ಸಿರಿಜಾದಂತೆ "ಅಧಿಕಾರಕ್ಕೆ ಬಂದ ನಂತರ ಬದುಕುಳಿಯಬೇಕೇ, ಆತ್ಮಹತ್ಯೆ ಮಾಡಬೇಕೇ ಎಂಬ ಎರಡು ಆಯ್ಕೆಗಳಲ್ಲಿ ಒಂದನ್ನು ಆರಿಸಿಕೊಳ್ಳಬೇಕು" ಎಂದು ಅವರು ಹೇಳಿರುವುದರ ಅರ್ಥವೇನು?

ಇಲ್ಲಿ ಆಮ್‌ಆದ್ಮಿ ಪಕ್ಷವನ್ನು ಸಿಪಿಐ(ಎಂ) ಪಕ್ಷವನ್ನು ಒಂದೇ ತಕ್ಕಡಿಯಲ್ಲಿ ಹಾಕಿ ತೂಗುವ ಪ್ರಯತ್ನ ಮಾಡಲಾಗಿದೆ. ಇದು ಅತ್ಯಂತ ಪೂರ್ವಗ್ರಹಪೀಡಿತ ರಾಜಕೀಯ ದೃಷ್ಠಿಕೋನ. ಆಮ್ ಆದ್ಮಿ ಪಕ್ಷವು ಈ ರೀತಿಯಾದ ಗೊತ್ತುಗುರಿ ಇಲ್ಲದ ಹೋರಾಟಗಳ ಮುಖಾಂತರ ಅಧಿಕಾರಕ್ಕೆ ಬಂದ್ದದಲ್ಲವೇ? ಆಮ್ ಆದ್ಮಿ ಪಕ್ಷದ ಸರ್ಕಾರ ರಚನೆಯಾದಾಗ ಇವರು ಅದರಲ್ಲಿ ಪ್ರಮುಖ ಪಾತ್ರ ವಹಿಸಲಿಲ್ಲವೇ? ಯಾವುದೇ ಸ್ವಷ್ಟ ಸೈದ್ಧಾಂತಿಕ, ಆರ್ಥಿಕ, ರಾಜಕೀಯ ಧೋರಣೆಗಳನ್ನು ಹೊಂದಿಲ್ಲದ ಪಕ್ಷದಿಂದ ಇದಕ್ಕಿಂತ ಹೆಚ್ಚಿನದನ್ನು ಹೇಗೆ ನೀರೀಕ್ಷಿಸಲು ಸಾಧ್ಯ? ಆಮ್ ಆದ್ಮಿ ಪಕ್ಷವಾಗಲಿ, ಸಿಪಿಐ(ಎಂ) ಮತ್ತು ಎಡ ಪಕ್ಷಗಳಾಗಲಿ ಕೆಲಸ ಮಾಡಬೇಕಾಗಿರುವುದು ಭೂಮಾಲಕ-ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಎಂಬುದನ್ನು ನಿರಾಕರಿಸಿದರೆ ಅಂತಹವರು ಅವಾಸ್ತವವಾದ ಭ್ರಮಾಲೋಕದಲ್ಲಿದ್ದಾರೆಂದು ಅರ್ಥ.

ಯಾವುದೇ ರಾಜಕೀಯ ಪಕ್ಷವಾಗಲಿ ಅಥವಾ ಸಂಘಟನೆಗಳಾಗಲಿ ದೇಶದಲ್ಲಾಗಲಿ ರಾಜ್ಯಗಳಲ್ಲಾಗಲಿ ಪರ್ಯಾಯ ನೀತಿಗಳನ್ನು ರೂಪಿಸುವುದೆಂದರೆ ಈಗ ಅಸ್ತಿತ್ವದಲ್ಲಿರುವ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ನೀತಿಗಳು ಮತ್ತು ಅವುಗಳ ಹಿಂದಿರುವ ಸಿದ್ಧಾಂತಗಳಿಗೆ ಬದಲಿ ಪರ್ಯಾಯ ನೀತಿಗಳನ್ನು ಮತ್ತು ಸಿದ್ಧಾಂತವನ್ನು ಹೊಂದಿರಬೇಕಾಗುತ್ತದೆ. ಈಗ ದೇಶದಲ್ಲಿ ಅಸ್ತಿತ್ವದಲ್ಲಿರುವುದು ಭೂಮಾಲಕ ಬಂಡವಾಳಶಾಹಿ ಆರ್ಥಿಕ ನೀತಿಗಳು ಮತ್ತು ಇವು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಅಡಿಯಾಳಾಗಿರುವುದು. ಈ ವ್ಯವಸ್ಥೆಯನ್ನು ಬದಲಿಸುವ ಬಗ್ಗೆ ಮಾತಾಡದೆ ಪರ್ಯಾಯ ನೀತಿಗಳನ್ನು ರೂಪಿಸುವುದು ಕತ್ತಲಲ್ಲಿ ಬೆಳಕನ್ನು ಹುಡುಕುವ ಪ್ರಯತ್ನವಾಗುತ್ತದೆ.

'ಜನ' ಎಂದರೆ ಯಾರು?

ಈ ಸಮಾವೇಶ ಜನಚಳುವಳಿಗಳಿಂದ ಜನಪರ್ಯಾಯ ಎಂದು ಹೇಳಿದೆ. ಇಲ್ಲಿ ಜನ ಎಂದರೆ ಯಾರು? ಮುಖೇಶ ಅಂಬಾನಿ, ಅದಾನಿಗಳೂ ಜನರೇ, ಬಂಡವಾಳದಾರರೂ ಜನರೇ. ಹಾಗೆಯೇ ಕೃಷಿರಂಗದಲ್ಲಿನ ಭೂಹೀನರು, ಬಡರೈತರು, ಅಕ್ರಮ ಸಾಗುವಳಿದಾರರು, ನಿವೇಶನ ರಹಿತರು, ಕೃಷಿ ಕಾರ್ಮಿಕರು ಎಲ್ಲರೂ ಜನರೇ, ಇವರೆಲ್ಲರನ್ನು ಒಟ್ಟಿಗೆ ಸೇರಿಸಿ ಜನಚಳುವಳಿಗಳನ್ನು ರೂಪಿಸುತ್ತಾರೆಯೇ? ಯಾವ ವಿಭಾಗದ ಜನರನ್ನು ಚಳುವಳಿಗಳಲ್ಲಿ ತೊಡಗಿಸಬೇಕು ಎಂಬುದರ ಬಗ್ಗೆ ಅಲ್ಲಿ ಚಿಂತನೆ ನಡೆಯಲಿಲ್ಲ.

ಅಲ್ಲಿ ಹಲವಾರು ವಿಭಿನ್ನ ವೈರುಧ್ಯಗಳನ್ನು ಮೈಗೂಡಿಸಿಕೊಂಡಿರುವರೇ ಇದ್ದರು ಎಂಬುದು ಗಮನಿಸಬೇಕಾದಂತಹ ಅಂಶ. ಅಲ್ಲಿ ಬಡರೈತರ, ಕೂಲಿಕಾರ್ಮಿಕರ, ಭೂಹೀನರ ಬಗ್ಗೆ ಎಂದೂ ಮಾತನಾಡದೇ ಬರೀ ಶ್ರೀಮಂತ ರೈತರ ಭೂಮಾಲಕರ ಪರವಾಗಿ ಮಾತನಾಡುವವರು ಇದ್ದರು. ಸರಿಸುಮಾರು 23 ಲಕ್ಷ ಕುಟುಂಬಗಳು ಸರ್ಕಾರಿ ಜಮೀನುಗಳಲ್ಲಿ ಉಳುಮೆ ಮಾಡಿಕೊಂಡು ಅತ್ಯಂತ ಕಷ್ಟದಲ್ಲಿ ಬದುಕುತ್ತಿದ್ದಾರೆ. ಇಂತಹ ಕುಟುಂಬಗಳನ್ನು ಭೂಮಿಯಿಂದ ಹೊರದೂಡಬೇಕೆಂದು ಹೋರಾಟ ನಡೆಸುವುದರ ಜೊತೆಗೆ ಕರ್ನಾಟಕದ ಹೈಕೋರ್ಟ್‌ನಲ್ಲಿ ಕೇಸು ದಾಖಲಿಸಿರುವವರೂ ಇದ್ದರು. ಇವರೆಲ್ಲಾ ಅವರನ್ನು ಯಾವ ರೀತಿಯಲ್ಲಿ ಜನಚಳುವಳಿಗಳಲ್ಲಿ ತೊಡಗಿಸುತ್ತಾರೆ? ಇನ್ನು ಕೋಟಿಗಟ್ಟಲೆ ಇರುವ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಬಗ್ಗೆ ಈ ಚಿಂತನಾ ಸಮಾವೇಶದಲ್ಲಿ ಚಕಾರ ಎತ್ತಲಿಲ್ಲ. ಅದೇ ರೀತಿಯಲ್ಲಿ ದಿನನಿತ್ಯ ಅತ್ಯಾಚಾರ, ಅಸಮಾನತೆ, ದಬ್ಬಾಳಿಕೆಗಳಿಗೆ ಒಳಗಾಗುತ್ತಿರುವ ಮಹಿಳೆಯರು ಮತ್ತು ದಲಿತರ ಸಮಸ್ಯೆಗಳ ಬಗ್ಗೆ ಚಿಂತನೆ ನಡೆಯಲಿಲ್ಲ. ಹಾಗಾದರೆ ಯಾವ ಜನರನ್ನು ಚಳುವಳಿಗಳಲ್ಲಿ ತರುತ್ತೀರಿ? ಯಾವುದೇ ಚಳುವಳಿಯನ್ನು ರೂಪಿಸಬೇಕಾದರೆ ಬಲಿಷ್ಠ ಸಂಘಟನೆ ಇಲ್ಲದೆ ಚಳುವಳಿ ರೂಪಿಸಲು ಸಾಧ್ಯವಿಲ್ಲ. ಈಗ ಅಸ್ತಿತ್ವದಲ್ಲಿರುವ ಭೂಮಾಲಕರ, ಬಂಡವಾಳಶಾಹಿ ಆರ್ಥಿಕ ರಾಜಕೀಯ ನೀತಿಗಳಿಗೆ, ಪರ್ಯಾಯವಾಗಿ ಹೋರಾಟಗಳನ್ನು ರೂಪಿಸಲು ಸಾಧ್ಯವಿಲ್ಲ. ಹಾಗೆಯೇ, ಸ್ವಷ್ಟ ಸೈದ್ಧಾಂತಿಕ ಆರ್ಥಿಕ ರಾಜಕೀಯ ನೀತಿಗಳು ಇಲ್ಲದೆ ಜನಪರವಾದ ನೀತಿಗಳನ್ನು ರೂಪಿಸಲು ಸಾಧ್ಯವಿಲ್ಲ.

ಪೂರ್ವಗ್ರಹಪೀಡಿತ ದೃಷ್ಟಿ ಬೇಡ

ಸ್ವಷ್ಟವಾದಂತಹ ಸೈದ್ಧಾಂತಿಕ ನೆಲೆಗಟ್ಟು ಪರ್ಯಾಯ ನೀತಿಗಳಿರುವುದು ಸಿಪಿಐ(ಎಂ) ಮತ್ತು ಎಡಪಕ್ಷಗಳಿಗೆ ಮಾತ್ರ. ಕಳೆದ ತಿಂಗಳು ಜೂನ್ 6 ರಂದು ಬೆಂಗಳೂರಿನಲ್ಲಿ ಸಿಪಿಐ(ಎಂ) ಸಿಪಿಐ, ಸಿಪಿಐ(ಎಂಎಲ್-ಲಿಬರೇಷನ್), ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷಗಳು ಬಿಜೆಪಿ ಮತ್ತು ಕಾಂಗ್ರೆಸ್ಸಿಗೆ ಪರ್ಯಾಯವಾಗಿ ಒಂದು ಬೃಹತ್ ರಾಜಕೀಯ ಸಮಾವೇಶವನ್ನು ನಡೆಸಿ ನವ-ಉದಾರವಾದಿ ಆರ್ಥಿಕ ನೀತಿಗಳಿಗೆ ಮತ್ತು ಕೋಮುವಾದಕ್ಕೆ ಪರ್ಯಾಯವಾಗಿ ಒಂದು ಸ್ವಷ್ಟವಾದ ಜನಪರ ಆರ್ಥಿಕ ನೀತಿಗಳ ಆಧಾರದಲ್ಲಿ ಕೋಮುವಾದಕ್ಕೆ ಪರ್ಯಾಯವಾಗಿ ಒಂದು ಸ್ವಷ್ಟವಾದ ಜಾತ್ಯಾತೀತ ಪರ್ಯಾಯವನ್ನು ಕರ್ನಾಟಕ ರಾಜ್ಯದ ಜನತೆಯ ಮುಂದೆ ಇಟ್ಟಿದೆ. ಈ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾ॥ ಸೀತಾರಾಮ್ ಯೆಚೂರಿಯವರು ಇಡೀ ದೇಶದಲ್ಲಿ ಬಲಿಷ್ಠವಾದ ಎಡಪರ್ಯಾಯವನ್ನು ರೂಪಿಸುವುದರ ಬಗ್ಗೆ ಸ್ವಷ್ಟಪಡಿಸಿದರು.

ಸಿಪಿಐ(ಎಂ) ಮತ್ತು ಎಡಪಕ್ಷಗಳನ್ನು ಹೊರತುಪಡಿಸಿ ಜನ ಪರ್ಯಾಯವನ್ನು ರೂಪಿಸ ಬಯಸುವವರು ಮೊದಲು ಅವರ ಪರ್ಯಾಯ ಆರ್ಥಿಕ ನೀತಿಗಳು ಯಾವುವು ಎನ್ನುವುದನ್ನು ಸ್ವಷ್ಟಪಡಿಸಬೇಕು. ಹಾಗೆಯೇ, ಅವರ ಪರ್ಯಾಯ ರಾಜಕೀಯ ಧೋರಣೆಗಳೇನು ಎಂಬುದನ್ನು ಸ್ವಷ್ಟ ಪಡಿಸಿಕೊಳ್ಳಬೇಕು. ಇಲ್ಲದಿದ್ದರೆ ಅಸ್ತಿತ್ವದಲ್ಲಿರುವ ಈ ನೀತಿಗಳಿಂದ ಮತ್ತು ಈ ವ್ಯವಸ್ಥೆಯಲ್ಲಿ ನಡೆಯುತ್ತಿರುವ ಅಮಾನವೀಯ ಶೋಷಣೆಯ ಬಗ್ಗೆ ಆಕ್ರೋಶಗೊಂಡಿರುವ ಜನತೆಯನ್ನು ದಿಕ್ಕು ತಪ್ಪಿಸಿ ತಪ್ಪುದಾರಿಗೆಳದಂತಾಗುತ್ತದೆ. ಈಗಿನ ಆಮ್‌ಆದ್ಮಿ ಪಕ್ಷದ ಸರ್ಕಾರ ಇದಕ್ಕೆ ಒಂದು ಉದಾಹರಣೆ ಅಲ್ಲವೇ?.

ಸಿಪಿಐ(ಎಂ) ಎಡಪಕ್ಷಗಳನ್ನು ಹೊರತುಪಡಿಸಿ ಪರ್ಯಾಯ ರಾಜಕೀಯವನ್ನು ರೂಪಿಸ ಹೊರಟಿರುವುದು ಅವುಗಳ ಬಗ್ಗೆ ಇರುವ ಪೂರ್ವಗ್ರಹ ಪೀಡಿತ ಮನೋಭಾವವನ್ನು ತೋರಿಸುತ್ತದೆ. ಬದಲಿಗೆ ಮುಕ್ತವಾಗಿ ಮತ್ತು ಸಕಾರಾತ್ಮವಾಗಿ ಆ ಪಕ್ಷಗಳ ಬಗ್ಗೆ ಆಲೋಚಿಸಲು ಪ್ರಯತ್ನಿಸಬೇಕು. ಕಮ್ಯುನಿಸ್ಟ್ ಪಕ್ಷಗಳು ಮತ್ತು ಎಡಶಕ್ತಿಗಳು ಕೆಲವು ಸಂದರ್ಭಗಳಲ್ಲಿ ಎಡವಿರಬಹುದು, ಅವುಗಳಲ್ಲಿ ಕೆಲವು ನಕಾರಾತ್ಮಕ ಅಂಶಗಳು ಇರಬಹುದು ಅದನ್ನೇ ಮುಂದುಮಾಡಿಕೊಂಡು ಅವುಗಳನ್ನು ಮೂಲೆಗುಂಪು ಮಾಡಲು ಹೊರಟವರಿಗೆ ಭ್ರಮನಿರಸವಾಗುವುದಲ್ಲದೇ ನಿಜವಾದ ಜನಪರ್ಯಾಯವೊಂದನ್ನು ನಿರಾಕರಿಸಿದಂತಾಗುತ್ತದೆ. ಅವುಗಳ ಎಲ್ಲಾ ಬಲಹೀನತೆಗಳ ಹೊರತಾಗಿಯೂ ಒಂದು ಸ್ವಷ್ಟ ವೈಜ್ಞಾನಿಕ ಸೈದ್ಧಾಂತಿಕ ನೆಲೆಗಟ್ಟು. ಬಂಡವಾಳಶಾಹಿ ಆರ್ಥಿಕ ನೀತಿಗಳಿಗೆ ಬದಲಿಯಾಗಿ ವೈಜ್ಞಾನಿಕ ಸಮಾಜವಾದವನ್ನು ಸ್ಥಾಪಿಸಲು ಅಡಿಪಾಯವಾಗಿರುವ ಆರ್ಥಿಕ ನೀತಿಗಳು, ಜನರು ಮುಕ್ತವಾಗಿ ಭಾಗವಹಿಸುವ ರಾಜಕೀಯ ನೀತಿಗಳು ಸಾಮಾಜಿಕ ಅಸಮಾನತೆಯನ್ನು ತೊಡೆದು ಹಾಕುವ ಮತ್ತು ಸಾಮಾಜಿಕ ಸಮಾನತೆಯ ನೀತಿಗಳನ್ನು ಧೋರಣೆಗಳನ್ನು ಹೊಂದಿರುವ ಎಡಪಕ್ಷಗಳಿಗೆ ದೇಶದ ಇಂದಿನ ಪರಿಸ್ಥಿತಿಗೆ ನಿಜವಾದ ಪರ್ಯಾಯವಾಗುತ್ತದೆ ಹೊರತು ಬೇರೆ ಯಾವ ಶಕ್ತಿಗಳು ಸುಸ್ತಿರ ಪರ್ಯಾಯವಾಗಲಾರವು. ಅವುಗಳ ಜೊತೆ ಕೈ ಜೋಡಿಸುವುದು ಇಂದಿನ ವ್ಯವಸ್ಥೆಗೆ ಪರ್ಯಾಯವನ್ನು ರೂಪಿಸಬೇಕೆಂದು ಪ್ರಾಮಾಣಿಕ ಕಾಳಜಿ ಇರುವವರ ಎಲ್ಲರ ಕರ್ತವ್ಯವಾಗಿದೆ. ●

ಈ ಸಮಾವೇಶದಲ್ಲಿ ಸರ್ಕಾರಿ ಜಮೀನುಗಳಲ್ಲಿ ಉಳುಮೆ ಮಾಡಿಕೊಂಡು ಅತ್ಯಂತ ಕಷ್ಟದಲ್ಲಿ ಬದುಕುತ್ತಿರುವ 23 ಲಕ್ಷ ಕುಟುಂಬಗಳನ್ನು ಭೂಮಿಯಿಂದ ಹೊರದೂಡಬೇಕೆಂದು ಹೈಕೋರ್ಟ್‌ನಲ್ಲಿ ಕೇಸು ದಾಖಲಿಸಿರುವವರು ಇದ್ದರು, ಬಡರೈತರ, ಕೂಲಿ ಕಾರ್ಮಿಕರ, ಭೂಹೀನರ ಬಗ್ಗೆ ಎಂದೂ ಮಾತನಾಡದೇ ಬರೀ ಶ್ರೀಮಂತ ರೈತರ ಭೂಮಾಲಕರ ಪರವಾಗಿ ಮಾತನಾಡುವವರು ಇದ್ದರು, ಇನ್ನು ಕೋಟಿಗಟ್ಟಲೆ ಇರುವ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಬಗ್ಗೆಯಾಗಲೀ, ದಿನನಿತ್ಯ ಅತ್ಯಾಚಾರ, ಅಸಮಾನತೆ, ದಬ್ಬಾಳಿಕೆಗಳಿಗೆ ಒಳಗಾಗುತ್ತಿರುವ ಮಹಿಳೆಯರು ಮತ್ತು ದಲಿತರ ಸಮಸ್ಯೆಗಳ ಬಗ್ಗೆಯಾಗಲೀ ಚಿಂತನೆ ನಡೆಯಲಿಲ್ಲ.

ಹಾಗಾದರೆ ಈ 'ಜನಾಂದೋಲನ'ದಲ್ಲಿ, 'ಜನಪರ್ಯಾಯ'ದಲ್ಲಿರುವ 'ಜನ'ಗಳಾದರೂ ಯಾರು? ಜನಸಾಮಾನ್ಯರ ಬದುಕುಗಳನ್ನು ಮೂರಾಬಟ್ಟೆ ಮಾಡಿರುವ ನವ-ಉದಾರವಾದೀ ಆರ್ಥಿಕ ಧೋರಣೆಗಳ ಬಗ್ಗೆ ಮಾತಾಡದೆ ಕಾರ್ಪೋರೇಟ್‌ಗಳ ವಿರುದ್ಧ ಮಾತನಾಡಲು, ಕೋಮುವಾದಿಗಳಗೆ ಅವರ ಬೆಂಬಲದ ಬಗ್ಗೆ ಮಾತಾಡಲು ಹೇಗೆ ಸಾಧ್ಯ?

ಕಾರವಾರ-ಬೆಂಗಳೂರು ರೈಲು ಪ್ರಯಾಣ ಅವಧಿ ಕಡಿಮೆ ಮಾಡಲು ಆಗ್ರಹ

ಕಾರವಾರ-ಬೆಂಗಳೂರು ರೈಲಿನ ಪ್ರಯಾಣದ ಅವಧಿಯನ್ನು ಕಡಿಮೆ ಮಾಡಬೇಕೆಂದು ಸಿ.ಪಿ.ಐ(ಎಂ) ಹಲವು ವರ್ಷಗಳಿಂದ ಒತ್ತಾಯಿಸುತ್ತಾ ಬಂದಿದೆ. ಜತೆಯಲ್ಲಿ ರಾತ್ರಿ ಚಲಿಸುವ ಇನ್ನೊಂದು ರೈಲನ್ನು ಆರಂಭಿಸಬೇಕೆಂದು ಒತ್ತಾಯಿಸಿ ಸಹಿ ಸಂಗ್ರಹ ಚಳುವಳಿ ನಡೆಸಿ ಜಿಲ್ಲೆಯ 14,830 ನಾಗರಿಕರ ಸಹಿ ಹಾಕಿರುವ ಮನವಿಯನ್ನು ದಿನಾಂಕ 23.12.2015ರಂದು ಹುಬ್ಬಳಿ ರೈಲ್ವೇ ಜನರಲ್ ಮ್ಯಾನೇಜರ್‌ರವರಿಗೆ ತಲುಪಿಸಲಾಗಿದೆ.

ದಿನಾಂಕ 12.04.2016 ರಂದು ನಿಯೋಗವೊಂದು ರೈಲ್ವೆ ಜನರಲ್ ಮೆನೇಜರ್‌ರನ್ನು ಭೇಟಿಯಾಗಿ ಹಾಸನ, ಬೆಂಗಳೂರು ರೈಲ್ವೆ ಹಳಿಯ ಕಾಮಗಾರಿ ತ್ವರಿತಗೊಳಿಸಬೇಕೆಂದು ಆಗ್ರಹಿಸಲಾಗಿದೆ. ಆದಷ್ಟು ಬೇಗ ಕಾಮಗಾರಿಯನ್ನು ಪೂರೈಸುವ ಭರವಸೆ ನೀಡಿರುತ್ತಾರೆ.

ರಾತ್ರಿ ಸಂಚರಿಸುವ ಇನ್ನೊಂದು ಹೊಸ ರೈಲಿನ ಕುರಿತಾಗಿ ಮಾತನಾಡಿದ ರೈಲ್ವೆ ಜನರಲ್ ಮ್ಯಾನೇಜರ್‌ರವರು "ಪ್ರಯಾಣಿಕರ ಸಂಚಾರ ದಟ್ಟಣೆ ಜಾಸ್ತಿ ಇದ್ದರೆ ಮಾತ್ರ ಇನ್ನೊಂದು ರೈಲು ಪ್ರಾರಂಭಿಸುವ ಬಗ್ಗೆ ಚಿಂತನೆ ಮಾಡಬಹುದು" ಎಂದು ಅಭಿಪ್ರಾಯ ಪಟ್ಟಿದ್ದಾರೆ. "ಈಗಿರುವ ರೈಲಿನ ಪ್ರಯಾಣದ ಅವಧಿ ಕಡಿಮೆಯಾದಲ್ಲಿ ಖಂಡಿತವಾಗಿಯೂ ಪ್ರಯಾಣಿಕರ ಸಂಚಾರ ದಟ್ಟಣೆ ಜಾಸ್ತಿಯಾಗುತ್ತದೆ" ಎಂದು ನಿಯೋಗದ ನೇತೃತ್ವ ವಹಿಸಿದ್ದ ಸಿ.ಪಿ.ಐ.(ಎಂ.) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ರೈಲ್ವೆ ಅಧಿಕಾರಿಗಳಿಗೆ ಮನವರಿಕೆ ಮಾಡಿದರು. ಸೂಕ್ತವಾಗಿ ಪರಿಶೀಲಿಸುವುದಾಗಿ ಅಧಿಕಾರಿಗಳು ಭರವಸೆ ನೀಡಿದರು.

ಬೆಂಗಳೂರಿಗೆ ಹೋಗುವ ಖಾಸಗಿ ಮತ್ತು ಸರಕಾರಿ ಬಸ್ಸುಗಳು ವಿಪರೀತ ದರ ಏರಿಕೆ ಮಾಡಿರುವ ಹಿನ್ನೆಲೆಯಲ್ಲಿ ಹಾಗೂ ಹಬ್ಬ ಮತ್ತು ರಜಾದಿನಗಳಲ್ಲಿ ಇನ್ನಷ್ಟು ದರ ಹೆಚ್ಚಿಸುವ ನೀತಿಯ ವಿರುದ್ಧ ಜನ ಆಕ್ರೋಶಗೊಂಡಿದ್ದಾರೆ. ಜುಲೈ 10ರಂದು ಸರಕಾರಿ ಬಸ್ಸುಗಳಲ್ಲಿಯೂ ದರ ಜಾಸ್ತಿ ಮಾಡಿದ್ದರಿಂದಲೇ ಪ್ರಯಾಣದ ಅವಧಿ ಕಡಿಮೆ ಮಾಡುವ ಮನವಿಗೆ ಜನರು ಸಹಿ ಹಾಕಿ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿರುತ್ತಾರೆ.

ಈ ನಿಟ್ಟಿನಲ್ಲಿ ರೈಲ್ವೆ ಅಧಿಕಾರಿಗಳು ಕ್ರಮಕೈಗೊಳ್ಳದೇ ಹೋದಲ್ಲಿ ಜಿಲ್ಲೆಯಲ್ಲಿ ಉಗ್ರವಾದ ಚಳುವಳಿ ಹಮ್ಮಿಕೊಳ್ಳಬೇಕೆಂದು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ನಿರ್ಧರಿಸಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.350.00
ದ್ವೈವಾರ್ಷಿಕ ಚಂದಾ : ರೂ.700.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.50/5, 2ನೇ 'ಬಿ' ಮ್ಯೆನ್, 16ನೇ ಕ್ರಾಸ್,
ಸಂಪಂಗಿರಾಮನಗರ, ಬೆಂಗಳೂರು 560027
ಕಛೇರಿ ದೂರವಾಣಿ : 080-22234369
ಫೋನ್ : 9448578021, 9483966467

ಸೌಹಾರ್ದತೆಗಾಗಿ ಗಾಳಿಪಟ ಉತ್ಸವ



ಕೋಲಾರ ಜಿಲ್ಲೆಯ ಕೆಜಿಎಫ್ ಘಟಕದ ಆಶ್ರಯದಲ್ಲಿ "ಸಮುದಾಯ-35 ಸಾಮರಸ್ಯ ಜನಸಂಸ್ಕೃತಿ ಉತ್ಸವ"ದ ಅಂಗವಾಗಿ "ಸೌಹಾರ್ದತೆಗಾಗಿ ಗಾಳಿಪಟ ಉತ್ಸವ"(9ನೇ ವರ್ಷ) ಬೆಮೆಲ್ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿತ್ತು. ಜುಲೈ 10ರ ಭಾನುವಾರದಂದು ಹಮ್ಮಿಕೊಂಡಿದ್ದ ಉತ್ಸವವನ್ನು ಉದ್ಘಾಟನೆ ಬೆಮೆಲ್ ಕಾರ್ಖಾನೆಯ ಪ್ರಧಾನ ವ್ಯವಸ್ಥಾಪಕರು ಹಾಗೂ ಸ್ಥಳೀಯ ಕನ್ನಡಮಿತ್ರರು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಉಮಾಶಂಕರ ದೇವಪ್ಪ ನವರು ಗಾಳಿಪಟ ಹಾರಿಸಿವ ಮೂಲಕ ನೆರವೇರಿಸಿದರು.

ಅವರು ಮಾತನಾಡುತ್ತಾ ಜನಪದ ಕಲೆಗಳು ನಶಿಸಿ ಹೋಗುತ್ತಿರುವಂತಹ ಈ ಸಂಧರ್ಭದಲ್ಲಿ ಸಮುದಾಯ ಸಂಘಟನೆ ಈ ಕಲೆಗಳ ಉಳಿವಿಗಾಗಿ ಇಂತಹ ಉತ್ಸವಗಳನ್ನು ಅತ್ಯಂತ ಯಶಸ್ವಿಯಾಗಿ ಆಯೋಜಿಸಿರುವುದಕ್ಕೆ ಅತೀವ ಸಂತಸವನ್ನು ವ್ಯಕ್ತಪಡಿಸಿದರು, ಹಾಗೆಯೇ ತಮ್ಮ ಬಾಲ್ಯದ ನೆನಪುಗಳ ಬುತ್ತಿಯನ್ನು ಬಿಚ್ಚಿ ಶಾಲಾ ದಿನಗಳಲ್ಲಿ ಬಣ್ಣ-ಬಣ್ಣದ ಗಾಳಿಪಟವನ್ನು ಹಾರಿಸಿ ಸಂಭ್ರಮಿಸುತ್ತಿದ್ದ ದಿನಗಳನ್ನು ಹಂಚಿಕೊಂಡರು.

ಸಮುದಾಯ ಕೆಜಿಎಫ್ ಘಟಕವು ಕಳೆದ ಎಂಟು ವರ್ಷಗಳಿಂದ ಈ ಉತ್ಸವವನ್ನು ನಡೆಸಿಕೊಂಡು ಬರುತ್ತಿದೆ. ಆರಂಭದಿಂದ ಹಿಡಿದು ಇಂದಿನವರೆಗೂ ಕೂಡ ಪ್ರತಿವರ್ಷ ಸಮಾಜದ ಎಲ್ಲಾ ವರ್ಗದ ಜನರನ್ನು ಹೆಚ್ಚು ಆಕರ್ಷಕವಾಗಿ ಸೆಳೆಯುತ್ತಿರುವುದು ನಿಜಕ್ಕೂ ಸ್ಮರಣಾರ್ಹವಾಗಿದೆ. ಜಾತಿ-ಮತ-ಪಂಥ ಎಂಬ ಯಾವುದೇ ಭೇದವಿಲ್ಲದೆ ಜನರು ಪಾಲ್ಗೊಳ್ಳುತ್ತಿದ್ದಾರೆ. ಆಷಾಡದ ಗಾಳಿಗೆ ಪಟ ಹಾರಿ ಬಿಡಲು ದೊಡ್ಡವರು ಪ್ರಯಾಸ ಪಡುತ್ತಿದ್ದರೆ, ಜೋರಾಗಿ ಬೀಸುವ ಗಾಳಿಗೆ ತಮ್ಮ ಗಾಳಿಪಟವನ್ನು ಮೇಲಕ್ಕೇರಿಸಲು ಚಿಣ್ಣರು ಪಡುತ್ತಿದ್ದ ಪಾಡು ಎಲ್ಲರಿಗೂ ಮುದನೀಡುವಂತಿತ್ತು. ಪೋಷಕರು ತಮ್ಮ ಬಾಲ್ಯದ ನೆನಪುಗಳನ್ನು ಮಕ್ಕಳೊಂದಿಗೆ ಹಂಚಿಕೊಳ್ಳುತ್ತಿದ್ದರು.

ಈ ಉತ್ಸವದಲ್ಲಿ ರಾಜ್ಯ ಸಮುದಾಯದ ಉಪಾಧ್ಯಕ್ಷರಾದ ಶ್ರೀ ಅಚ್ಯುತ ಸೇರಿದಂತೆ ಎಲ್ಲಾ ಕಾರ್ಯಕಾರಿ ಸಮಿತಿಯ ಸದಸ್ಯರು ಪಾಲ್ಗೊಂಡಿದ್ದರು. ಗಾಳಿಪಟದ ತಯಾರಿಯನ್ನು ಶ್ರೀ ಆರ್.ಡಿ.ಅಲಿಕ್ ರವರ ನೇತೃತ್ವದಲ್ಲಿ ನಡೆಯಿತು. ಉತ್ಸವದ ಅಧ್ಯಕ್ಷತೆಯನ್ನು ಘಟಕದ ಅಧ್ಯಕ್ಷರಾದ ಶ್ರೀ ಜಗದೀಶ್ ನಾಯಕ್ ವಹಿಸಿದ್ದರು, ಕಾರ್ಯದರ್ಶಿ ಶ್ರೀ ಜನಾರ್ಧನ ನಿರೂಪಿಸಿದರು.

ವರದಿ: ಜನಾರ್ಧನ

ಜುಲೈ 20 ರಂದು ಹಮಾಲಿ ಕಾರ್ಮಿಕರಿಂದ ಸಚಿವರು ಹಾಗೂ ಶಾಸಕರ ಮನೆ ಮುಂದೆ ಪ್ರತಿಭಟನೆ

ರಾಜ್ಯದಲ್ಲಿರುವ ಅತ್ಯಂತ ಅಸಂಘಟಿತ ಕಾರ್ಮಿಕ ವಿಭಾಗವಾದ ಹಮಾಲರು ಸೇರಿದಂತೆ ಇತರೆ ವಿಭಾಗಗಳಿಗೆ ಸಾಮಾಜಿಕ ಹಾಗೂ ಆರ್ಥಿಕ ಭದ್ರತೆ ಒದಗಿಸುವ ದೃಷ್ಟಿಯಿಂದ ರಾಜ್ಯದ ಕಾರ್ಮಿಕ ಇಲಾಖೆಯು ಪಶ್ಚಿಮ ಬಂಗಾಳ ಮಾದರಿಯಲ್ಲಿ 'ಭವಿಷ್ಯನಿಧಿ' ಯೋಜನೆ ಕುರಿತಾದ ಕರಡನ್ನು ಸಿದ್ದಪಡಿಸಿ ಸರಕಾರಕ್ಕೆ ಸಲ್ಲಿಸಿದೆ. ರಟ್ಟೆಯ ಬಿಟ್ಟರೆ ಆಸ್ತಿಯೇ ಇಲ್ಲದ ಬಡವರಾದ ಹಾಗೂ ವ್ಯಾಪಾರ ವಹಿವಾಟಿನಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುವ ಈ ಶ್ರಮಜೀವಿಗಳಿಗೆ ಇಂತಹದೊಂದು ಯೋಜನೆ ರೂಪಿಸಬೇಕು ಎಂಬುದು ಬಹುದಿನದ ಬೇಡಿಕೆ-ಯಾಗಿತ್ತು.

ಆದ್ದರಿಂದ ಕೂಡಲೇ ರಾಜ್ಯ ಸಚಿವ ಸಂಪುಟದಲ್ಲಿ ಕಾರ್ಮಿಕ ಇಲಾಖೆ ಸಿದ್ದಪಡಿಸಿರುವ ಅ ಕರಡನ್ನು ಚರ್ಚಿಸಬೇಕು ಮತ್ತು ಕೂಡಲೇ ವಿಧಾನಸಭೆಯ ಉಭಯ ಸದನಗಳಲ್ಲಿ ಅದನ್ನು ಮಸೂದೆಯಾಗಿ ಮಂಡಿಸಿ ಅಂಗೀಕರಿಸಬೇಕು ಎಂದು ಆಗ್ರಹಿಸಿ ಜುಲೈ 20 ರಂದು ರಾಜ್ಯ ಸರಕಾರದ ಸಚಿವರು ಮತ್ತು ಶಾಸಕರ ಮನೆಗಳ ಮುಂದೆ ಹಮಾಲಿ ಕಾರ್ಮಿಕರ ಪ್ರತಿಭಟನೆಗಳನ್ನು ನಡೆಸಲು ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್ (ರಿ) ತೀರ್ಮಾನಿಸಿದೆ ಎಂದು ರಾಜ್ಯ ಅಧ್ಯಕ್ಷರಾದ ಕೆ.ಮಹಾಂತೇಶ್ ತಿಳಿಸಿದ್ದಾರೆ.

ಹಲವು ರಾಜ್ಯಗಳಲ್ಲಿ ಕಲ್ಯಾಣ ಕಾರ್ಯಕ್ರಮಗಳು:

ಹಮಾಲಿ ಕಾರ್ಮಿಕರ ಕುರಿತಾಗಿ ಮುಖ್ಯವಾಗಿ ಕೇರಳ, ತಮಿಳುನಾಡು, ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಅಲ್ಲಿನ ಸರಕಾರಗಳು ಕಲ್ಯಾಣ ಕಾನೂನುಗಳನ್ನು ರೂಪಿಸಿದೆ. ಆದರೆ ಕರ್ನಾಟಕದಲ್ಲಿ ಇಂತಹ ಯಾವುದೇ ಕಾರ್ಯಕ್ರಮ ರೂಪಿಸಿಲ್ಲ. 2009 ರಲ್ಲಿ ಕಾರ್ಮಿಕರ ಹೋರಾಟದ ಪರಿಣಾಮವಾಗಿ 'ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ' ರಚನೆಯಾಗಿದ್ದರೂ ಅದಕ್ಕೆ ರಾಜ್ಯ ಮತ್ತು ಕೇಂದ್ರ ಸರಕಾರಗಳು ಅಗತ್ಯವಿರುವ ಅನುದಾನವನ್ನು ನೀಡದ ಕಾರಣ ಮಂಡಳಿ ರೂಪಿಸಿದ ಕಾರ್ಯಕ್ರಮಗಳನ್ನು ಜಾರಿ ಮಾಡಲು ಸಾಧ್ಯವಾಗಿಲ್ಲ ಎಂಬುದು ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ ರವರ ಆರೋಪಿಸಿದ್ದಾರೆ.

ರಾಜ್ಯದಲ್ಲಿ 'ಭವಿಷ್ಯನಿಧಿ' ಕರಡು ಸಿದ್ದಗೊಂಡಿದೆ

2014 ರ ಮೇ 29 ಹಾಗೂ 30 ರಂದು ಬೆಂಗಳೂರಿನಲ್ಲಿ ರಾಜ್ಯದ ಕಾರ್ಮಿಕ ಇಲಾಖೆಯು ಆಯೋಜಿಸಲಾಗಿದ್ದ ಎರಡು ದಿನಗಳ ಕಾರ್ಮಿಕ ಸಂಘಗಳ ಸಮಾಲೋಚನಾ ಸಭೆಯಲ್ಲಿ ಸರಕಾರವೇ ರಾಜ್ಯದ ಅಸಂಘಟಿತ ಕಾರ್ಮಿಕರಿಗೆ ಪಶ್ಚಿಮ ಬಂಗಾಳದ ಮಾದರಿಯಲ್ಲಿ ಭವಿಷ್ಯನಿಧಿ ಯೋಜನೆ ಜಾರಿ ಮಾಡಬೇಕೆಂಬ ನಿರ್ಣಯ ಕೈಗೊಳ್ಳಲಾಗಿತ್ತು. ಅದರಂತೆ ಈ ವಿಷಯವಾಗಿ ಆಸಕ್ತಿವಹಿಸಿದ ಕಾರ್ಮಿಕ ಸಚಿವಾಲಯವು ಮಾನ್ಯ ಕಾರ್ಮಿಕ ಆಯುಕ್ತರ ನೇತೃತ್ವದಲ್ಲಿ ಪಶ್ಚಿಮ ಬಂಗಾಳಕ್ಕೆ ಪ್ರವಾಸ ಕೈಗೊಂಡು ಈ ಬಗ್ಗೆ ಅಧ್ಯಯನ ನಡೆಸಿ ರಾಜ್ಯದ ಅಸಂಘಟಿತ ಕಾರ್ಮಿಕರಿಗಾಗಿ ಸರಕಾರ ಮತ್ತು ಕಾರ್ಮಿಕರ ವಂತಿಗೆಯನ್ನು ಒಳಗೊಂಡು 'ಭವಿಷ್ಯನಿಧಿ' ಕರಡನ್ನು ಸಿದ್ದಗೊಳಿಸಿ ಸರಕಾರಕ್ಕೆ ಸಲ್ಲಿಸಿದೆ.

ಅದರ ಪ್ರಕಾರ ಒಬ್ಬ ಕಾರ್ಮಿಕ 18 ನೇ ವಯಸ್ಸಿಗೆ (ಕಾರ್ಮಿಕ ಮಾಸಿಕ ರೂ. 50+ ಸರಕಾರ ಮಾಸಿಕ ರೂ.50)ಹಣವನ್ನು ವಂತಿಗೆಯಾಗಿ ನೀಡಿ ಸೇರ್ಪಡೆಗೊಂಡರೆ ಅವನು/ಳು 60 ವರ್ಷದ ನಿವೃತ್ತಿ ವೇಳೆಗೆ ವಾರ್ಷಿಕ ಸರಾಸರಿ 8% ಬಡ್ಡಿ ಸೇರಿ ಒಟ್ಟು 4,27,139.57 (ನಾಲ್ಕು ಲಕ್ಷದ ಇಪ್ಪತ್ತೇಳು ಸಾವಿರದ ನೂರಾ ಮುವತ್ತೊಂಬತ್ತು) ರುಪಾಯಿಗಳನ್ನು ಭವಿಷ್ಯನಿಧಿಯಾಗಿ ಪಡೆಯಲಿದ್ದಾನೆ/ಳೆ. ಈ ಯೋಜನೆ ಜಾರಿಯಾದರೆ ರಾಜ್ಯದ ಅಸಂಘಟಿತ ಕಾರ್ಮಿಕ ಪಾಲಿಗೆ ಭವಿಷ್ಯದ 'ಸಂಜೀವಿನಿ'ಯಾಗಲಿದೆ ಮಾತ್ರವಲ್ಲ ಇದು ರಾಜ್ಯದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿರುವ ಶ್ರಮಜೀವಿ ಹಮಾಲಿ ಕಾರ್ಮಿಕರಿಗೆ ಮತ್ತು ಇತರೆ ಅಸಂಘಟಿತರ ಪಾಲಿಗೆ ವರದಾನವಾಗಲಿದೆ.

ರಾಜ್ಯದಲ್ಲಿರುವ ಹಮಾಲಿ ಕಾರ್ಮಿಕರು, ಆಟೋ ಚಾಲಕರು ಹಾಗೂ ಮನೆ ಕೆಲಸ ಮಾಡುವ ಕಾರ್ಮಿಕರಿಗೆ ಮೊದಲ ಹಂತದಲ್ಲಿ ನೊಂದಣಿ ಮಾಡಿಸಿ (ಸುಮಾರು 1.5 ಲಕ್ಷ ಕಾರ್ಮಿಕರು) ಇದೇ ವರ್ಷ(2016-17) ಜಾರಿ ಮಾಡಿದರೆ ಅದಕ್ಕೆ ರೂ 25 ಕೋಟಿ ಅನುದಾನ ಬೇಕಾಗುತ್ತದೆ ಎಂದು ಕಾರ್ಮಿಕ ಇಲಾಖೆ ಸರಕಾರಕ್ಕೆ ಸಲ್ಲಿಸಲಾದ ವರದಿಯಲ್ಲಿ ಹೇಳಲಾಗಿತ್ತು. ಅಲ್ಲದೆ ಇದಕ್ಕೆ ಕೇಂದ್ರ ಸರಕಾರ ನೀಡುವ ಅನುದಾನವನ್ನು ಬಳಸಿಕೊಳ್ಳಬಹುದೆಂದು ಪ್ರಸ್ತಾಪಿಸಲಾಗಿತ್ತು. ಆದರೂ ಈ ಬಾರಿ ರಾಜ್ಯ ಸರಕಾರ ಅದನ್ನು ಅಂಗೀಕರಿಸುವ ಪ್ರಯತ್ನ ಮುಂದಾಗಿಲ್ಲ. ಈ ಹಿನ್ನಲೆಯಲ್ಲಿ ಜುಲೈ 3 ರಂದು ಬೆಂಗಳೂರು ಎಪಿಎಂಸಿ ಶ್ರಮಿಕರ ಭವನದಲ್ಲಿ ನಡೆದ ಹಮಾಲಿ ಕಾರ್ಮಿಕರ ರಾಜ್ಯ ಮಟ್ಟದ ಸಭೆಯಲ್ಲಿ ರಾಜ್ಯದ್ಯಾಂತ ಚಳವಳಿ ರೂಪಿಸಲು ನಿರ್ಧರಿಸಿದೆ.

ಶಾಂತಿ ಕದಡುವ ಕಿಡಿಗೇಡಿಗಳನ್ನು ಬಂಧಿಸಿ: ಸಿಪಿಐ(ಎಂ) ಆಗ್ರಹ

ತುಮಕೂರಿನ ಶಿರಾಗೇಟ್ ಹತ್ತಿರ ಇರುವ ಯೂನಿಯನ್ ಕ್ರಿಶ್ಚಿಯನ್ ಕಾಲೇಜು ಆವರಣದಲ್ಲಿನ ಟಾಮ್ಲಿನ್‌ಸನ್ ಚರ್ಚ್ ಮುಖ್ಯದ್ವಾರಕ್ಕೆ ಕಿಡಿಗೇಡಿಗಳು ಪೆಟ್ರೋಲ್ ಬಾಂಬ್ ಎಸೆದ ಘಟನೆ ಜುಲೈ 14ರ ಬೆಳಗಿನ ಜಾವ ನಡೆದಿದೆ. ಚರ್ಚ್ ಮೇಲಿನ ದಾಳಿಯನ್ನು ಸಿಪಿಐ(ಎಂ) ತುಮಕೂರು ಜಿಲ್ಲಾ ಸಮಿತಿ ಖಂಡಿಸಿದೆ.

ಸಮಾಜದಲ್ಲಿ ಶಾಂತಿಯನ್ನು ಕದಡುವ ಕಿಡಿಗೇಡಿಗಳ ಈ ಕೃತ್ಯವು ಜನರಲ್ಲಿ ಅಶಾಂತಿ ಮೂಡಿಸುವ ಹಾಗೂ ನೈಜಾ ಸಮಸ್ಯೆಗಳಿಂದ ಜನರ ಗಮನ ಬೇರೆಡೆಗೆ ಸೆಳೆಯುವ ಕುತಂತ್ರವಾಗಿದೆ ಎಂಬ ಅನುಮಾನ ವ್ಯಕ್ತಪಡಿಸಿರುವ ಸಿಪಿಐ(ಎಂ) ಈ ಘಟನೆ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಲು ಆಗ್ರಹಿಸಿದೆ. ಈ ಕೂಡಲೇ ಈ ಕೃತ್ಯದಲ್ಲಿ ತೊಡಗಿರುವವರನ್ನು ಪತ್ತೆ ಹಚ್ಚಿ ಬಂಧಿಸುವಂತೆ ಒತ್ತಾಯಿಸಿದೆ.

ತುಮಕೂರಿನ ಜನತೆ ವಿಭಜನಕಾರಿ ಈ ರೀತಿಯ ಕೆಲಸಗಳಿಗೆ ವಿಚಲಿತರಾಗದೆ ಶಾಂತಿ ಸೌಹಾರ್ದ ಹಾಗೂ ಸಹಬಾಳ್ವೆಗೆ ಗಮನ ನೀಡಲು ವಿನಂತಿಸುತ್ತದೆ ಎಂದು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ.ಉಮೇಶ್, ನಗರ ಕಾರ್ಯದರ್ಶಿ ಎಸ್. ರಾಘವೇಂದ್ರರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೀಡಿ ಕಾರ್ಮಿಕರಿಗೆ ಗುರುತಿನ ಚೀಟಿ ನೀಡಲು ತೆಂಕಮಿಜಾರು ಗ್ರಾಮ ಪಂಚಾಯತು ಎದುರು ಪ್ರಚಾರಾಂದೋಲನ

ಬೀಡಿ ಕಾರ್ಮಿಕರನ್ನು ಗುರುತಿಸಿ ಅವರಿಗೆ ಅಧಿಕೃತ ಗುರುತು ಚೀಟಿ ನೀಡಬೇಕೆಂದು ಜುಲಾಯಿ 12ರಂದು ತೆಂಕಮಿಜಾರು ಗ್ರಾಮ ಪಂಚಾಯತ್ ಎದುರು ಪ್ರಚಾರಾಂದೋಲನ ಸಭೆ ನಡೆಸಲಾಯಿತು.

ತೆಂಕಮಿಜಾರು ಮತ್ತು ಬಡಗ ಮಿಜಾರು ಗ್ರಾಮಗಳ ವ್ಯಾಪ್ತಿಯ ನೂರಾರು ಬೀಡಿ ಕಾರ್ಮಿಕರು ಮೂಡಬಿದ್ರೆ ಬೀಡಿ ಕಾರ್ಮಿಕರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಗ್ರಾಮ ಪಂಚಾಯತ್ ಅಧಿಕೃತ ಗುರುತು ಚೀಟಿ ನೀಡದಿರುವ ಬಗ್ಗೆ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ಮೂಡಬಿದರೆ ಬೀಡಿ ಸಂಘದ ಅಧ್ಯಕ್ಷೆ ರಮಣಿ ಮೂಡಬಿದರೆ, ಮುಖಂಡರಾದ ಗಿರಿಜ, ಗುರುಪುರ ವಲಯ ಬೀಡಿ ಕಾರ್ಮಿಕ ಯೂನಿಯನ್ ಮುಖಂಡ ಸದಾಶಿವದಾಸ್, ಮೂಡಬಿದರೆ ಕಟ್ಟಡ ಕಾರ್ಮಿಕ ಸಂಘಟನೆಯ ಮುಖಂಡರಾದ ಶಂಕರ ವಾಲ್ಪಾಡಿ, ಸೀತಾರಾಮ ಶೆಟ್ಟಿ ಸಭೆಯಲ್ಲಿ ಭಾಗವಹಿಸಿದ್ದರು.


ಈ ವಾರ ಚರಿತ್ರೆಯಲ್ಲಿ

18 ಜುಲೈ 1918

ನೆಲ್ಸನ್ ಮಂಡೇಲಾ ಜನ್ಮದಿನ




ಪ್ರಖ್ಯಾತ ವರ್ಣದ್ವೇಷ-ವಿರೋಧಿ, ಜನಾಂಗ-ದ್ವೇಷ ವಿರೋಧಿ ಕ್ರಾಂತಿಕಾರಿ ಹೋರಾಟಗಾರ, ವರ್ಣದ್ವೇಷದಿಂದ ವಿಮೋಚನೆಗೊಂಡ ದಕ್ಷಿಣ ಆಫ್ರಿಕಾದ ಮೊದಲ ರಾಷ್ಟ್ರಾಧ್ಯಕ್ಷರು (1994-1999).



– ರಾಜೇಂದ್ರ ಚೆನ್ನಿ

ಬರಹಗಾರನ ಪುನರ್ಜನ್ಮ

"ಈ ಬರಹಗಾರನಿಗೆ ಪುನರ್‌ಜನ್ಮ ನೀಡಿ ಅವನು ತಾನು ಯಾವುದನ್ನು ಸಮರ್ಥವಾಗಿ ಮಾಡಬಲ್ಲನೋ, ಅಂದರೆ ಬರೆಯುವುದನ್ನು, ಅವನು ಮಾಡುವಂತಾಗಲಿ" ಎಂದು ಮದ್ರಾಸ್ ಹೈಕೋರ್ಟ್ ತೀರ್ಪಿತ್ತಿದೆ. ಈ ತೀರ್ಪನ್ನು ಓದಿದ ಪೆರುಮಾಳ್ 'ನಾನು ಮತ್ತೆ ಬರೆಯುತ್ತೇನೆ' ಎಂದು ಹೇಳಿದರೆಂದು ಸುದ್ದಿ ಬಂದಿದೆ. ಆದರೆ ಅವರು ಬರೆಯುವುದರಿಂದ Law and Order ಸಮಸ್ಯೆ ಉಂಟಾಗಬಹುದೆಂದು ಸರಕಾರವು ಮತ್ತೆ "ಶಾಂತಿ ಸಂಧಾನ"ದಲ್ಲಿ ತೊಡಗಬಹುದೇ?



ಇತ್ತೀಚೆಗೆ ಒಂದು ಅಪರೂಪದ ತೀರ್ಪು ಭಾರತದ ಸಾಹಿತ್ಯವಲಯದಲ್ಲಿ ನಾಗರೀಕ ಸಮುದಾಯದಲ್ಲಿ ಸಂಚಲನವನ್ನು ಉಂಟು ಮಾಡಿದೆ. ಜೊತೆಗೆ ಒಂದಿಷ್ಟು ಭರವಸೆಯನ್ನು ಹುಟ್ಟಿಸಿದೆ– ಅದೂ ಈ ನಿರಾಸೆಯ ಕಾಲದಲ್ಲಿ.

ತಮಿಳು ಬರಹಗಾರ ಪೆರುಮಾಳ್ ಅವರು ತಮ್ಮ ಒಂದು ಕಾದಂಬರಿಯಲ್ಲಿ ಅವರ ಪ್ರಾಂತ ಹಾಗೂ ಊರಿನಲ್ಲಿ ನಡೆಯುವ ಒಂದು ಆಚರಣೆಯನ್ನು ವರ್ಣಿಸಿದ್ದರು. ಇದು ಪ್ರಕಟವಾಗಿ ಆನಂತರ ಇಂಗ್ಲಿಷ್‌ಗೆ ಅನುವಾದಗೊಂಡು ವರ್ಷಗಳ ನಂತರ ಈ ವರ್ಣನೆಯು ಸ್ಥಳೀಯ ಸಂಸ್ಕೃತಿ ಹಾಗೂ ಮಹಿಳೆಯರಿಗೆ ಅವಮಾನಕರವಾಗಿದೆಯೆಂದು ವಿವಾದವನ್ನು ಸೃಷ್ಟಿಸಿ ಅದು ಇತ್ತೀಚಿನ ವರ್ಷಗಳಲ್ಲಿ ತಪ್ಪದೇ ಆಗುತ್ತಿರುವಂತೆ ಹಿಂಸಾಪರವಾದ ಸ್ವರೂಪವನ್ನು ಪಡೆದುಕೊಂಡಿತು. ಇದು ನಮ್ಮ ದೇಶದಲ್ಲಿ ಮತ್ತೆ ಮತ್ತೆ ಅಭಿನಯಿಸಲಾಗುತ್ತಿರುವ ಒಂದು ಅಸಂಗತ ದೃಶ್ಯ– ಫರಕು ಇಷ್ಟೆ. ಅದರ ಪರಿಣಾಮಗಳು ಮಾತ್ರ ಅಸಂಗತವಾಗಿರುವುದಿಲ್ಲ. ಅಪಾರ ನೋವು ಹಾಗೂ ವೈಯಕ್ತಿಕ ಸಂಕಷ್ಟಗಳನ್ನು ಅವು ತರುತ್ತವೆ.

ಈ ಅಸಂಗತ ದೃಶ್ಯವೆಂದರೆ ವಿವಾದಿತ ಕೃತಿ ಹೊಸದಾದ ಕೃತಿ ಆಗಿರುವುದಿಲ್ಲ. ಅನೇಕ ಸಾರಿ ಅನೇಕ ವರ್ಷಗಳವರೆಗೆ ಓದುಗರಿಂದ ಓದಿಸಿಕೊಂಡು ಮನ್ನಣೆ ಪಡೆದಿರುತ್ತವೆ. ವಿಶೇಷವೆಂದರೆ ಈ ನೂರಾರು ಓದುಗರಿಗೆ ಈ ಕೃತಿಯಿಂದ ಯಾವುದೇ "ಧಾರ್ಮಿಕ ಭಾವನೆಗಳಿಗೆ ನೋವು" ಆಗಿರುವುದಿಲ್ಲ. ಅದು ಯಾವುದೋ ಸಮಾಜ ಅಥವಾ ಸಂಸ್ಕೃತಿಗೆ ಅವಮಾನಕರವೆಂದು ಕಂಡು ಬಂದಿರುವುದಿಲ್ಲ. ವರ್ಷಗಳ ನಂತರ ಹೀಗೆ ಹಠಾತ್ತನೆ ಯಾವುದೋ ಒಂದು ಸಂಘಟನೆಯು ತನ್ನನ್ನು ಧರ್ಮ ಅಥವಾ ಸಂಸ್ಕೃತಿಯ ಪ್ರತಿನಿಧಿಯೆಂದು ತಾನೇ ಘೋಷಿಸಿಕೊಂಡು, ತಕರಾರು ಮಾಡತೊಡಗುತ್ತದೆ. ಅದು ಹಿಂಸೆಯ ಮೂಲಕ, ಅಂದರೆ ಮೊದಲು ಶಾಬ್ದಿಕ ಹಿಂಸೆಯ ಮೂಲಕ, ಅಂದರೆ ಬೈಗುಳ, ಬೆದರಿಕೆ, ಅಶ್ಲೀಲ ಮಾತುಗಳ ಮೂಲಕ ತನ್ನ ಅಭಿಪ್ರಾಯವನ್ನೂ ವ್ಯಕ್ತಪಡಿಸುತ್ತದೆ. ಇದರ ಮುಂದುವರಿಕೆಯಾಗಿ ದೈಹಿಕ ಹಿಂಸೆಯಲ್ಲೂ ತೆ–ಊಡಗುತ್ತದೆ. ನಮ್ಮ ರಾಜಕೀಯ ಸಂದರ್ಭದ ವಿಶೇಷತೆಯೆಂದರೆ ನಮ್ಮ ಸರಕಾರಗಳು ಇದನ್ನು ತಕ್ಷಣವೇ ಗಂಭೀರವಾಗಿ ಪರಿಗಣಿಸತೊಡಗುತ್ತವೆ. ಇದು ನಮ್ಮ ಕಾನೂನು ಹಾಗೂ ಸಂವಿಧಾನದ ಅನುಗುಣವಾಗಿದೆಯೆ ಎನ್ನುವುದನ್ನು ಪ್ರಶ್ನಿಸುವುದೇ ಇಲ್ಲ. ಉದಾಹರಣೆಗೆ ನಾನು ಲಿಂಗಾಯತ ಜಾತಿಯಲ್ಲಿ ಹುಟ್ಟಿದ್ದರೆ, ಯಾವುದೋ ಒಂದು ಸಂಘಟನೆಯು, ಒಂದು ಕೃತಿಯು ಲಿಂಗಾಯತ ಸಮುದಾಯದ ಭಾವನೆಗಳಿಗೆ ನೋವುಂಟು ಮಾಡುತ್ತವೆಯೆಂದರೆ ಮತ್ತು ನಾನು ಅದು ಸತ್ಯವಲ್ಲವೆಂದರೆ ಆ ಸಂಘಟನೆಯ ಅಭಿಪ್ರಾಯವನ್ನು ಸರಕಾರವು ಏಕೆ ನ್ಯಾಯಬದ್ಧವೆಂದು ಪರಿಗಣಿಸುತ್ತದೆ? ನನ್ನ ಮಾತನ್ನೇಕಲ್ಲ? ಆ ಸಂಘಟನೆಯು ಯಾವ ಆಧಾರದ ಮೇಲೆ ಒಂದು ಸಮುದಾಯದ ಅಭಿಪ್ರಾಯವನ್ನು ಪ್ರತಿನಿಧಿಸುವ ಅಧಿಕಾರವನ್ನು ಪಡೆದಿರುತ್ತದೆ? ಸಂವಿಧಾನದ ಈ ಪ್ರಶ್ನೆಗಳನ್ನು ಕೇಳುವ ಮೊದಲೇ ಸರಕಾರವು ಇಡೀ ಪ್ರಸಂಗವನ್ನು Law and Order ಸಮಸ್ಯೆಯಾಗಿ ಪರಿವರ್ತಿಸಿಕೊಂಡು ಬಿಡುತ್ತದೆ. ಭಾರತದ ಅತ್ಯಂತ ಸಂವಿಧಾನ ವಿರೋಧೀ ಕೆಲಸಗಳನ್ನು ಸರಕಾರಗಳು Law and Order ನೆಪದಲ್ಲಿ ನೆರವೇರಿಸುತ್ತವೆ. ಉದಾಹರಣೆಗೆ ಇತ್ತೀಚೆಗೆ ಕರ್ನಾಟಕದ ಅನೇಕ ಊರುಗಳಲ್ಲಿ ದಲಿತರ ದೇವಾಲಯ ಪ್ರವೇಶ ನಿಷೇಧಿಸುವ, ಅವರ ಮೇಲೆ ಸಾಮಾಜಿಕ ಬಹಿಷ್ಕಾರ ಹೇರುವ ಕೆಲಸಗಳು ನಡೆದವು. ಈ ಕೆಲಸಗಳು ನಮ್ಮ ಸಂವಿಧಾನ ಹಾಗೂ ಕಾನೂನಿನ ವಿರುದ್ಧವಾಗಿದ್ದರಿಂದ ಸರಕಾರ ಮಾಡಬೇಕಾದ ಏಕ ಮಾತ್ರ ಕೆಲಸವೆಂದರೆ ಹೀಗೆ ಮಾಡಿದವರನ್ನು ನೇರವಾಗಿ ಬಂಧಿಸಿ ಕಾನೂನಿಗೆ ಒಪ್ಪಿಸುವುದು. ಬದಲಾಗಿ ಅದು ಮಾಡುವ ಕೆಲಸವೆಂದರೆ "ಶಾಂತಿ ಹಾಗೂ ಕಾನೂನಿನ ರಕ್ಷಣೆಗಾಗಿ" ತನ್ನ ಅಧಿಕಾರಿಗಳನ್ನು ಕಳಿಸಿ ಮಾತುಕತೆಗೆ ತೊಡಗಿಸುತ್ತದೆ. ನನಗೆ ಆಶ್ಚರ್ಯವೆಂದರೆ ಕ್ರಿಮಿನಲ್‌ಗಳ ಜೊತೆಗೆ ಮಾತುಕತೆಯೆಂದರೆ ಏನು? ವಾಸ್ತವವೆಂದರೆ ಇಂಥ ಬಹಿಷ್ಕಾರವನ್ನು ಹಳ್ಳಿಗಳಲ್ಲಿ ಹೇರುವವರು ನಮ್ಮ ಪ್ರಬಲ ಹಿಂದುಳಿದ ಶೂದ್ರ ಜಾತಿಗಳವರೇ ಆಗಿರುತ್ತಾ–ರೆ. ಇವು ರಾಜಕೀಯವಾಗಿ ಪ್ರಬಲವಾಗಿರುವುದರಿಂದ ಸರಕಾರವು ಅವರ ಮೇಲೆ ಕಾನೂನ್ನು ಪ್ರಯೋಗಿಸುವುದಿಲ್ಲ. ಅಂತಿಮವಾಗಿ ದಲಿತರಿಗೆ ಆದ ಅನ್ಯಾಯಕ್ಕೆ ಪರಿಹಾರ ದೊರೆಯುವುದಿಲ್ಲ. ಇನ್ನು ಬಲಪಂಥೀಯ ಸಂಘಟನೆಗಳು ತಮ್ಮ ಸಿದ್ಧಾಂತಗಳಿಗೆ ವಿರುದ್ಧವಾಗಿರುವ ಬರಹಗಾರರು ಹಾಗೂ ಕೃತಿಗಳ ಮೇಲೆ ಬಹಿಷ್ಕಾರ ತರುವ ತಂತ್ರವನ್ನು ಬಳಸುತ್ತಲೇ ಇರುತ್ತವೆ. ಉದಾಹರಣೆಗೆ ಆಯೋಜಿಸಲಾದ ಭಾಷಣವೊಂದನ್ನು ರದ್ದುಪಡಿಸಬೇಕು, ಇಲ್ಲದಿದ್ದರೆ "ಉಗ್ರ ಪ್ರತಿಭಟನೆ" ಮಾಡುತ್ತೇವೆಂದು ಎಚ್ಚರಿಕೆ ಕೊಡುತ್ತವೆ. ಕಾರ್ಯಕ್ರಮವನ್ನು ನಿಲ್ಲಿಸುವುದಿಲ್ಲವೆಂದು ಮೊದಲು ಹೇಳುವ ಸರಕಾರಗಳು Law and Order ನ ಸಮಸ್ಯೆಯ ಹೆಸರಿನಲ್ಲಿ ಒತ್ತಡ ತಂದು ಕಾರ್ಯಕ್ರಮವನ್ನು ಆಯೋಜಿಸು ವವರೇ ಅದನ್ನು ರದ್ದುಪಡಿಸುವ ಂತೆ ಮಾಡುತ್ತವೆ. ಸರಕಾರಗಳು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸುವ ಬದಲಾಗಿ ಅದನ್ನು ದಮನಿಸ ಬಯಸುವ ಶಕ್ತಿಗಳ ಜೊತೆಗೆ ಶಾಮೀಲಾಗಿರುವುದರಿಂದಾಗಿ ಇಂದು ಭಾರತದಲ್ಲಿ ಒಂದು ಸಣ್ಣ ಗುಂಪು ಸಂವಿಧಾನಾತ್ಮಕವಾದ ಸ್ವಾತಂತ್ರ್ಯವನ್ನು ಹತ್ತಿಕ್ಕಬಹುದಾಗಿದೆ.

ಇದು ತಮಿಳು ಲೇಖಕ ಪೆರುಮಾಳ್ ಅವರ ಸಂದರ್ಭದಲ್ಲಿಯೂ ಆಯಿತು. ಜಾತಿ, ಧರ್ಮ ಹಾಗೂ ಸಂಸ್ಕೃತಿಯ ಹೆಸರಿನಲ್ಲಿ ಅವರ ಕೃತಿಯನ್ನು ಮುಟ್ಟುಗೋಲು ಹಾಕಲು ಪ್ರಯತ್ನ ನಡೆಯಿತು. ಅಷ್ಟು ಮಾತ್ರವಲ್ಲ ಅವರ ಮೇಲೆ ವೈಯಕ್ತಿಕವಾಗಿ ಅಮಾನುಷವಾದ ಮಾನಸಿಕ ಒತ್ತಡವನ್ನು ಹೇರಲಾಯಿತು. ಪೆರುಮಾಳ್ ತಮ್ಮ ಬ್ಲಾಗ್‌ನಲ್ಲಿ "ಪೆರುಮಾಳ್ ಸತ್ತಿದ್ದಾರೆ" ಎಂದು ಬರೆದು–ಕೊಂಡು, ಇನ್ನು ತಾವು ಬರೆಯುವುದಿಲ್ಲವೆಂದು ನಿರ್ಧರಿಸುವುದಾಗಿ ತಿಳಿಸಿದರು. ಇದಕ್ಕೆ ಕೇಂದ್ರ ಸರಕಾರದ ಪ್ರತಿಕ್ರಿಯೆಯೆಂದರೆ ಮಾನ್ಯ ಸಂಸ್ಕೃತಿ ಸಚಿವರು "ಬರೆಯಲಾಗದಿದ್ದರೆ ಬರೆಯುವುದು ಬೇಡ" ಎಂದು ಹೇಳಿದರು! ರಾಜ್ಯ ಸರಕಾರವು ಮಾತುಕತೆಯ ಮೂಲಕ ಪೆರುಮಾಳ್‌ರ ಮನ ಒಲಿಸಲು ಪ್ರಯತ್ನಿಸಿತು. ಅಂದರೆ ಅವರು ಕ್ಷಮೆ ಕೋರಿ, ತಮ್ಮ ಕಾದಂಬರಿಯ ಹಲವು ಭಾಗಗಳನ್ನು ಹಿಂದಕ್ಕೆ ಪಡೆಯುವಂತೆ ಮಾಡಲು ಪ್ರಯತ್ನಿಸಿತು. ಬರಹಗಾರರಾಗಿ ಅವರಿಗಿದ್ದ ಸ್ವಾತಂತ್ರ್ಯದ ಮೇಲೆ ಹಲ್ಲೆ ಮಾಡಿದವರ ವಿರುದ್ಧ ಏನನ್ನೂ ಮಾಡಲಿಲ್ಲ. ಏಕೆ–ಂದರೆ Law and Order ಸಮಸ್ಯೆ ಆಗಬಾರದಲ್ಲ!

ಈ ಘಟನೆಗಳನ್ನು ಪ್ರಶ್ನಿಸಿ ಮದ್ರಾಸ್ ಹೈಕೋರ್ಟಿಗೆ ಸಲ್ಲಿಸಲಾದ ಅರ್ಜಿಯ ಮೇಲೆ ಇತ್ತೀಚೆಗೆ ಕೋರ್ಟು ನೀಡಿದ ತೀರ್ಪಿನ ಆಭಿವ್ಯಕ್ತಿ ಸ್ವಾತಂತ್ರ್ಯದ ಪರವಾಗಿರುವ ಮಹತ್ವಪೂರ್ಣ ದಾಖಲೆಯಾಗಿದೆ. ದೀರ್ಘವಾದ ಈ ತೀರ್ಪಿನ ಭಾಗಗಳನ್ನು ಪತ್ರಿಕೆಗಳಲ್ಲಿ ಓದಿದಾಗ ಈ ತೀರ್ಪಿನ ಪಠ್ಯದ್ದೇ ಒಂದು ಶ್ರೇಷ್ಠ ಸಾಹಿತ್ಯಿಕ ಬರಹವಾಗಿದೆ ಎನ್ನಿಸಿತು. ಸಾಹಿತ್ಯ ಕೃತಿಯನ್ನು ಹೇಗೆ ಓದಬೇಕು ಎನ್ನುವುದನ್ನು ಅದು ಹೇಳಿಕೊಡುತ್ತದೆ. ಮುಖ್ಯವಾಗಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸಲಾಗದ ಸರಕಾರದ ಕ್ರಮಗಳನ್ನು ಬಲವಾಗಿ ಟೀಕಿಸುತ್ತದೆ. ತೀರ್ಪಿನ ಕೊನೆಯ ಸಾಲುಗಳು ಅದ್ಭುತವಾಗಿವೆ. ತನ್ನ ಸಾವನ್ನು ಪೆರುಮಾಳ್ ತಾವೇ ಘೋಷಿಸಿಕೊಂಡಿದ್ದನ್ನು ಗಮನದಲ್ಲಿಟ್ಟುಕೊಂಡು ಈ ತೀರ್ಪು ಹೇಳುತ್ತದೆ:

"ಈ ಬರಹಗಾರನಿಗೆ ಪುನರ್‌ಜನ್ಮ ನೀಡಿ ಅವನು ತಾನು ಯಾವುದನ್ನು ಸಮರ್ಥವಾಗಿ ಮಾಡಬಲ್ಲನೋ, ಅಂದರೆ ಬರೆಯುವುದನ್ನು, ಅವನು ಮಾಡುವಂತಾಗಲಿ". ಈ ತೀರ್ಪನ್ನು ಓದಿದ ಪೆರುಮಾಳ್ 'ನಾನು ಮತ್ತೆ ಬರೆಯುತ್ತೇನೆ' ಎಂದು ಹೇಳಿದರೆಂದು ಸುದ್ದಿ ಬಂದಿದೆ. ಆದರೆ ಅವರು ಬರೆಯುವುದರಿಂದ Law and Order ಸಮಸ್ಯೆ ಉಂಟಾಗಬಹುದೆಂದು ಸರಕಾರವು ಮತ್ತೆ "ಶಾಂತಿ ಸಂಧಾನ"ದಲ್ಲಿ ತೊಡಬಹುದೆಂಬ ಅನುಮಾನ ನನಗಿದೆ. ●

ನಾಳಿನ ಕಾರ್ಯಕ್ರಮಗಳು

ಜುಲೈ 16 ರಿಂದ 20	: ಎಸ್.ಎಫ್.ಐ. ರಾಜ್ಯ ಮಟ್ಟದ ಅಧ್ಯಯನ ಶಿಬಿರ, ಎಪಿಎಂಸಿ, ದೇವದುರ್ಗ, ರಾಯಚೂರು.
ಜುಲೈ 17	: ದಲಿತ ಹಕ್ಕುಗಳ ಸಮಿತಿ, ಕರ್ನಾಟಕ. ಬೆಂಗಳೂರು ದಕ್ಷಿಣ ಜಿಲ್ಲಾ ಸಮಾವೇಶ, ಜ್ಯೋತಿಬಸು ಭವನ, ಬಸವನಗುಡಿ, ಬೆಂಗಳೂರು.
ಜುಲೈ 17 ರಿಂದ 25	: ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ನೀಡಿರುವ ಬೆಲೆ ಏರಿಕೆ, ನಿರುದ್ಯೋಗದ ವಿರುದ್ಧ ರಾಜ್ಯದ್ಯಂತ ಪ್ರತಿಭಟನಾ ಕಾರ್ಯಾಚರಣೆ.
ಜುಲೈ 20	: ಬೇಡಿಕೆಗಳ ಈಡೇರಿಕೆಗಾಗಿ ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಹಮಾಲಿ ಫೆಡರೇಷನ್ ವತಿಯಿಂದ ರಾಜ್ಯದ ಎಲ್ಲಾ ಶಾಸಕರು ಮತ್ತು ಸಚಿವರ ಮನೆ–ಕಛೇರಿ ಮುಂಭಾಗ ಪ್ರತಿಭಟನೆ
ಜುಲೈ 21	: ಅಖಿಲ ಭಾರತ ಸಾರ್ವತ್ರಿಕ ಮುಷ್ಕರದ ಯಶಸ್ಸಿಗಾಗಿ ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ(ಕರ್ನಾಟಕ) ಸಮಾಲೋಚನಾ ಸಭೆ, ಮಧ್ಯಾಹ್ನ 03ಕ್ಕೆ, ಶಾಸಕರ ಭವನ, ಬೆಂಗಳೂರು.
ಜುಲೈ 24	:ಸ್ವಾತಂತ್ರ್ಯೋತ್ತರ ಭಾರತದಲ್ಲಿ ದಲಿತರ ಸ್ಥಿತಿಗತಿ, ರಾಷ್ಟ್ರ ಮಟ್ಟದ ವಿಚಾರ ಸಂಕಿರಣ, ಮುಖ್ಯ ಭಾಷಣ: ರಾಜ್ಯಸಭಾ ಸದಸ್ಯರಾದ ಕಾಂ.ಸೀತಾರಾಂ ಯೆಚೂರಿ, ಡಾ.ಎಂ.ಚಂದ್ರ ಪೂಜಾರಿರವರ 'ದಲಿತ ಮಾನವ ಅಭಿವೃದ್ಧಿ ಕುರಿತು' ಪುಸ್ತಕ ಬಿಡುಗಡೆ, ಅಂಬೇಡ್ಕರ್ ಭವನ, ಹಾಸನ.
ಜುಲೈ 23 ರಿಂದ 25	: ದಲಿತ ಶೋಷಣ ಮುಕ್ತಿ ಮಂಚ್ (ಡಿಎಸ್‌ಎಂಎಂ) ಅಖಿಲ ಭಾರತ ಅಧ್ಯಯನ ಶಿಬಿರ, ಅಂಬೇಡ್ಕರ್ ಭವನ, ಹಾಸನ.
ಜುಲೈ 25	: ಸರಕಾರಿ ಸಾರಿಗೆ ನೌಕರರ ಮುಷ್ಕರ
ಆಗಸ್ಟ್ 09	: ಜೆಸಿಟಿಯು ವತಿಯಿಂದ ರಾಜ್ಯ ಮಟ್ಟದ ಬೃಹತ್ ರ್‍ಯಾಲಿ, ಬೆಂಗಳೂರು.
ಆಗಸ್ಟ್ 26–28	: ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯ ಸಮ್ಮೇಳನ, ಕೋಲಾರ.
ಸೆಪ್ಟಂಬರ್ 02	: ಅಖಿಲ ಭಾರತ ಸಾರ್ವತ್ರಿಕ ಮುಷ್ಕರ

ಸಿಐಟಿಯು ಜಿಲ್ಲಾ ಸಮ್ಮೇಳನಗಳು

ಜುಲೈ 23–24	: ದಾವಣಗೆರೆ ಜಿಲ್ಲೆ	ಜುಲೈ 30	: ಯಾದಗಿರಿ ಜಿಲ್ಲೆ
ಜುಲೈ 24–25	: ಬೆಂಗಳೂರು ದಕ್ಷಿಣ ಜಿಲ್ಲೆ	ಜುಲೈ 31–ಆಗಸ್ಟ್ 01	: ಕೋಲಾರ ಜಿಲ್ಲೆ
ಜುಲೈ 29–30	: ಕಲಬುರಗಿ ಜಿಲ್ಲೆ	ಆಗಸ್ಟ್ 06–07	: ಬೆಳಗಾಂ
ಜುಲೈ 30–31	: ಉತ್ತರ ಕನ್ನಡ	ಆಗಸ್ಟ್ 6–7	: ತುಮಕೂರು ಜಿಲ್ಲೆ
ಜುಲೈ 30–31	: ಚಿತ್ರದುರ್ಗ	ಆಗಸ್ಟ್ 13–14	: ಹಾಸನ ಜಿಲ್ಲೆ

ಜಮ್ಮು-ಕಾಶ್ಮೀರ: ದಬ್ಬಾಳಿಕೆ ನಿಲ್ಲಿಸಿ, ಸಂವಾದ ಆರಂಭಿಸಿ



ಹಿಜ್ಬುಲ್ ನಾಯಕ ಬುರ್ಹಾನ್ ವಾನಿಯ ಹತ್ಯೆಯ ಹಿನ್ನೆಲೆಯಲ್ಲಿ ಕಾಶ್ಮೀರ ಕಣಿವೆಯಲ್ಲಿ ಕಳೆದೊಂದು ವಾರದಿಂದ ಹಿಂಸೆ ಭುಗಿಲೆದ್ದು ಜನಜೀವನ ಸ್ಥಗಿತಗೊಂಡಿದೆ. ಇದುವರೆಗೆ 34 ಜನರು ಹಿಂಸಾಚಾರದಲ್ಲಿ ಸತ್ತಿದ್ದಾರೆ. ಅವರಲ್ಲಿ ಹೆಚ್ಚಾಗಿ ಯುವಜನರು ಹಾಗೂ ಒಬ್ಬ ಪೊಲೀಸ್ ಸೇರಿದ್ದಾರೆ. 1400ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಕಳೆದ ಕೆಲವು ಸಮಯದಿಂದ ಕಣಿವೆಯಲ್ಲಿ ಅತೃಪ್ತಿ ಕುದಿಯುತ್ತಿತ್ತು. ಭದ್ರತಾಪಡೆಗಳ ಕೈಯಿಂದ ಮೃತಪಟ್ಟ ಉಗ್ರಗಾಮಿಗಳ ಅಂತ್ಯಸಂಸ್ಕಾರದ ವೇಳೆ ದೊಡ್ಡ ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದು ಜನರಲ್ಲಿ, ಅದರಲ್ಲೂ ಮುಖ್ಯವಾಗಿ ಯುವಜನರಲ್ಲಿ ಪರಕೀಯ ಭಾವನೆ ಎಷ್ಟೊಂದು ಹೆಚ್ಚುತ್ತಿದೆ ಎಂಬುದು ಎದ್ದು ಕಾಣಿಸುತ್ತಿತ್ತು.

ಜನಸಂದಣಿ, ಅದರಲ್ಲೂ ಕಲ್ಲು ತೂರುವ ಯುವಜನರ ಗುಂಪುಗಳನ್ನು ನಿಭಾಯಿಸುವಲ್ಲಿ ಭದ್ರತಾ ಪಡೆಗಳು 2010ರಲ್ಲಿ ಮಾಡಿದ ಮಹಾಪ್ರಮಾದವನ್ನೇ ಪುನರಾವರ್ತಿಸುತ್ತಿವೆ. ಆ ವರ್ಷ ಭದ್ರತಾ ಪಡೆಗಳ ಬರ್ಬರ ಗೋಲೀಬಾರಿನಿಂದ 120 ತರುಣರ ಸಾವುಂಟಾಗಿತ್ತು.

ಬಹುತೇಕ ಗುಂಡಿನ ಗಾಯಗಳು ಸೊಂಟಕ್ಕಿಂತ ಮೇಲೆಯೇ ಆಗಿದ್ದವು ಎಂದು ಮೃತರ ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರು ಹೇಳಿದ್ದಾರೆ. ಪೆಲೆಟ್ ಗನ್‌ಗಳ ಬಳಕೆಯಿಂದಾಗಿ ಅನೇಕ ಜನರಿಗೆ ಮುಖದಲ್ಲಿ ಗಂಭೀರ ಗಾಯಗಳಾಗಿದ್ದು ಅವರಲ್ಲಿ ಅನೇಕ ಮಂದಿ ದೃಷ್ಟಿ ಕಳೆದುಕೊಳ್ಳುವ ಸಾಧ್ಯತೆಯಿದೆ.

ಕಾಶ್ಮೀರವು ಒಂದು ಆಕ್ರಮಿತ ಪ್ರದೇಶವೇನೋ ಎನ್ನುವ ರೀತಿಯಲ್ಲಿ ಭಾರತೀಯ ಪ್ರಭುತ್ವ ಮತ್ತು ಭದ್ರತಾ ಪಡೆಗಳು ವರ್ತಿಸುತ್ತವೆ. ನಾಗರಿಕ ಪ್ರತಿಭಟನೆಕಾರರನ್ನು ಕೂಡ ಸಶಸ್ತ್ರ ಉಗ್ರಗಾಮಿಗಳನ್ನು ನಡೆಸಿಕೊಳ್ಳುವ ರೀತಿಯಲ್ಲೇ ನಡೆಸಿಕೊಳ್ಳಲಾಗುತ್ತಿದೆ. ಗಲಭೆಗಳಿಗೆ ಪಾಕಿಸ್ತಾನವೇ ಹೊಣೆ ಎಂದು ಬಿಂಬಿಸುವ ಸರಕಾರದ ಪ್ರಯತ್ನಗಳಿಗೆ ದೇಶದ ಒಳಗಡೆಯೂ ಹೊರಗಡೆಯೂ ಬೆಂಬಲ ಸಿಗಲಾರದು. ಜನಸಮೂಹ ಪ್ರತಿಭಟನೆಗೆ ಇಳಿದಿರುವ ಒಂದು ಸನ್ನಿವೇಶವನ್ನು ತಾವು ನಿಭಾಯಿಸುತ್ತಿದ್ದೇವೆ ಎಂಬುದನ್ನುಸರಕಾರ ಒಪ್ಪಿಕೊಳ್ಳಲಿಕ್ಕೇ ಸಿದ್ಧವಿಲ್ಲ. ಪ್ರತಿಭಟನೆಯ ನೇತೃತ್ವವನ್ನು ಯುವಜನರು ವಹಿಸಿದ್ದಾರೆಯೇ ಹೊರತು ಹುರಿಯತ್ ನಾಯಕರು ಅಲ್ಲ. ಕಾಶ್ಮೀರದಲ್ಲಿ ಭಾರತೀಯ ಪ್ರಭುತ್ವದ ಕಾನೂನುಬದ್ಧತೆ ಮತ್ತು ವಿಶ್ವಾಸಾರ್ಹತೆಗೆ ದೊಡ್ಡ ಏಟು ಬಿದ್ದಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಪಿಡಿಪಿ-ಬಿಜೆಪಿ ಮೈತ್ರಿಕೂಟ ಸರಕಾರ ರಚನೆಯಾದ ಮೇಲೆ ಸರಕಾರದ ಇಬ್ಬರು ಪಾಲುದಾರರು ತಮ್ಮ ತಮ್ಮ ಪ್ರದೇಶವನ್ನು ಮಾತ್ರ ಪ್ರತಿನಿಧಿಸುತ್ತಿರುವುದರಿಂದ ಮತ್ತು ಸಮಯಸಾಧಕ ಮೈತ್ರಿಯಲ್ಲಿ ಸಿಲುಕಿರುವುದರಿಂದ ಅಲ್ಲಿನ ಕೋಮು ವಿಭಜನೆ ಉಲ್ಬಣಗೊಂಡಿದೆ.

ಮೋದಿ ಸರಕಾರ ಪರಿಸ್ಥಿತಿಯನ್ನು ಇನ್ನಷ್ಟು ಕೆಡಿಸಿದೆ. ಎರಡು ವರ್ಷಗಳ ಹಿಂದೆ ಅಧಿಕಾರಕ್ಕೆ ಬಂದಾಗಿನಿಂದಲೂ ಪ್ರತ್ಯೇಕತಾವಾದಿಗಳೂ ಸೇರಿದಂತೆ ರಾಜಕೀಯ ಕ್ಷೇತ್ರದ ವಿವಿಧ ವಿಭಾಗಗಳೊಂದಿಗೆ ಸಂವಾದಕ್ಕೆ ಯಾವುದೇ ರಾಜಕೀಯ ಮುತುವರ್ಜಿಯನ್ನು ಅದು ವಹಿಸಿಲ್ಲ. ಬದಲಿಗೆ, ಪಾಕಿಸ್ತಾನದ ವಿದೇಶಾಂಗ ಕಾರ್ಯದರ್ಶಿ ದೆಹಲಿಯಲ್ಲಿ ಹುರಿಯತ್ ನಾಯಕರನ್ನು ಭೇಟಿ ಮಾಡುತ್ತಾರೆ ಎಂಬ ನೆಪವೊಡ್ಡಿ ಪಾಕಿಸ್ತಾನದೊಂದಿಗಿನ ಮಾತುಕತೆಯನ್ನು ಭಾರತ ಸರಕಾರ ರದ್ದುಪಡಿಸಿತು. ಪಾಕಿಸ್ತಾನದೊಂದಿಗೆ ಮಾತುಕತೆಯಲ್ಲಿ ಮುಖ್ಯ ವಿಷಯವಾದ ಕಾಶ್ಮೀರವನ್ನು ಬಿಟ್ಟು ಭದ್ರತೆ ಮತ್ತು ಭಯೋತ್ಪಾದನೆ ವಿಷಯಗಳ ಮೇಲೆ ಗಮನ ಕೇಂದ್ರೀಕರಿಸುವ ಪ್ರಯತ್ನ ನಡೆಸಲಾಗುತ್ತಿದೆ.

ಆದರೆ ವಾಸ್ತವವೆಂದರೆ, ಕೇಂದ್ರದಲ್ಲಿ ಬಿಜೆಪಿ ಸರಕಾರ ಹಾಗೂ ಜಮ್ಮು-ಕಾಶ್ಮೀರದಲ್ಲಿ ಪಿಡಿಪಿ-ಬಿಜೆಪಿ ಸರಕಾರ ಇರುವುದರಿಂದ ರಾಜಕೀಯ ಪ್ರಕ್ರಿಯೆಯ ಎಲ್ಲಾ ಹಾದಿಗಳೂ ಮುಚ್ಚಿಹೋಗಿವೆ.

ಸಂವಿಧಾನದ 370ನೇ ವಿಧಿಯ ಅಗತ್ಯವನ್ನು ಮಾನ್ಯ ಮಾಡಲಾರದ ಬಿಜೆಪಿ, ಜಮ್ಮು-ಕಾಶ್ಮೀರದ ಸಂಕೀರ್ಣ ಸಮಸ್ಯೆಯು ಸಂಕುಚಿತ ಹಿಂದುತ್ವ ಧೋರಣೆಯಿಂದ ಪರಿಹಾರ ಆಗದು ಎನ್ನುವುದನ್ನು ಮನಗಾಣಬೇಕಾಗಿದೆ. ರಾಜ್ಯದ ಎಲ್ಲಾ ರಾಜಕೀಯ ವಿಚಾರಧಾರೆಗಳ ಜನರೊಂದಿಗೆ ರಾಜಕೀಯ ಸಂವಾದ ನಡೆಸುವ ಒಂದು ದಾರಿಯನ್ನು ಮೋದಿ ಸರಕಾರ ಹಿಡಿಯಬೇಕು. ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ ನಾಗರಿಕ ವಸತಿ ಪ್ರದೇಶಗಳಲ್ಲಿ ಭದ್ರತಾ ವ್ಯವಸ್ಥೆಯನ್ನು ಗಣನೀಯವಾಗಿ ಕಡಿಮೆ ಮಾಡುವ ಮೂಲಕ ವಿಶ್ವಾಸ ವೃದ್ಧಿಸುವ ಕ್ರಮಗಳನ್ನು ಕೈಗೊಳ್ಳಬೇಕು. ಹೆಚ್ಚು ಬಲಪ್ರಯೋಗ ಇಲ್ಲದೆಯೇ ನಾಗರಿಕ ಪ್ರತಿಭಟನೆಗಳನ್ನು ಹೇಗೆ ನಿಭಾಯಿಸಬೇಕು ಎಂಬ ಬಗ್ಗೆ ಪೋಲೀಸ್ ಮತ್ತು ಅರೆ ಸೈನಿಕ ಪಡೆಗಳಿಗೆ ನಿರ್ದೇಶನ ನೀಡಬೇಕು. ತಾವು ದಬ್ಬಾಳಿಕೆಯ ಭದ್ರತಾ ಪ್ರಭುತ್ವದಡಿ ಇಲ್ಲ ಹಾಗೂ ತಮ್ಮ ಸಮಸ್ಯೆಗಳು ಮತ್ತು ಆಶೋತ್ತರಗಳಿಗೆ ಅರ್ಥಪೂರ್ಣ ರೀತಿಯಲ್ಲಿ ಸ್ಪಂದಿಸಲಾಗುತ್ತದೆ ಎಂಬ ಭಾವನೆ ಕಾಶ್ಮೀರದ ಜನರಲ್ಲಿ ಮೂಡಬೇಕು.

ಅನು: ವಿಶ್ವ

> ಕಾಶ್ಮೀರದ ಜನರಲ್ಲಿ, ಅದರಲ್ಲೂ ಮುಖ್ಯವಾಗಿ ಯುವಜನರಲ್ಲಿ ಪರಕೀಯ ಭಾವನೆ ಎಷ್ಟೊಂದು ಹೆಚ್ಚುತ್ತಿದೆ ಎಂಬುದು ಕಳೆದ ಕೆಲವು ದಿನಗಳ ಪ್ರತಿಭಟನೆಗಳಲ್ಲಿ ಎದ್ದು ಕಾಣಿಸುತ್ತಿತ್ತು. ಜಮ್ಮು-ಕಾಶ್ಮೀರದ ಸಂಕೀರ್ಣ ಸಮಸ್ಯೆಯು ಸಂಕುಚಿತ ಹಿಂದುತ್ವ ಧೋರಣೆಯಿಂದ ಪರಿಹಾರ ಆಗದು ಎನ್ನುವುದನ್ನು ಮೋದಿ ಸರಕಾರ ಮನಗಾಣಬೇಕಾಗಿದೆ. ರಾಜ್ಯದ ಎಲ್ಲಾ ರಾಜಕೀಯ ವಿಚಾರಧಾರೆಗಳ ಜನರೊಂದಿಗೆ ರಾಜಕೀಯ ಸಂವಾದ ನಡೆಸುವ ಒಂದು ದಾರಿಯನ್ನು ಮೋದಿ ಸರಕಾರ ಹಿಡಿಯಬೇಕು.



ಪ್ರಕಾಶ ಕಾರಟ್

ಸಶಸ್ತ್ರ ಪಡೆಗಳಿಗೆ ಅಭಯ ರಕ್ಷೆ ಕೊನೆಗೊಳ್ಳಲಿ ವಿಶೇಷ ಅಧಿಕಾರಗಳ 'ಆಫ್‌ಸ್ಪ' ಕಾಯ್ದೆ ರದ್ದಾಗಲಿ

ಸರ್ವೋಚ್ಚ ನ್ಯಾಯಾಲಯ ಒಂದು ಹಿತಕಾರೀ ತೀರ್ಪು ನೀಡಿದೆ, ಗಲಭೆಪೀಡಿತ ಪ್ರದೇಶಗಳಲ್ಲಿ ಸಶಸ್ತ್ರ ಪಡೆಗಳು(ವಿಶೇಷ ಅಧಿಕಾರಿಗಳು) ಕಾಯ್ದೆಯ ಅಡಿಯಲ್ಲಿ ಕಾರ್ಯಾಚರಣೆ ನಡೆಸುವ ಸಶಸ್ತ್ರ ಪಡೆಗಳು ಶಿಕ್ಷೆಯ ಭೀತಿಯಿಲ್ಲದಂತೆ ವರ್ತಿಸಲು ಸಾಧ್ಯವಿಲ್ಲ ಎಂದು ಈ ತೀರ್ಪು ಸಾರಿದೆ. ಒಬ್ಬ ಸೈನಿಕ ಯಾವುದೇ ಅಪರಾಧ ಎಸಗಿದರೆ ಆತನಿಗೆ ಕ್ರಿಮಿನಲ್ ಕೋರ್ಟಿನ ವಿಚಾರಣೆಯಿಂದ "ಅಬಾಧಿತ ರಕ್ಷೆ" ಸಿಗುವುದು ಸಾಧ್ಯವಿಲ್ಲ ಎಂದು ಅದು ಹೇಳಿದೆ. ಮಣಿಪುರದಲ್ಲಿ ಎಲ್ಲಾ ನ್ಯಾಯಾಂಗ-ಹೊರತಾದ ಹತ್ಯೆಗಳ ತನಿಖೆ ನಡೆಸಬೇಕು ಎಂದು ನ್ಯಾಯಾಲಯ ಆದೇಶಿಸಿದೆ.

ಇದುವರೆಗೆ ಸಶಸ್ತ್ರ ಪಡೆಗಳ ಸಿಬ್ಬಂದಿಗೆ ಅವರ ಕಾರ್ಯಾಚರಣೆಗಳಲ್ಲಿ ನಡೆವ ಯಾವುದೇ ಹತ್ಯೆಯ ವಿಚಾರಣೆ ನಡೆಸುವುದಿಲ್ಲ ಎಂದು ಸಶಸ್ತ್ರಪಡೆಗಳು(ವಿಶೇಷ ಅಧಿಕಾರಿಗಳು) ಕಾಯ್ದೆ (ಎಎಫ್‌ಎಸ್‌ಪಿಎ-ಆಫ್‌ಸ್ಪ) ಅಭಯ ನೀಡುತ್ತದೆ. ಇದರ ಫಲಿತಾಂಶವಾಗಿ ಹಲವಾರು ಮಿತಿಮೀರಿದ ಕೃತ್ಯಗಳು ನಡೆದಿವೆ, ನಿಶ್ಶಸ್ತ್ರ ನಾಗರಿಕರನ್ನೂ ಕೊಂದು ಹಾಕಲಾಗಿದೆ. ಮಣಿಪುರದಲ್ಲಿ ಕಳೆದ ಸುಮಾರು ಆರು ದಶಕಗಳಿಂದ ಈ 'ಆಫ್‌ಸ್ಪ' ಜಾರಿಯಲ್ಲಿದ್ದು, ಸಶಸ್ತ್ರ ಪಡೆಗಳು ಗೋಲೀಬಾರ್ ನಡೆಸಿರುವ, ನ್ಯಾಯಾಂಗ ಬಾಹಿರ ವಾಗಿ ಸಾಯಿಸಿದ ನೂರಾರು ಘಟನೆಗಳು ನಡೆದಿವೆ. ಇವುಗಳಲ್ಲಿ ಒಂದು ಕುಖ್ಯಾತ ಪ್ರಕರಣ ಎಂದರೆ ಥಂಗ್ಜಮ್ ಮನೋರಮ ಎಂಬಾಕೆಯ ಮೇಲೆ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ. ಆ ಯುವತಿಯನ್ನು ಅಸ್ಸಾಂ ರೈಫಲ್ಸ್‌ನ ಸೈನಿಕರು ಬಂಧಿಸಿದ ನಂತರ ಇದು ನಡೆಯಿತು. ಆಕೆ ಓಡಿಹೋಗಲು ಪ್ರಯತ್ನಿಸುತ್ತಿದ್ದಾಗ ಗುಂಡಿಗಾಹುತಿಯಾದಳು ಎಂಬ ಸೇನಾಪಡೆಯ ಮಾತು ಅಪ್ಪಟ ಸುಳ್ಳಾಗಿತ್ತು. ಆದರೆ ಆ ಪ್ರಕರಣದಲ್ಲಿ ಯಾರ ವಿಚಾರಣೆಯೂ ನಡೆಯಲಿಲ್ಲ.



ಸುಪ್ರಿಂ ಕೋರ್ಟ್ ತೀರ್ಪು ಮಣಿಪುರದ ನೂರಾರು ಕುಟುಂಬಗಳು ಸಲ್ಲಿಸಿದ ಒಂದು ಅರ್ಜಿಯ ಮೇಲೆ ಬಂದಿದೆ. ಈ ತೀರ್ಪು 'ಆಫ್‌ಸ್ಪ' ಅನ್ವಯವಾಗುವ ಗಲಭೆಪೀಡಿತ ಪ್ರದೇಶಗಳಲ್ಲಿ ಸಶಸ್ತ್ರ ಪಡೆಗಳ ಕಾರ್ಯಾಚರಣೆಗಿದ್ದ ಅಭಯ ರಕ್ಷೆಯ ಮೇಲೆ ಪ್ರಹಾರ ಮಾಡಿದೆ. ಇಂತಹ ರಕ್ಷೆ ಮಣಿಪುರದಲ್ಲೂ ಇದೆ, ಜಮ್ಮು ಮತ್ತು ಕಾಶ್ಮೀರದಂತಹ ರಾಜ್ಯಗಳಲ್ಲೂ ಇದೆ.

ಸುಪ್ರಿಂ ಕೋರ್ಟಿನ ಈ ತೀರ್ಪು 'ಆಫ್‌ಸ್ಪ'ದ ಅಡಿಯಲ್ಲಿ ಭದ್ರತಾ ಪಡೆಗಳಿಗಿರುವ ಅಭಯ ರಕ್ಷೆಯ ಮೇಲೆ ಒಂದು ತಡೆಯಾಗಿ ವರ್ತಿಸಬಹುದಾದರೂ, ದೇಶದ ನಾಗರಿಕರ ಮೂಲ ಹಕ್ಕುಗಳ ಉಲ್ಲಂಘನೆಗಳನ್ನು ಕೊನೆಗಾಣಿಸಲು ಇಷ್ಟೇ ಸಾಲುವುದಿಲ್ಲ. ಈ ಕಾಯ್ದೆ, 'ಆಫ್‌ಸ್ಪ'ವನ್ನೇ ರದ್ದು ಮಾಡಬೇಕಾಗಿದೆ. ನ್ಯಾಯಮೂರ್ತಿ ಜೀವನ ರೆಡ್ಡಿ ಸಮಿತಿ ಇದೇ ಶಿಫಾರಸು ಮಾಡಿತ್ತು.

ದೇಶದೊಳಗೆ ಸಶಸ್ತ್ರ ಪಡೆಗಳ ಬಳಕೆ ಅಂತರ್ರಾಷ್ಟ್ರೀಯ ಗಡಿಗಳ ಸಮೀಪದ ಪ್ರದೇಶಗಳಲ್ಲಿ ಅತ್ಯಂತ ವಿಶಿಷ್ಟ ಸಂದರ್ಭಗಳಲ್ಲಿ ಮಾತ್ರ ಬೇಕಾಗುತ್ತದೆ. ಕೆಲವು ದಂಗೆಗಳು, ಭಯೋತ್ಪಾದಕ ಹಿಂಸಾಚಾರ ಗಡಿಗಳ ಆಚೆಯಿಂದ ಹೊಮ್ಮಿವೆ. ತ್ರಿಪುರ ಸೇರಿದಂತ ಕೆಲವು ಈಶಾನ್ಯ ಭಾರತದ ರಾಜ್ಯಗಳಲ್ಲಿ ಇದು ಸಂಭವಿಸಿದೆ. ತ್ರಿಪುರದಲ್ಲಿ ಗಡಿಗಳಾಚೆಗಿನ ಸಶಸ್ತ್ರ ಚಟುವಟಿಕೆಗಳು ನಿಂತಿರುವುದರಿಂದ ಎಡರಂಗ ಸರಕಾರ ಆಫ್‌ಸ್ಪ ಮತ್ತು ಗಲಭೆ ಪಿಡಿತ ಪ್ರದೇಶವೆಂಬ ಪ್ರಕಟಣೆಯನ್ನು ಹಿಂತೆಗೆದುಕೊಳ್ಳುವಂತೆ ಮಾಡಿತು.

ಗಡಿಪ್ರದೇಶಗಳಲ್ಲಿ ರಾಜ್ಯ ಪೋಲೀಸ್ ಅಥವ ಕೇಂದ್ರೀಯ ಅರೆ ಸೈನಿಕ ಪಡೆಗಳು ನಿಭಾಯಿಸಲಾರದ ಬೆದರಿಕೆಗಳನ್ನು ಎದುರಿಸಲು ಸೇನೆಯನ್ನು ನೆಲೆಗೊಳಿಸುವುದು ಅಗತ್ಯವಾಗ ಬಹುದು. ಇಂತಹ ಸಂದರ್ಭಗಳಿಗೆ, ಆಫ್‌ಸ್ಪದ ಕರಾಳ ಅಂಶಗಳು ಮತ್ತು ನಾಗರಿಕರ ವಿರುದ್ಧ ಬಲಪ್ರಯೋಗಕ್ಕೆ ಅಭಯ ರಕ್ಷೆಯ ಅಂಶಗಳು ಇರದಂತಹ ಒಂದು ಸೂಕ್ತ ಶಾಸನವನ್ನು ತರಬಹುದು.

ಸುಪ್ರಿಂ ಕೋರ್ಟ್ ತೀರ್ಪು ಸರಕಾರ ಮತ್ತು ಸಶಸ್ತ್ರ ಪಡೆಗಳು ಆಫ್‌ಸ್ಪದ ಬಳಕೆಯನ್ನು ಪ್ರತಿಪಾದಿಸುವುದನ್ನು ಮುಂದುವರೆಸಬೇಕೇ ಎಂದು ಪುನರಾಲೋಚನೆ ನಡೆಸುವಂತೆ ಮಾಡಬೇಕು.

> ಗಡಿಪ್ರದೇಶಗಳಲ್ಲಿ ರಾಜ್ಯ ಪೋಲೀಸ್ ಅಥವ ಕೇಂದ್ರೀಯ ಅರೆ ಸೈನಿಕ ಪಡೆಗಳು ನಿಭಾಯಿಸಲಾರದ ಬೆದರಿಕೆಗಳನ್ನು ಎದುರಿಸಲು ಸೇನೆಯನ್ನು ನೆಲೆಗೊಳಿಸುವುದು ಅಗತ್ಯವಾಗ ಬಹುದು. ಇಂತಹ ಸಂದರ್ಭಗಳಿಗೆ, ಆಫ್‌ಸ್ಪದ ಕರಾಳ ಅಂಶಗಳು ಮತ್ತು ನಾಗರಿಕರ ವಿರುದ್ಧ ಬಲಪ್ರಯೋಗಕ್ಕೆ ಅಭಯ ರಕ್ಷೆಯ ಅಂಶಗಳು ಇರದಂತಹ ಒಂದು ಸೂಕ್ತ ಶಾಸನವನ್ನು ತರಬಹುದು.

ಸಪ್ಟೆಂಬರ್ 2, 2016

ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಯಾಕೆ?



ಕೇಂದ್ರದಲ್ಲಿ ಆಳ್ವಿಕೆ ನಡೆಸುತ್ತಿರುವ ನರೇಂದ್ರ ಮೋದಿ ನೇತೃತ್ವದ ಸರಕಾರ ಎರಡು ವರ್ಷಗಳ ಆಳ್ವಿಕೆಯ ಸಾಧನೆಗಳನ್ನು ಅದ್ದೂರಿಯ ಕಾರ್ಯಕ್ರಮಗಳು, ಟಿವಿ, ಪತ್ರಿಕಾ ಜಾಹೀರಾತುಗಳ ಮೂಲಕ ಜನಗಳಿಗೆ 'ತಲುಪಿಸಲು' ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡುತ್ತಿರುವಾಗ, ಆ ಜನಸಾಮಾನ್ಯರ ಒಂದು ಪ್ರಮುಖ ವಿಭಾಗ, ದೇಶದ ಕೋಟ್ಯಂತರ ಕಾರ್ಮಿಕರು ಮತ್ತು ನೌಕರರು ಈ ಸಪ್ಟಂಬರ್ 2ರಂದು ಮತ್ತೆ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧತೆ ನಡೆಸುತ್ತಿದ್ದಾರೆ. ಇಷ್ಟು ದೊಡ್ಡ ಜನವಿಭಾಗವೊಂದು ಏಕೆ ಮತ್ತೆ ಹೋರಾಟದ ಕಣಕ್ಕಿಳಿದಿದೆ? ಈ ಸರಕಾರದಿಂದ ಅವರು ಏನನ್ನು ಕೇಳುತ್ತಿದ್ದಾರೆ? ಈ ವಾರದಿಂದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿಯವರು ಈ ಮಹಾಮುಷ್ಕರದ ಬೇಡಿಕೆಗಳ ಬಗ್ಗೆ ನಮ್ಮ ಓದುಗರಿಗೆ ತಿಳಿಸುತ್ತಿದ್ದಾರೆ.

ಕಳೆದ ಸಂಚಿಕೆಗಳಲ್ಲಿ ರೂ.18,000 ಕನಿಷ್ಟ ಕೂಲಿ, ಉದ್ಯೋಗಾವಕಾಶ ನಿರ್ಮಾಣ ಕಾರ್ಮಿಕ ಕಾನೂನುಗಳಿಗೆ ತರಬೇಕೆಂದಿರುವ ಎಲ್ಲ ಬದಲಾವಣೆಗಳನ್ನು ರದ್ದು ಮಾಡಬೇಕೆಂಬ ಬೇಡಿಕೆಗಳನ್ನು ಪರಿಶೀಲಿಸಲಾಗಿತ್ತು. ಈ ಸಂಚಿಕೆಯಲ್ಲಿ ಲೇಖಕರು ಗುತ್ತಿಗೆ ಕಾರ್ಮಿಕರ ಶೋಷಣೆಯನ್ನು ನಿಲ್ಲಿಸುವ ಕುರಿತಾದ ಬೇಡಿಕೆಯನ್ನು ಪರಿಶೀಲಿಸುತ್ತಾರೆ

4-ಗುತ್ತಿಗೆ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ

ಎಸ್.ವರಲಕ್ಷ್ಮಿ

ಬೆಂಗಳೂರಿನ ಎಲ್ಲ ಬಿ.ಎಂ.ಟಿ.ಸಿ. ಬಸ್‌ಗಳಲ್ಲಿ ಮಿಸ್ ಕಾಲ್ ಕೊಡಿ ನಿಮಗೆ ಏನು ಸೇವೆ ಬೇಕಾದರೂ ಒದಗಿಸುತ್ತೇವೆ ಎಂಬ ಜಾಹಿರಾತುಗಳು ಕಾಣಿಸುತ್ತಿವೆ. ಕಾರ್ಪೊರೇಷನ್‌ಗಳ ಆಡಳಿತವಿರುವ ಎಲ್ಲಾ ಕೇಂದ್ರಗಳ ಗೋಡೆಗಳ ಮೇಲೂ ವ್ಯಾಪಕವಾಗಿ ಇಂತಹ ಭಿತ್ತಿಪತ್ರಗಳನ್ನು ಕಾಣಬಹುದು. ಮಾತ್ರವಲ್ಲ, ಈಗ ಆನ್‌ಲೈನ್ ಮಾರುಕಟ್ಟೆ ಮಧ್ಯಮ ವರ್ಗಕ್ಕೆ ಹೆಚ್ಚು ಹತ್ತಿರವಾಗುತ್ತಿದೆ. ನೀವು ನಿಮ್ಮ ಹಣ, ಸಮಯ, ಶ್ರಮ ಖರ್ಚು ಮಾಡುವುದು ಬೇಕಿಲ್ಲ, ನಿಮ್ಮ ಮೊಬೈಲ್‌ನಲ್ಲಿಯೇ ಇಂಟರ್‌ನೆಟ್ ಸೌಲಭ್ಯವಿದ್ದರೆ ಸಾಕು ತರಕಾರಿ ಮತ್ತು ಮಾತ್ರೆಗಳಿಂದಿಡಿದು ಎಲ್ಲಾ ರೀತಿಯ ವಸ್ತುಗಳು ನಿಮ್ಮ ಮನೆಗೆ ಬರುತ್ತವೆ.

ನಾನು ವಾಸ ಮಾಡುವ ಕುಂಬಳಗೂಡಿನಲ್ಲಿ ಒಂದು ಏಜೆನ್ಸಿ ಇದೆ, ಇತರ ಬಹಳ ಕಡೆಗಳಲ್ಲೂ ಇವೆ. ಬೇರೆ ಬೇರೆ ರಾಜ್ಯಗಳಲ್ಲೂ, ಬೆಂಗಳೂರು, ನವದೆಹಲಿ, ಬಾಂಬೆ, ಗೋವಾ, ಮದ್ರಾಸ್ ಮುಂತಾದಡೆಗಳಲ್ಲಿ ದೊಡ್ಡ ದೊಡ್ಡ ಏಜೆನ್ಸಿಗಳು ಇವೆ. ಹಾಗೆಯೇ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಲ್ಲಿ, ಸಾರ್ವಜನಿಕ ಕೈಗಾರಿಕೆಗಳಲ್ಲಿ ಘನಕೈಗಾರಿಕೆಗಳು, ಮಧ್ಯಮ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿಯೂ ಕೂಡಾ ಏಜೆನ್ಸಿಗಳು ಇವೆ. ಉತ್ಪಾದಕ ವಲಯ ಮಾತ್ರವಲ್ಲದೆ ಮಾರುಕಟ್ಟೆ ಮತ್ತು ಸೇವಾ ವಲಯಗಳಲ್ಲಿಯೂ ಹಲವಾರು ಏಜೆಂಸಿಗಳು ಕೆಲಸ ಮಾಡುತ್ತವೆ.

ಈ ಎಲ್ಲ ಏಜೆಂಸಿಗಳು ವಿವಿಧ ವಲಯಗಳಲ್ಲಿ ದುಡಿಮೆಗೆ ಬೇಕಾಗುವ ಕಾರ್ಮಿಕರನ್ನು ಒದಗಿಸುವ ಗುತ್ತಿಗೆದಾರರು. ಇವರು ಉದಾರೀಕರಣ ನೀತಿಗಳ ಜಾರಿಯ ಮೊದಲು ಮೂಲಸ್ವರೂಪದ ಕೆಲಸಗಳು, ಖಾಯಂ ಕೆಲಸಗಳಲ್ಲಿ ದುಡಿಮೆ ಮಾಡಿಸುತ್ತಿರಲಿಲ್ಲ, ಕಾರ್ಖಾನೆ, ಕಚೇರಿಗಳಲ್ಲಿರುವ ತೋಟಗಾರಿಕೆ, ಸೆಕ್ಯುರಿಟಿ, ಕ್ಯಾಂಟೀನ್‌ಗಳಲ್ಲಿ ಮತ್ತು ಲೋಡಿಂಗ್ ಮತ್ತು ಅನ್‌ಲೋಡಿಂಗ್ ತರಹದ ಕೆಲಸಗಳನ್ನು ಮಾತ್ರ ಮಾಡಿಸುತ್ತಿದ್ದರು. ಆದರೆ ಈಗ ಖಾಯಂ ನೌಕರ ಮತ್ತು ಖಾಯಂ ಕಾರ್ಮಿಕರು ಮಾಡುವ ಎಲ್ಲಾ ಕೆಲಸಗಳನ್ನು ಗುತ್ತಿಗೆಗೆ ಕೊಡುವ ಪದ್ಧತಿ ಪ್ರಾರಂಭವಾಗಿದೆ.

> **ಗುತ್ತಿಗೆಕರಣವು ವ್ಯಾಪಕವಾಗಿ ಹಬ್ಬಿರುವುದರಿಂದಾಗಿ ಎಲ್ಲಾ ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸಬೇಕು ಅದುವರೆಗೆ ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ಸೂತ್ರವನ್ನು ಜಾರಿಗೊಳಿಸಬೇಕು ಎಂಬುದು ಕಾರ್ಮಿಕ ಸಂಘಟನೆಗಳ ಒಂದು ಪ್ರಮುಖ ಬೇಡಿಕೆ. 1970ರ ಗುತ್ತಿಗೆ ಪದ್ಧತಿ ನಿಯಂತ್ರಣ ನಿಷೇಧ ಕಾಯ್ದೆಯಲ್ಲಿ ಇದಕ್ಕೆ ಅವಕಾಶವಿದೆ. ಇದು ಸರಕಾರದ ಪಾಲಿಗೆ ತಪ್ಪಿಸಿಕೊಳ್ಳಲು ಬಾರದ ಕಾನೂನುಬದ್ಧ ಜವಾಬ್ದಾರಿಯಾಗಿದೆ. ಈ ದೇಶದ ಕಾನೂನುಗಳ ರಕ್ಷಕನಾಗಿರಬೇಕಾದ ಸರಕಾರವು ಕಾನೂನುಬದ್ಧ ಜವಾಬ್ದಾರಿ ಪೂರೈಸುವಂತೆ ಕಾರ್ಮಿಕ ಸಂಘಟನೆಗಳು ಕೇಳುತ್ತಿವೆ. ಇದು ನ್ಯಾಯುಬದ್ಧವಲ್ಲವೇ? ಆದರೆ ಮೋದಿ ಸರಕಾರ ಈಗ ಈ ಕಾನೂನಿಗೆ ತಿದ್ದುಪಡಿ ತಂದು ಗುತ್ತಿಗೆ ಕಾರ್ಮಿಕರ ಶೋಷಣೆಯನ್ನೇ ಕಾನೂನು ಬದ್ಧಗೊಳಿಸುತ್ತಿದೆ. ಇದನ್ನು ಕಾರ್ಮಿಕರು ಬಲವಾಗಿ ವಿರೋಧಿಸುತ್ತಿದ್ದಾರೆ.**

ರಾಜ್ಯ ಸರ್ಕಾರದಲ್ಲಿ ಬರುವ 44 ಇಲಾಖೆಗಳಲ್ಲಿ ಖಾಲಿಯಿರುವ ಸುಮಾರು 2.5 ಲಕ್ಷಕ್ಕೂ ಹೆಚ್ಚು ಹುದ್ದೆಗಳಲ್ಲಿ, ಹಾಗೇ ಆರೋಗ್ಯ ಇಲಾಖೆಯಲ್ಲಿರುವ 102, 108 ಅರೋಗ್ಯ ಸೇವೆಗಳಲ್ಲಿ ಗುತ್ತಿಗೆಗೆ ದುಡಿಮೆ ಮಾಡಿಸಿಕೊಳ್ಳಾಗುತ್ತಿದೆ. ರಾಜ್ಯಸರ್ಕಾರದ ಸಾರ್ವಜನಿಕ ಕೈಗಾರಿಕೆಗಳಲ್ಲಿಯೂ, ಹಾಗೆಯೇ ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯಲ್ಲಿರುವ 4 ನಿಗಮಗಳು, ರಸ್ತೆಸಾರಿಗೆ, ಪ್ರವಾಸೋದ್ಯಮ, ಕೈಗಾರಿಕಾ ಅಭಿವೃದ್ಧಿ ನಿಗಮ, ಕೈಗಾರಿಕಾ ಮೂಲ ಸೌಕರ್ಯಗಳ ನಿಗಮ, ಸ್ಥಳೀಯ ಆಡಳಿತದ ವಿಭಾಗಗಳಾದ ನಗರಪಾಲಿಕೆ, ಮಹಾನಗರ ಪಾಲಿಕೆಗಳು ವಿಶ್ವವಿದ್ಯಾನಿಲಯಗಳು ಮುಂತಾಗಿ ಎಲ್ಲೆಡೆಗಳಲ್ಲೂ ಗುತ್ತಿಗೆ ಕೆಲಸಗಾರರನ್ನು ದುಡಿಸಿಕೊಳ್ಳಲಾಗುತ್ತಿದೆ.

ಸರ್ಕಾರದ ಯೋಜನೆಗಳಾದ ಸ್ತ್ರೀಶಕ್ತಿ, ಶಾದಿಭಾಗ್ಯ, ಅನ್ನಭಾಗ್ಯ, ಸೈಕಲ್‌ಭಾಗ್ಯ ಮತ್ತು ಇತರ ಭಾಗ್ಯಗಳ ರೂಪದಲ್ಲಿ ಬಂದಿರುವ ಯೋಜನೆಗಳಲ್ಲಿ, ಕೇಂದ್ರ ಸರ್ಕಾರದ ಯೋಜನೆಗಳಾದ ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಎನ್‌ಯುಹೆಚ್‌ಎಂ, ಎನ್‌ಆರ್‌ಹೆಚ್‌ಎಂ, ಏಡ್ಸ್ ಪ್ರಿವೆನ್ಶನ್ ಸೋಸೈಟಿ, ಟಿ.ಬಿ. ಮಲೇರಿಯಾ ಕಾಯಿಲೆ ನಿಯಂತ್ರಣದ ಯೋಜನೆಗಳು ಇವುಗಳಲ್ಲಂತೂ ಖಾಯಂ ಎನ್ನುವ ಸೌಲಭ್ಯಗಳನ್ನು ಹೊಂದಿರುವ ನೌಕರರೇ ಇಲ್ಲ.

ಹೀಗೆ ಸರ್ಕಾರಿ ವಿಭಾಗದ ಸುಮಾರು 50%, ಖಾಸಗೀ ಕ್ಷೇತ್ರದಲ್ಲಿ 60% ಗುತ್ತಿಗೆ ಕಾರ್ಮಿಕರು ದುಡಿಯುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಖಾಸಗಿ ಕ್ಷೇತ್ರದಲ್ಲಿ ವಆಸ್ತವವಾಗಿ ಈ ಪ್ರಮಾಣ ಇನ್ನೂ ಹೆಚ್ಚಿರಬಹುದೆಂದೂ ಊಹಿಸಲಾಗುತ್ತಿದೆ.

ಇಂತಹ ದುಡಿಮೆಯ ಮೂಲ ಸಮಸ್ಯೆಯೆಂದರೆ, ಇಲ್ಲಿ ದುಡಿವ ಕಾರ್ಮಿಕರಿಗೂ ಮೂಲ ಮಾಲೀಕರಿಗೂ ಯಾವುದೇ ಸಂಬಂಧಗಳು ಇರುವುದಿಲ್ಲ, ಏಜೆನ್ಸಿಗಳ ಮುಖಾಂತರವೇ ಕೆಲಸ, ಇದೇ ಇವರ ಶೋಷಣೆಗೆ ಮೂಲ ಕಾರಣ.

ಈ ಕಾರ್ಮಿಕರ ರಕ್ಷಣೆಗೆಂದು 1970ರಲ್ಲಿ ಗುತ್ತಿಗೆ ಪದ್ಧತಿ ನಿಯಂತ್ರಣ ನಿಷೇದ ಕಾಯ್ದೆ ಜಾರಿಗೆ ಬಂತು.

ಗುತ್ತಿಗೆಕರಣವು ವ್ಯಾಪಕವಾಗಿ ಹಬ್ಬಿರುವುದರಿಂದಾಗಿ ಈ ಎಲ್ಲಾ ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸಬೇಕೆಂಬುದು ಕಾರ್ಮಿಕ ಸಂಘಟನೆಗಳ ಬೇಡಿಕೆಯಾಗಿದೆ. 1970ರ ಗುತ್ತಿಗೆ ಕಾರ್ಮಿಕ ಕಾಯಿದೆಯ ಕಲಮು 25(2)(v)(a) ರ ಪ್ರಕಾರ ಖಾಯಂ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸಬೇಕಾಗುತ್ತದೆ. ಇದು ಸರಕಾರದ ಪಾಲಿಗೆ ತಪ್ಪಿಸಿಕೊಳ್ಳಲು ಬಾರದ ಕಾನೂನುಬದ್ಧ ಜವಾಬ್ದಾರಿಯಾಗಿದೆ.

ಈ ದೇಶದ ಕಾನೂನುಗಳ ರಕ್ಷಕನಾಗಿರಬೇಕಾದ ಸರಕಾರವು ಕಾನೂನುಬದ್ಧ ಜವಾಬ್ದಾರಿ ಪೂರೈಸುವಂತೆ ಕಾರ್ಮಿಕ ಸಂಘಟನೆಗಳು ಕೇಳುತ್ತಿವೆ. ಇದು ನ್ಯಾಯಬದ್ಧವಲ್ಲವೇ?

ಈ ಬೇಡಿಕೆಗೆ ಸರಕಾರವು ಪ್ರತಿಕ್ರಿಯಿಸಿದ್ದು ಹೇಗೆ? ಇದನ್ನು ಕಾರ್ಮಿಕ ಮಂತ್ರಿಗಳ ಮಾತಿನಲ್ಲಿ ಹೇಳುವುದಾದರೆ, "ಗುತ್ತಿಗೆ ಕಾರ್ಮಿಕರ ಬಗ್ಗೆ ಈಗಿರುವ ಕಾನೂನುಗಳನ್ನು ಸಂಪೂರ್ಣವಾಗಿ ವಿಮರ್ಶಿಸಲಾಗುವುದು. ಈ ಪುನರ್ವಿಮರ್ಶೆಯ ಮೂಲ ಉದ್ದೇಶವೇನೆಂದರೆ ಗುತ್ತಿಗೆ ಕಾರ್ಮಿಕರನ್ನು, ನೋಂದಾಯಿತ ಸಿಬ್ಬಂದಿ ನೇಮಕ ಏಜೆನ್ಸಿಗಳ ಮೂಲಕವೇ ನೇಮಿಸಲು ಅವಕಾಶ ಕಲ್ಪಿಸುವುದು ಹಾಗೂ ಅವು ಖಾಯಂ ನೌಕರರಿಗೆ ದೊರೆಯುವ ಸಾಮಾಜಿಕ ಭದ್ರತೆಯನ್ನು ಗುತ್ತಿಗೆ ಕಾರ್ಮಿಕರಿಗೆ ದೊರಕಿಸಿಕೊಡುವಂತೆ ಪ್ರೋತ್ಸಾಹಿಸುವುದು."

ಈ ಮಂತ್ರಿಗಳು ಕಾರ್ಮಿಕ ಸಂಘಟನೆಗಳನ್ನು ಮೂರ್ಖರ ಗುಂಪು ಎಂದು ಭಾವಿಸಿದ್ದಾರೆಯೇ? ಈಗಾಗಲೇ ಇರುವ 1970ರ ಗುತ್ತಿಗೆ ಕಾರ್ಮಿಕರ ಕಾಯಿದೆಯಡಿಯಲ್ಲಿ ರೂಪಿಸಿರುವ ನಿಯಮಗಳಲ್ಲಿಯೇ ಲಭ್ಯವಿರುವ ಸೇವಾಸ್ಥಿತಿಯು ಖಾಯಂ ನೌಕರರಿಗೆ ಗುತ್ತಿಗೆ ಕಾರ್ಮಿಕರಿಗೂ ದೊರಕಬೇಕು. ಮತ್ತು ಎಲ್ಲಾ ಸಾಮಾಜಿಕ ಭದ್ರತಾ ಸೌಲಭ್ಯಗಳು ಅವರಿಗೂ ದೊರಕಬೇಕೆಂಬ ಅಂಶ ಇದ್ದೇ ಇದೆ. ಹೀಗಿರುವಾಗ ಇದಕ್ಕಾಗಿ ಕಾನೂನನ್ನು ಸಂಪೂರ್ಣವಾಗಿ ವಿಮರ್ಶಿಸುವ ಅವಶ್ಯಕತೆಯೇ ಉದ್ಭವಿಸುವುದಿಲ್ಲ. ಗುತ್ತಿಗೆ ಕಾರ್ಮಿಕರಿಗೆ ಎಲ್ಲಾ ಕಾರ್ಮಿಕ ಕಾನೂನುಗಳನ್ನು ಅನ್ವಯಿಸುವ ಮೂಲಕ ಕನಿಷ್ಠಕೂಲಿ, ಪಿ.ಎಫ್, ಇ.ಎಸ್.ಐ ಮೊದಲಾದ ಸೌಲಭ್ಯಗಳನ್ನು ನೀಡಬೇಕೆಂದು ಈಗಿರುವ 1970ರ ಗುತ್ತಿಗೆ ಕಾರ್ಮಿಕ ಕಾಯಿದೆಯಲ್ಲಿಯೇ ಇದೆ. ಇದಕ್ಕೆ 'ಸಿಬ್ಬಂದಿ ನೇಮಕ ಏಜೆನ್ಸಿ'ಗಳ' ಅಗತ್ಯವೂ ಇಲ್ಲ, ಅವುಗಳಿಗೆ ಪ್ರೋತ್ಸಾಹದ ಅಗತ್ಯವೂ ಇಲ್ಲ. ನಿಜವಾಗಿಯೂ ಬೇಕಾಗಿರುವುದು ಕಟ್ಟುನಿಟ್ಟಾಗಿ ಈಗಿರುವ ಕಾನೂನುಗಳನ್ನು ಜಾರಿಗೊಳಿಸುವುದು ಮತ್ತು ಮಾಲೀಕರು ಅವುಗಳನ್ನು ಉಲ್ಲಂಘಿಸುತ್ತಿರುವಾಗ ಅದನ್ನು ಪ್ರೋತ್ಸಾಹಿಸುವುದನ್ನು ನಿಲ್ಲಿಸುವುದು. ಅದಾಗ್ಯೂ ಸರಕಾರವು ಇಂತಹ ಭರವಸೆಯ ನಟನೆಯ ಮೂಲಕ ಜನರನ್ನು ಮತ್ತು ಕಾರ್ಮಿಕರನ್ನು ಮೋಸಗೊಳಿಸುತ್ತಿದೆ. ಸಭೆಯಲ್ಲಿ ಎಲ್ಲಾ ಕಾರ್ಮಿಕ ಸಂಘಟನೆಗಳು ಒಟ್ಟಾಗಿ ಸರಕಾರದ ಯೋಜನೆಗಳನ್ನು ವಿರೋಧಿಸಿದ್ದರಿಂದಾಗಿ ಅದನ್ನು ಮುಂದುವರೆಸಲು ಸಾಧ್ಯವಾಗಲಿಲ್ಲ.

ಖಾಯಂ ಸ್ವರೂಪದ ಮತ್ತು ನಿರಂತರವಾಗಿ ಇರುವ ಕೆಲಸಗಳಲ್ಲಿ ದುಡಿಯುತ್ತಿರುವ ಗುತ್ತಿಗೆ ಕಾರ್ಮಿಕರನ್ನು ನಿಯಮಿತಗೊಳಿಸುವ ವರೆಗೆ, ಅವರಿಗೆ ಆ ಉದ್ಯಮದಲ್ಲಿ ಖಾಯಂ ನೌಕರರಿಗೆ ದೊರಕುವ ವೇತನ ಮತ್ತು ಸೌಲಭ್ಯಗಳನ್ನು ನೀಡಬೇಕೆಂದು ಬಿಎಂಎಸ್ ಸೇರಿದಂತೆ ಎಲ್ಲ ಕಾರ್ಮಿಕ ಸಂಘಟನೆಗಳು ಒತ್ತಾಯಿಸಿದ್ದವು.

ಹೀಗೆ ಮಾಡಲು ಈಗಿರುವ ಕಾನೂನಿನ ಅಡಿಯಲ್ಲಿ ರೂಪಿಸಿರುವ ನಿಯಮಗಳಲ್ಲಿ ಅವಕಾಶವಿದೆ. ಈ ನಿಯಮಗಳಿರುವ 25(2)(v)(a) ಪರಿಚ್ಛೇದವನ್ನು ಮೂಲ ಕಾನೂನಿನಲ್ಲಿಯೇ ಅಳವಡಿಸಿ, ಆ ಮೂಲಕ ಅದನ್ನು ಕಡ್ಡಾಯವಾಗಿ ಜಾರಿಗೊಳಿಸುವಂತಾಗಬೇಕೆಂದು 2011 ರಲ್ಲಿ ನಡೆದ 43ನೇ ಅಂತರರಾಷ್ಟ್ರೀಯ ಕಾರ್ಮಿಕ ಸಮಾವೇಶ ಶಿಫಾರಸ್ಸು ಮಾಡಿತ್ತು. ಹಿಂದಿನ ಯುಪಿಎ-2 ಸರ್ಕಾರದ ಕಾರ್ಮಿಕ ಸಚಿವಾಲಯವು ಈ ಶಿಫಾರಸ್ಸುಗಳ ಆಧಾರದಲ್ಲಿ ಕಾನೂನು ತಿದ್ದುಪಡಿಯ ಕರಡು ಮಸೂದೆಯ ಒಂದು ಸಂಪುಟ ಟಿಪ್ಪಣಿಯನ್ನು ಸಿದ್ಧಪಡಿಸಿತ್ತು ಎಂಬುದನ್ನು ಕಾರ್ಮಿಕ ಸಚಿವರು ದಾಖಲೆಗಳನ್ನು ಪರಿಶೀಲಿಸಿ ಕಂಡುಕೊಳ್ಳಲಿ. ಆಗಿನ ಪ್ರಧಾನ ಮಂತ್ರಿಗಳ ಕಾರ್ಯಾಲಯ(ಪಿಎಂಒ) ಇದನ್ನು ಕನಿಷ್ಠ ಮೂರು ಬಾರಿ ವಾಪಸ್ಸು ಕಳಿಸುತ್ತಾ, ವಿ.ವಿ.ಗಿರಿ ನ್ಯಾಷನಲ್ ಲೇಬರ್ ಇನ್ಸ್‌ಟಿಟ್ಯೂಟ್ ಸೇರಿದಂತೆ ಹಲವು ಪರಿಣಿತರ ಸಂಸ್ಥೆಗಳಿಂದ ಈ ತಿದ್ದುಪಡಿಗಳ ಪರಿಣಾಮ ಹಾಗೂ ಅವಶ್ಯಕ ಶಿಫಾರಸ್ಸುಗಳನ್ನು ಬಯಸಿತ್ತು. ಈ ಎಲ್ಲಾ ಸಂಸ್ಥೆಗಳು ವಿಳಂಬವಿಲ್ಲದೆ, ತಕ್ಷಣ ತಮ್ಮ ಶಿಫಾರಸ್ಸುಗಳನ್ನು ಕಳಿಸಿ, ಕರಡು ತಿದ್ದುಪಡಿ ಮಸೂದೆಗೆ ಒಪ್ಪಿಗೆ ಸೂಚಿಸಿದ್ದವು. ಆದರೆ ಆಗಿನ ಪಿಎಂಒ ಆ ಶಿಫಾರಸಿನ ಬಗ್ಗೆ ಕ್ರಮ ಕೈಗೊಳ್ಳದಿರುವುದೇ ವಾಸಿ ಎಂದು ಭಾವಿಸಿತು.

> **ನವ-ಉದಾರವಾದಿ ಸುಧಾರಣೆಗಳ ತರ್ಕವೇ ಆರ್ಥಿಕ ಬೆಳವಣಿಗೆಯನ್ನು ಅಸಂಘಟಿತ ಎಂದು ಕರೆಯಲಾಗುವ ಕ್ಷೇತ್ರದ ಕಡೆಗೆ ತಳ್ಳುವುದು, ಅದಕ್ಕೆ ಅನುಗುಣವಾಗಿ ಕಾರ್ಮಿಕ ಕಾಯ್ದೆಗಳನ್ನು ಬದಲಿಸುವುದು. ಖಾಯಂ ಉದ್ಯೋಗವನ್ನು ದಿನಗೂಲಿ, ಗುತ್ತಿಗೆ ದುಡಿಮೆಯಾಗಿ ಪರಿವರ್ತಿಸಿ ಲಾಭಗಳನ್ನು ಗರಿಷ್ಟಗೊಳಿಸುವುದರ ಜೊತೆಗೆ ಕಾರ್ಮಿಕ ವರ್ಗದ ಐಕ್ಯತೆಯನ್ನು ಮುರಿಯುವುದು ಆಳುವ ವರ್ಗಗಳ ಪ್ರಯತ್ನವಾಗಿದೆ.**

ಕಾರ್ಪೊರೇಟ್‌ಗಳಿಗೆ ಹಿಂದಿನ ಸರಕಾರಕ್ಕಿಂತ ಹೆಚ್ಚು ವಿಧೇಯವಾಗಿರುವ ಈಗಿನ ಸರಕಾರ "ಗುತ್ತಿಗೆ ಕಾರ್ಮಿಕರಿಗೆ ಖಾಯಂ ಕಾರ್ಮಿಕರ ವೇತನಗಳನ್ನು ಕೊಡುವ ಪ್ರಶ್ನೆಯ ಮೇಲೆ ಇನ್ನೂ ಹೆಚ್ಚಿನ ಸಮಾಲೋಚನೆಯ ಅವಶ್ಯಕತೆಯಿದೆ ಹಾಗೂ ಅವಶ್ಯಕವೆನಿಸಿದರೆ ಇದಕ್ಕಾಗಿ ಒಂದು ಸಮಿತಿಯನ್ನೂ ನೇಮಿಸಲಾಗುವುದು" ಎಂಬ ಮೋಸದ ತರ್ಕವನ್ನು

ಪುಟ 10 ಕ್ಕೆ

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಮತ್ತು ಸಂಸತ್ ಸದಸ್ಯ ಸೀತಾರಾಮ್ ಯೆಚೂರಿಯವರು ಜುಲೈ 7, 2016ರಂದು ಪ್ರಧಾನ ಮಂತ್ರಿಗಳಿಗೆ ಕೆಲವು ದೊಡ್ಡ ಕಾರ್ಪೊರೇಟ್‌ಗಳು ಬ್ಯಾಂಕುಗಳು ಸಾಲವಾಗಿ ಕೊಟ್ಟ ಹಣದ ದುರುಪಯೋಗ ಮಾಡಿರುವ ಬಗ್ಗೆ ಒಂದು ಪತ್ರವನ್ನು ಬರೆದಿದ್ದಾರೆ. ಇದನ್ನು ಜುಲೈ 8ರಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಿಡುಗಡೆ ಮಾಡಿದೆ. ಆ ಪತ್ರದ ಪೂರ್ಣ ಪಾಠವನ್ನು ಮುಂದೆ ಕೊಡಲಾಗಿದೆ:

ಚಮಚಾ ಬಂಡವಾಳಶಾಹಿಗೆ ಪ್ರೋತ್ಸಾಹ 8.5ಲಕ್ಷ ಕೋಟಿ ರೂ.ಗಳ ಮಹಾ ಹಗರಣ

ಪ್ರಧಾನ ಮಂತ್ರಿಗಳಿಗೆ ಸೀತಾರಾಂ ಯೆಚೂರಿ ಪತ್ರ

"ಈ ವಿಷಯವನ್ನು ಪ್ರಧಾನ ಮಂತ್ರಿಗಳು ಪೂರ್ಣ ಗಂಭೀರತೆಯಿಂದ ಪರಿಶೀಲಿಸಬೇಕು, ಎಲ್ಲ ಸುಸ್ತಿದಾರರ ಹೆಸರುಗಳನ್ನು ಮತ್ತು ಮೊತ್ತಗಳನ್ನು ಸಾರ್ವಜನಿಕಗೊಳಿಸುವುದರಿಂದ ಆರಂಭಿಸಿ ಅವರ ಆಸ್ತಿಗಳನ್ನು ಹಣವಾಗಿಸುವ ಒಂದು ಕ್ರಿಯಾಯೋಜನೆಯನ್ನು ಆರಂಭಿಸಬೇಕು, ಅವರ ಬಾಕಿಗಳಿಂದಾಗಿ ಸಾರ್ವಜನಿಕ ವಲಯದ ಬ್ಯಾಂಕುಗಳ ಬಂಡವಾಳಕ್ಕೆ ಆಗಿರುವ ನಷ್ಟಗಳನ್ನು ರಿಝರ್ವ್ ಬ್ಯಾಂಕಿನ ಬಂಡವಾಳ ಬಳಸಿ ತುಂಬುವ ಯೋಜನೆಯನ್ನು ಕೈಬಿಡಬೇಕು,. ವಸೂಲಿ ಮೊದಲು, ನಂತರ ಮರುಬಂಡವಾಳೀಕರಣ ಎಂಬ ನೀತಿಯನ್ನು ವಾಚಾ, ಮನಸಾ ಅನುಸರಿಸಬೇಕು, ಹಾಗೆ ಮಾಡಲು ವಿಫಲವಾದರೆ, "ನಿಮ್ಮ ಸರಕಾರ ಕೆಟ್ಟಮಾರ್ಗದಿಂದ ಗಳಿಸಿದ ಹಣದ ಶಕ್ತಿಗೆ ಋಣಿಯಾಗಿಯೇ ಉಳಿಯುತ್ತದೆ, ಆ ಮೂಲಕ ಚಮಚಾ ಬಂಡವಾಳಶಾಹಿಯನ್ನು ಪೋಷಿಸುತ್ತದೆ ಮತ್ತು ಪ್ರೋತ್ಸಾಹಿಸುತ್ತದೆ ಎಂಬುದನ್ನು ದೃಢಪಡಿಸಿದಂತಾಗುತ್ತದೆಯಷ್ಟೇ"



ಶ್ರೀ ನರೇಂದ್ರ ಮೋದಿ, ಪ್ರಧಾನ ಮಂತ್ರಿಗಳು
ಭಾರತ ಸರಕಾರ, ನವದೆಹಲಿ

ಪ್ರಿಯ ಪ್ರಧಾನ ಮಂತ್ರಿಯವರೇ,


ನಾನು ಒಂದು ಅತ್ಯಂತ ಮಹತ್ವದ ವಿಷಯದ ಬಗ್ಗೆ, ನಮ್ಮ ಬಹುಪಾಲು ಜನತೆಯ ಜೀವನ ಪರ್ಯಂತದ, ಮತ್ತು ಅದರಿಂದಾಗಿ ಭವಿಷ್ಯದ ಜೀವನೋಪಾಯದ ಭದ್ರತೆಯ ಉಳಿತಾಯಗಳಿಗೆ ಸಂಬಂಧಪಟ್ಟ ವಿಷಯದ ಬಗ್ಗೆ ಬರೆಯುತ್ತಿದ್ದೇನೆ. ಇದರತ್ತ ನಿಮ್ಮ ತುರ್ತು ಗಮನ ಮತ್ತು ಮಧ್ಯಪ್ರವೇಶದ ಅಗತ್ಯವಿದೆ.

ಇತ್ತೀಚಿನ ಆರ್‌ಬಿಐ ಹಣಕಾಸು ಸ್ಥಿರತೆ ವರದಿ ಮತ್ತೊಮ್ಮೆ ನಮ್ಮ ಬ್ಯಾಂಕಿಂಗ್ ವಲಯದ ಅಪಾಯಕಾರಿ ಸ್ಥಿತಿಯನ್ನು ಎತ್ತಿ ತೋರಿದೆ. ಮಾರ್ಚ್ 2016ರ ಕೊನೆಯ ವೇಳೆಗೆಲ್ಲ ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕು(ಎಸ್‌ಸಿಬಿ)ಗಳ ಒಟ್ಟು ಕಾರ್ಯಹೀನ ಆಸ್ತಿ(ಎನ್‌ಪಿಎ)ಗಳು ರೂ.5,60,822 ಕೋಟಿ, ಅವುಗಳ ಒಟ್ಟು ರೂ.72,73,927ಕೋಟಿ ಮುಂಗಡಗಳ 7.71%. ಇದಲ್ಲದೆ, ಪುನರ್ರಚಿತ ಸ್ಟಾಂಡರ್ಡ್ ಮುಂಗಡಗಳು ರೂ.2,94729 ಕೋಟಿ, ಒಟ್ಟು ಮುಂಗಡಗಳ 4.05%.

ಇದರ ಅರ್ಥ ನಮ್ಮ ಬ್ಯಾಂಕುಗಳು ಕೊಟ್ಟ ಎಂಟೂವರೆ ಲಕ್ಷ ಕೋಟಿ ರೂ.(ರೂ.8,55,551ಕೋಟಿ)ಗಳಿಗಿಂತಲೂ ಹೆಚ್ಚು ಸಾಲಗಳನ್ನು ಸಾಲ ಪಡೆದವರು ಹಿಂದಿರುಗಿಸಿಲ್ಲ. ಅವರ ಸ್ಪಂದನ ಮತ್ತು ಇದುವರೆಗೆ ನಿಮ್ಮ ಸರಕಾರದ ಕ್ರಿಯೆಯನ್ನು ನೋಡಿದರೆ, ಈ ಹಣ ಸದ್ಯಕ್ಕಂತೂ ಹಿಂದೆ ಬರುವ ಸಾಧ್ಯತೆಗಳು ಬಹಳ ಕಡಿಮೆ. ಈ ಸಾಲ ಪಡೆದವರು, ಪ್ರಧಾನವಾಗಿ ದೊಡ್ಡ ಕಾರ್ಪೊರೇಟ್‌ಗಳು ದುರುಪಯೋಗ ಪಡಿಸಿಕೊಂಡ ಈ ಹಣ ಪ್ರತಿಯೊಬ್ಬ ಭಾರತೀಯನ ಹಣ ಎಂದು ಬೇರೆ ಹೇಳಬೇಕಾಗಿಲ್ಲ.

ಜುಲೈ 01, 2016ರಂದು ಒಂದು ಸಾರ್ವಜನಿಕ ಸಮಾರಂಭದಲ್ಲಿ ಭಾರತದ ಮಹಾಲೆಕ್ಕ ಪರಿಶೋಧಕರು(ಸಿಎಜಿ), ಶಶಿಕಾಂತ ಶರ್ಮ "ಎನ್‌ಪಿಎಗಳಲ್ಲಿ ಒಂದು ಗಮನಾರ್ಹ ಭಾಗ ಬ್ಯಾಂಕಿಂಗ್ ವ್ಯವಸ್ಥೆಯಿಂದ ಮೋಸದಿಂದ ಪಡೆದ ಹಣವಾಗಿರಬಹುದು ಎಂಬ ಒಂದು ನಂಬಿಕೆಯಿದೆ. ಈ ಮೊತ್ತಗಳ ಒಂದು ದೊಡ್ಡ ಭಾಗ ವಿದೇಶಗಳಿಗೆ ವರ್ಗಾಯಿಸಲ್ಪಟ್ಟಿರಬಹುದು, ಅದು ಎಂದೂ ವಾಪಾಸಾಗುವುದಿಲ್ಲ ಎಂಬೊಂದು ನಂಬಿಕೆಯೂ ಇದೆ" ಎಂದು ಹೇಳಿರುವುದಾಗಿ ವರದಿಯಾಗಿದೆ.(ಬಿಸಿನೆಸ್ ಸ್ಟಾಂಡರ್ಡ್, 02 ಜುಲೈ).

ನಿಮ್ಮ ಚುನಾವಣಾ ಪ್ರಚಾರದ ವೇಳೆಯಲ್ಲಿ, ಪ್ರಧಾನ ಮಂತ್ರಿಯ ಅಧಿಕಾರ ಸ್ವೀಕರಿಸಿದ ಕೂಡಲೇ ವಿದೇಶಗಳಲ್ಲಿರುವ ಎಲ್ಲ ಕಪ್ಪು ಹಣವನ್ನು ಹಿಂದಕ್ಕೆ ತಂದು ಪ್ರತಿಯೊಬ್ಬ ಭಾರತೀಯನ ಬ್ಯಾಂಕ್ ಖಾತೆಯಲ್ಲಿ 15–20ಲಕ್ಷ ರೂ.ಗಳನ್ನು ಜಮಾ ಮಾಡುವುದಾಗಿ ಕೊಟ್ಟಿರುವ ನಿಮ್ಮ ಭರವಸೆ ಪ್ರಖ್ಯಾತವಾಗಿದೆ. ಆ ಹಣವನ್ನು ಹಿಂದಕ್ಕೆ ತರುವ ನಿಮ್ಮ ಭರವಸೆ ಅಂತಿರಲಿ, ಬ್ಯಾಂಕಿಂಗ್ ವ್ಯವಸ್ಥೆಯಿಂದ ಹಣವನ್ನು ನೀವು ನೋಡುತ್ತಿರುವಂತೆಯೇ, ದೇಶದ ಅತ್ಯುನ್ನತ ಲೆಕ್ಕ ಪರಿಶೋಧಕರನ್ನು ನಂಬುವುದಾದರೆ, "ವಿದೇಶಕ್ಕೆ ವರ್ಗಾಯಿಸಲಾಗಿದೆ ಮತ್ತು ಅದನ್ನೆಂದೂ ವಾಪಾಸು ಪಡೆಯಲಿಕ್ಕೆ ಆಗಲಿಕ್ಕಿಲ್ಲ."



ವ್ಯಂಗ್ಯಚಿತ್ರ ಕೃಪೆ: ಗೋಕುಲ್, ಡಿ.ಎನ್.ಎ

ನಮ್ಮ ಸಾರ್ವಜನಿಕ ವಲಯದ ಬ್ಯಾಂಕುಗಳ(ಪಿಎಸ್‌ಬಿ) ಆಸ್ತಿ ಗುಣಮಟ್ಟ ಇನ್ನೂ ಹೆಚ್ಚು ವಿಷಮಾವಸ್ಥೆಯಲ್ಲಿದೆ. ಪ್ರಯಾಸಕರ ಮುಂಗಡಗಳ ಅನುಪಾತ ಮಾರ್ಚ್ 2016ರ ವೇಳೆಗೆ 14.5% ಇದೆ. ಪಿಎಸ್‌ಬಿಗಳ ಸಂದೇಹಾಸ್ಪದ ಮತ್ತು ನಷ್ಟದ ಆಸ್ತಿಗಳಿಗೆ ಎತ್ತಿಟ್ಟ ಹಣ ಈಗ ರೂ.1,85,840 ಕೋಟಿ. ಫಲಿತಾಂಶವಾಗಿ ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳು ರೂ.20,950 ಕೋಟಿ ನಿವ್ವಳ ನಷ್ಟ ತೋರಿಸಿವೆ. ನಿಜ ಹೇಳಬೇಕೆಂದರೆ, ಪಿಎಸ್‌ಬಿಗಳ ಒಟ್ಟು ಮಾರುಕಟ್ಟೆ ಮೌಲ್ಯ, ಅವುಗಳಿಗೆ ಬರಬೇಕಾದ ಒಟ್ಟು ಜಿಎನ್‌ಪಿಎ ಗಳಿಗಿಂತ ಎಷ್ಟೋ ಕಡಿಮೆ. ಇದೊಂದು ಅತ್ಯಂತ ಗಾಬರಿಯ ಸನ್ನಿವೇಶ.

ನಿಮಗೆ ಚೆನ್ನಾಗಿ ತಿಳಿದಿದೆ, ಅತ್ಯಂತ ಮೇಲಿನ ಹತ್ತು ಕಾರ್ಪೊರೇಟ್ ಮನೆತನಗಳು ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಮತ್ತು ಹಣಕಾಸು ಸಂಸ್ಥೆಗಳಿಗೆ ಪಾವತಿಮಾಡಬೇಕಾದ ಬಾಕಿ ಮೊತ್ತ ತತ್ತರಗೊಳಿಸುವಂತದ್ದು, 7 ಲಕ್ಷ ಕೋಟಿ ರೂ.ಗಳು ಎಂದು. ಕಳೆದ ವರ್ಷದ ಒಂದು ವರದಿಯ ಪ್ರಕಾರ, ಅದಾಣಿ ಗುಂಪು ಒಟ್ಟು ರೂ.96,031 ಕೋಟಿ ಸಾಲ ಹೊಂದಿತ್ತು, ಎಸ್ಸಾರ್ ಗುಂಪು ರೂ.1.01 ಲಕ್ಷ ಕೋಟಿ, ಜಿಎಂಆರ್ ಗುಂಪು ರೂ.47,976 ಕೋಟಿ, ಜಿವಿಕೆ ಗುಂಪು ರೂ.33,933 ಕೋಟಿ, ಜೇಪೀ ಗುಂಪು ರೂ.75,163 ಕೋಟಿ, ಜೆಎಸ್‌ಡಬ್ಲ್ಯು ಗುಂಪು ರೂ. 58,171 ಕೋಟಿ, ಲಂಕೊ ಗುಂಪು ರೂ.47,102 ಕೋಟಿ, ರಿಲಯಂಸ್ ಗುಂಪು ರೂ.1.25 ಲಕ್ಷ ಕೋಟಿ, ವೆದಾಂತ ಗುಂಪು 1.03 ಲಕ್ಷ ಕೋ ಮತ್ತು ವಿಡಿಯೊಕೊನ್ ಗುಂಪು ರೂ.45,405 ಕೋಟಿ ರೂ. ಸಾಲಗಳನ್ನು ಹೊಂದಿವೆ.(ಕ್ರೆಡಿಟ್‌ಸ್ಯುಸ್ಸೆ ವರದಿ)

ರಿಝರ್ವ್ ಬ್ಯಾಂಕ್ ಆಫ್ ಇಂಡಿಯಾ ದ ಪ್ರಕಾರ, ಬ್ಯಾಂಕುಗಳ ಒಟ್ಟು ಎನ್‌ಪಿಎಗಳಲ್ಲಿ ಮೇಲಿನ 100 ಸಾಲಗಾರರ ಜಿಎನ್‌ಪಿಎ ಮಾರ್ಚ್ 2016ರ ವೇಳೆಗೆ 19.3% ಆಗಿತ್ತು, ಮಾರ್ಚ್ 2015ರಲ್ಲಿ ಇದ್ದದ್ದು 0.7%.

ಕಳೆದ ಒಂದು ವರ್ಷದಲ್ಲಿ ಎನ್‌ಪಿಎಗಳು ಸುಮಾರು 80%ದಷ್ಟು ಏರಿದರೂ, ಹೆಚ್ಚಿನ ಬಾಕಿ ವಸೂಲಿಗೆ ನಿಮ್ಮ ಸರಕಾರದ ಪ್ರಯತ್ನಗಳು ಅದಕ್ಕನುಗುಣವಾದ ಏರಿಕೆಯನ್ನು ಬಾಕಿ ವಸೂಲಿಯ ನಿರ್ಧಾರದಲ್ಲಿ ತೋರಿಸಿಲ್ಲ ಎಂಬುದನ್ನು ಗಮನಿಸಬೇಕಾಗಿರುವುದು ಬೇಸರದ ಸಂಗತಿ. ಹಣಕಾಸು ವರ್ಷ 2015–16ರಲ್ಲಿ ಎಲ್ಲ ಸಾರ್ವಜನಿಕ ವಲಯದಲ್ಲಿನ ಒಟ್ಟು ಸಾಲ ಬಾಕಿ ವಸೂಲಿ ರೂ.1.28ಲಕ್ಷ ಕೋಟಿ, ಇದರಲ್ಲಿ ಈ ಮೊತ್ತದ 46%ದಷ್ಟು ಮನ್ನಾ ಆದ ಮೊತ್ತವೂ ಸೇರಿದೆ. ಹಣಕಾಸು ವರ್ಷ 2014–15ರಲ್ಲಿ ಬಾಕಿ ವಸೂಲಿ ಅದಾಗಲೇ ರೂ.1.27ಲಕ್ಷ ಕೋಟಿ ರೂ. ಆಗಿತ್ತು. ಇದು ನಿಮ್ಮ ಸರಕಾರ ಈ ಸುಸ್ತಿದಾರರಿಂದ ಸಾರ್ವಜನಿಕ ಹಣವನ್ನು ವಸೂಲಿ ಮಾಡುವ ಬಗ್ಗೆ ಕಾಳಜಿ ಹೊಂದಿಲ್ಲ ಎಂಬ ಅಭಿಪ್ರಾಯಕ್ಕೆ ಎಡೆ ಮಾಡಿಕೊಡುತ್ತದೆ.


ಇವುಗಳಲ್ಲಿ ಬಹಳಷ್ಟು ತಥ್ಯಗಳು ನಮ್ಮ ಗಮನಕ್ಕೆ ಬಂದಿರುವುದು ರಘುರಾಮ ರಾಜನ್ ಅಡಿಯಲ್ಲಿ ರಿಝರ್ವ್ ಬ್ಯಾಂಕ್ ಆಫ್ ಇಂಡಿಯಾ(ಆರ್‌ಬಿಐ) ಕೈಗೊಂಡ 'ಆಸ್ತಿ ಗುಣಮಟ್ಟ ಪರಾಮರ್ಶೆ'(ಏಕ್ಯುಆರ್)ಯಿಂದ. ನಿಮ್ಮ ಪಕ್ಷದ ಎಂಪಿಗಳು ಮತ್ತು ಮುಖಂಡರಿಂದ ಸತತವಾಗಿ ಟೀಕೆಗೊಳಗಾಗಿರುವ ಶ್ರೀಯುತ ರಾಜನ್ ಈಗ ಸಪ್ಟಂಬರ್‌ನಲ್ಲಿ ತಮ್ಮ ಹುದ್ದೆ ಬಿಡುತ್ತಿದ್ದಾರೆ, ಆದರೆ ಈ ಏಕ್ಯುಆರ್ ಪ್ರಕ್ರಿಯೆ ಮುಂದಿನ ಮಾರ್ಚ್‌ನಲ್ಲಿ ಕೊನೆಗೊಳ್ಳುತ್ತದೆ. ಒಬ್ಬ ಮಹತ್ವದ ಸಂವಿಧಾನಿಕ ಕಾರ್ಯನಿರ್ವಾಹಕನ ಮೇಲೆ ಕುತ್ಸಿತ ದಾಳಿಗಳು ನಡೆಯುತ್ತಿದ್ದಾಗ ನಿಮ್ಮ ಮೌನದಿಂದಾಗಿ ಕೆಟ್ಟಸಾಲಗಳನ್ನು ಸ್ವಚ್ಛಗೊಳಿಸುವ ಪ್ರಯೋಗವನ್ನು ಪೂರ್ಣಗೊಳಿಸುವಲ್ಲಿ ನಿಮಗೆ ಆಸಕ್ತಿಯಿಲ್ಲ ಎಂದು ಬಹಳ ಮಂದಿ ನಂಬುವಂತೆ ಮಾಡಿದೆ. ಇದು, ನಿಮ್ಮ ಸರಕಾರ 'ಚಮಚಾ ಬಂಡವಾಳಶಾಹಿ'ಯನ್ನು ಸಕ್ರಿಯವಾಗಿ ಪೋಷಿಸುತ್ತದೆ ಮತ್ತು ಪ್ರೋತ್ಸಾಹಿಸುತ್ತದೆ ಎಂಬ ತೀರ್ಮಾನಕ್ಕೆ ಬರುವುದಲ್ಲದೆ ಬೇರಾವ ವಿವರಣೆಯೂ ಇಲ್ಲದಂತೆ ಮಾಡಿದೆ.

ನಿಮ್ಮ ಕಚೇರಿ ಆರ್‌ಬಿಐನ ಬಂಡವಾಳ ನೆಲೆಯಿಂದ 3 ರಿಂದ 4ಲಕ್ಷ ಕೋಟಿ ರೂ.ಗಳನ್ನು ಬಳಸಿ ಪಿಎಸ್‌ಬಿಗಳ ಮರು ಬಂಡವಾಳೀಕರಣಕ್ಕೆ ಬಳಸುವ ಒಂದು ಯೋಜನೆಯನ್ನು ಸೂಚಿಸಿದೆ ಎಂದು ಇತ್ತೀಚಿನ ಮಾಧ್ಯಮ ವರದಿಗಳು ಸೂಚಿಸುತ್ತಿವೆ. ಇದೊಂದು ಅಪಾಯಕಾರಿ ವಿಚಾರ, ಏಕೆಂದರೆ ಇದು ಆಂತರಿಕ ಮತ್ತು ಬಾಹ್ಯ ಆರ್ಥಿಕ ಆಘಾತಗಳನ್ನು ಎದುರಿಸಿ ನಿಲ್ಲುವ ಆರ್‌ಬಿಐನ ಸಾಮರ್ಥ್ಯವನ್ನು ಕುಂಠಿತಗೊಳಿಸುತ್ತದೆ.

ಆರ್‌ಬಿಐ ಇದುವರೆಗೆ ಒಂದು ಉತ್ಕಟವಾಗಿ ಸ್ವತಂತ್ರವಾಗಿರುವ ಸಂಸ್ಥೆಯಾಗಿದೆ, ಈಗ ಇಂತಹ ಒಂದು ಆದೇಶವನ್ನು ಅನುಸರಿಸಿದರೆ, ಈ ಕೇಂದ್ರೀಯ ಬ್ಯಾಂಕ್ ಒಂದು ಸರಕಾರೀ ಉಪಕರಣವಾಗಿ ಕಾಣ ಬರುತ್ತದೆ. ಅಲ್ಲದೆ, ಈ ಬ್ಯಾಂಕುಗಳ ಮಾಲಕನಾದಾಗ, ಆರ್‌ಬಿಐಗೆ ಮಿಶ್ರ ಗುರಿಗಳು ಬರುತ್ತವೆ, ಏಕೆಂದರೆ ಇದು ಹಣಕಾಸು ಧೋರಣೆಯನ್ನು ನಡೆಸಬೇಕಾಗಿದೆ ಮತ್ತು ನಿಯಂತ್ರಿಸ ಬೇಕಾಗಿದೆ.

ಬೇರೆ ಯಾರೂ ಅಲ್ಲ, ಸ್ವತಃ ಆರ್‌ಬಿಐ ಗವರ್ನರ್ ಅವರೇ ಈ ವರ್ಷದ ವಾರ್ಷಿಕ ಆರ್ಥಿಕ ಸರ್ವೆಯಲ್ಲಿ ಮೊದಲ ಬಾರಿಗೆ ತೇಲಬಿಟ್ಟ ಈ ವಿಚಾರವನ್ನು ವಿರೋಧಿಸಿದ್ದಾರೆ. ಕಳೆದ ತಿಂಗಳು ಬೆಂಗಳೂರಿನಲ್ಲಿ ಒಂದು ಭಾಷಣದಲ್ಲಿ ಶ್ರೀಯುತ ರಾಜನ್ "ಆರ್ಥಿಕ ಸರ್ವೆ ಆರ್‌ಬಿಐ ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಬಂಡವಾಳ ಒದಗಿಸಬೇಕೆಂದು ಸೂಚಿಸಿದೆ. ಇದು ಮುಂದುವರೆಯುವ ಒಂದು ಅಪಾರದರ್ಶಕ ದಾರಿಯಾಗಿ ಕಾಣಿಸುತ್ತದೆ, ಬ್ಯಾಕಿಂಗ್ ನಿಯಂತ್ರಕ ಮತ್ತೊಮ್ಮೆ ಬ್ಯಾಂಕುಗಳ ಮಾಲಕತ್ವದ ವ್ಯವಹಾರಕ್ಕೆ ಬರುವಂತಾಗುತ್ತದೆ, ಅದರೊಂದಿಗೇ ಹಿತಾಸಕ್ತಿಗಳ ತಿಕ್ಕಾಟ ತರುತ್ತದೆ" ಎಂದಿದ್ದರು(ಆರ್‌ಬಿಐ ವೆಬ್‌ತಾಣ). ಇಂತಹ ಹಿತಾಸಕ್ತಿಗಳ ತಿಕ್ಕಾಟವನ್ನು ತಪ್ಪಿಸಲಿಕ್ಕೆಂದೇ ಮಲೆಗಾಮ್ ಸಮಿತಿಯ ಶಿಫಾರಸಿನಂತೆ 2007ರಲ್ಲಿ ಸ್ಟೇಟ್ ಬ್ಯಾಂಕ್ ಆಫ್

ಪುಟ 10 ಕ್ಕೆ



ವ್ಯಂಗ್ಯ ಚಿತ್ರ ಕೃಪೆ: ಅಧ್ವರ್ಯೂ, ಟೈಮ್ಸ್ ಆಫ್ ಇಂಡಿಯಾ

8.5ಲಕ್ಷ ಕೋಟಿ ರೂ.ಗಳ ಮಹಾ ಹಗರಣ........ ಪುಟ 9 ರಿಂದ

ಇಂಡಿಯಾದಲ್ಲಿದ್ದ ಆರ್‌ಬಿಐನ 59.7% ಪಾಲನ್ನು ಭಾರತ ಸರಕಾರ ರೂ.35,531 ಕೋಟಿಗೆ ಖರೀದಿಸಿತು ಎಂಬುದನ್ನು ನೆನಪಿಸಿಕೊಳ್ಳಬೇಕು ಎಂದು ನಾನು ನಿಮ್ಮನ್ನು ಆಗ್ರಹಿಸುತ್ತೇನೆ.

ಅಲ್ಲದೆ, ಈ ವಿಚಾರವನ್ನು ವಾರ್ಷಿಕ ಆರ್ಥಿಕ ಸರ್ವೆಯಲ್ಲಿ ಮುಂದಿಡುತ್ತ ಮುಖ್ಯ ಆರ್ಥಿಕ ಸಲಹೆಗಾರರು (ಸಿಇಎ) "ಬಹಳ ಮಹತ್ವದ್ದೆಂದರೆ, ಇಂತಹ ಯಾವುದೇ ನಡೆಯನ್ನು ಸರಕಾರ ಮತ್ತು ಆರ್‌ಬಿಐ ಜಂಟಿಯಾಗಿ ಮತ್ತು ಸಹಕಾರದಿಂದ ಆರಂಭಿಸಬೇಕಾಗುತ್ತದೆ. ಬಂಡವಾಳವನ್ನು ಯಾವುದೇ ರೀತಿಯಲ್ಲಿ ಮರುನೆಲೆಗೊಳಿಸುವುದರಿಂದ ಆರ್‌ಬಿಐನ ಸಮಗ್ರತೆ, ಮತ್ತು ಹಣಕಾಸು ಸ್ವಾಸ್ಥ್ಯವನ್ನು ಉಳಿಸಿಕೊಳ್ಳುವುದು– ಮತ್ತು ಅದು ಹಾಗೆ ಕಾಣುವುದು– ಕೂಡ ನಿರ್ಣಾಯಕವಾಗುತ್ತದೆ" ಎಂದು ಸ್ಪಷ್ಟವಾಗಿ ಎಚ್ಚರಿಸಿದ್ದರು (ಇಕನಾಮಿಕ್ ಸರ್ವೆ 2015–16).

ಸಿಇಎಯವರ ಎಚ್ಚರಿಕೆಯ ಪ್ರಕಾರ ಬ್ಯಾಂಕುಗಳ ಮರುಬಂಡವಾಳೀಕರಣವನ್ನು ಆರ್‌ಬಿಐನ ಬಂಡವಾಳ ನೆಲೆಯಿಂದ ಮಾಡುವ ನಡೆಯನ್ನು, ಸ್ವತಃ ಆರ್‌ಬಿಐ ಗವರ್ನರ್ ಅವರೇ ವಿರೋಧಿಸಿರುವುದರಿಂದ ಈಗಲೇ ಕೈಬಿಡಬೇಕು. ಸರಕಾರ ಆರ್‌ಬಿಐನ ಬಂಡವಾಳ ನೆಲೆಯನ್ನು ಕ್ಷಯಿಸಿ ತನ್ನ ಹಣಕಾಸು ಕೊರತೆ ಹೆಚ್ಚಾಗದಂತೆ ನೋಡಿಕೊಳ್ಳುವ ಗುಟ್ಟಿನ ಪ್ರಯತ್ನಗಳನ್ನು ನಡೆಸುವ ಬದಲು ಅದಕ್ಕೆ ಒಂದು ಪಾರದರ್ಶಕ ದಾರಿಯನ್ನು ಕಂಡುಕೊಳ್ಳಬೇಕು.

ಯಾವುದೇ ಸಂದರ್ಭದಲ್ಲಿ ಮರುಪಾವತಿ ಮಾಡದ ಸಾಲಗಳ ವಸೂಲಿಗೆ ಒಂದು ಕ್ರಿಯಾ ಯೋಜನೆ ಇಲ್ಲದೆ ಬ್ಯಾಂಕುಗಳ ಮರುಬಂಡವಾಳೀಕರಣದ ಯೋಜನೆಯನ್ನು ಕಾರ್ಯಗತ ಮಾಡಬಾರದು. ನಿಮ್ಮ ಸರಕಾರ ಸಾಲಗಳನ್ನು ಹಿಂದಿರುಗಿಸುವಂತೆ ದೊಡ್ಡ ವ್ಯಾಪಾರೀ ಮನೆತನಗಳ ಮೇಲೆ ಯಾವುದೇ ಒತ್ತಡವನ್ನು ಹಾಕಿಲ್ಲ. ಅವರು ತಮ್ಮ ವೈಭವೋಪೇತ ಜೀವನ ಶೈಲಿಯನ್ನು ಪ್ರದರ್ಶಿಸುತ್ತಲೇ ಇದ್ದಾರೆ, ಅವರ ವೈಯಕ್ತಿಕ ಸಂಪತ್ತು ಅಬಾಧಿತವಾಗಿಯೇ ಇದೆ. ಅತ್ತ ಚಮಚಾ ಬಂಡವಾಳಶಾಹಿಗಳು ಮಜಾ ಮಾಡುತ್ತಿದ್ದರೆ, ನಿಮ್ಮ ಸರಕಾರ ಬಡ ರೈತರೊಂದಿಗೆ ಕಠಿಣವಾಗಿ ವರ್ತಿಸುತ್ತಿದೆ, ಸತತ ಎರಡು ವರ್ಷಗಳ ಬರಗಾಲದ ದಾಳಿಯಿಂದ ವಿನಾಶ ಹೊಂದಿರುವ ಅವರಿಗೆ ಕೆಲವು ಸಾವಿರ ರೂಪಾಯಿಗಳ ಸಾಲ ತೀರಿಸಲಾಗದೆ ತಮ್ಮ ಮನೆಯ ಪಾತ್ರೆಪಗಡಗಳನ್ನು, ಜಾನುವಾರುಗಳನ್ನು ಕಿತ್ತು ಒಯ್ಯುವುದನ್ನು ನೋಡುವಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ!

ನೀವು, ಪ್ರಧಾನ ಮಂತ್ರಿಯಾಗಿ, ಅತ್ಯಂತ ಮೇಲಿನ 100 ಸಾಲಗಾರರಿಂದ ಬಾಕಿ ಬರಬೇಕಾದ ಸಾಲಗಳ ವಸೂಲಿ ಆರಂಭಿಸಲು ಒಂದು ತುರ್ತಾದ ಕ್ರಿಯಾಯೋಜನೆಯನ್ನು ಆಚರಣೆಗೆ ತರಬೇಕು ಎಂದು ಆಗ್ರಹಿಸುತ್ತೇನೆ. ನೀವು ಅವರ ಹೆಸರುಗಳನ್ನು, ಅವರ ಬಾಕಿ ಮೊತ್ತವನ್ನು ಸಾರ್ವಜನಿಕಗೊಳಿಸುವುದರೊಂದಿಗೆ ಆರಂಭಿಸಬೇಕು; ಆ ಪಟ್ಟಿ ಈಗಾಗಲೇ ಆರ್‌ಬಿಐ, ನಿಮ್ಮ ಸರಕಾರ ಮತ್ತು ಸುಪ್ರಿಂ ಕೋರ್ಟ್ ಬಳಿ ಲಭ್ಯವಿದೆ. ಸುಸ್ತಿದಾರರ ಎಲ್ಲ ಆಸ್ತಿಗಳನ್ನು ಹಣವಾಗಿ ಪರಿವರ್ತಿಸುವ ವರೆಗೆ ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಇನ್ನು ಮುಂದೆ ಸಾರ್ವಜನಿಕರ ಹಣವನ್ನು ಕೊಡಬಾರದು. ಹೀಗೆ ಮಾಡಲು ವಿಫಲವಾದರೆ ನಿಮ್ಮ ಸರಕಾರ ಈ ಚಮಚಾ ಬಂಡವಾಳಶಾಹಿಗಳ ದುಂದುವೆಚ್ಚಕ್ಕೆ ಬಡ ಭಾರತೀಯರು ಬೆಲೆ ತೆರುವಂತೆ ಮಾಡುತ್ತಿದೆಯೆಂದೇ ಅರ್ಥವಾಗುತ್ತದೆ.

ಕೊನೆಯದಾಗಿ, ಈ ವಿಷಯವನ್ನು ನೀವು ಪೂರ್ಣ ಗಂಭೀರತೆಯಿಂದ ಪರಿಶೀಲಿಸಬೇಕು, ಎಲ್ಲ ಸುಸ್ತಿದಾರರ ಹೆಸರುಗಳನ್ನು ಮತ್ತು ಮೊತ್ತಗಳನ್ನು ಸಾರ್ವಜನಿಕ ಗೊಳಿಸುವುದರಿಂದ ಆರಂಭಿಸಿ ಅವರ ಆಸ್ತಿಗಳನ್ನು ಹಣವಾಗಿಸುವ ಒಂದು ಕ್ರಿಯಾಯೋಜನೆಯನ್ನು ಆರಂಭಿಸಬೇಕು ಎಂದು ಮತ್ತೊಮ್ಮೆ ಬುದ್ಧಿವಾದ ಹೇಳಬಯಸುತ್ತೇನೆ. ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಮರುಬಂಡವಾಳ ಒದಗಿಸಲು ರಿಝರ್ವ್ ಬ್ಯಾಂಕಿನ ಬಂಡವಾಳ ನೆಲೆಯನ್ನು ಕ್ಷಯಿಸುವ ಯೋಜನೆಯನ್ನು ಕೈಬಿಡಬೇಕು. ನಿಮ್ಮ ಸರಕಾರ ವಸೂಲಿ ಮೊದಲು, ನಂತರ ಮರುಬಂಡವಾಳೀಕರಣ ಎಂಬ ನೀತಿಯನ್ನು ವಾಚಾ, ಮನಸಾ ಅನುಸರಿಸಬೇಕು. ಹಾಗೆ ಮಾಡಲು ವಿಫಲವಾದರೆ, ನಿಮ್ಮ ಸರಕಾರ ಕೆಟ್ಟಮಾರ್ಗದಿಂದ ಗಳಿಸಿದ ಹಣದ ಶಕ್ತಿಗೆ ಋಣಿಯಾಗಿಯೇ ಉಳಿಯುತ್ತದೆ, ಆಮೂಲಕ ಚಮಚಾ ಬಂಡವಾಳಶಾಹಿಯನ್ನು ಪೋಷಿಸುತ್ತದೆ ಮತ್ತು ಪ್ರೋತ್ಸಾಹಿಸುತ್ತದೆ ಎಂಬುದನ್ನು ದೃಢಪಡಿಸಿದಂತಾಗುತ್ತದೆಯಷ್ಟೇ.

ನಿಮ್ಮ ವಿಶ್ವಾಸಿ,

ಸೀತಾರಾಮ್ ಯೆಚೂರಿ

ಸಮಾನ ಕೆಲಸಕ್ಕೆ ಸಮಾನ ವೇತನ............ ಪುಟ 8 ರಿಂದ

ಮುಂದಿಟ್ಟಿದೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು, ಮಾಲೀಕರ ಸಂಘಟನೆಗಳು ಮತ್ತು ಕೇಂದ್ರ ಕಾರ್ಮಿಕ ಸಂಘಟನೆಗಳನ್ನು ಒಳಗೊಂಡ ತ್ರಿಪಕ್ಷೀಯ ಭಾರತೀಯ ಕಾರ್ಮಿಕ ಸಮ್ಮೇಳನ (ಇಂಡಿಯನ್ ಲೇಬರ್ ಕಾನ್ಫರೆನ್ಸ್)ಕ್ಕಿಂತ ಹೆಚ್ಚು ವಿಶಾಲವಾದ ಸಮಾಲೋಚನೆ ಇರಲು ಸಾಧ್ಯವೇ?

ಈ ಮಧ್ಯೆ ಕಾರ್ಮಿಕ ಸಚಿವಾಲಯವು ಮತ್ತೊಂದು ಕುಚೋದ್ಯವನ್ನು ಮಾಡಿದೆ.

ದಿನಾಂಕ: 30.03.2016 ರಂದು ಅದು ಒಂದು ಪ್ರಕಟಣೆ ಮಾಡಿದೆ. ಅದರಲ್ಲಿ ಕೇಂದ್ರ ಕಾಯಿದೆಯ ಪರಿಚ್ಛೇದ 25 (2) (4) ಕ್ಕೆ ತಿದ್ದುಪಡಿಗಳು ಕರಡನ್ನು ಪ್ರಕಟಿಸಿ, ಒಂದು ತಿಂಗಳೊಳಗೆ ಸಲಹೆಗಳನ್ನು ಆಹ್ವಾನಿಸಿದೆ. ಈ ಕರಡು ತಿದ್ದುಪಡಿಯ ಪ್ರಕಾರ, ಗುತ್ತಿಗೆ ಕಾರ್ಮಿಕರ ಕನಿಷ್ಠ ಕೂಲಿಯು, ಆಯಾ ರಾಜ್ಯಗಳ ಶಾಸನಬದ್ಧ ಕನಿಷ್ಠ ಕೂಲಿ, ಯಾವುದೇ ಒಪ್ಪಂದಗಳ ಪ್ರಕಾರ ನಿರ್ಧರಿಸಿದ ಕನಿಷ್ಠ ಕೂಲಿ ಅಥವಾ ರೂ. 10,000/– ಇವುಗಳಲ್ಲಿ ಯಾವುದು ಹೆಚ್ಚಿನದೋ ಅದು ಆಗಬೇಕಾಗುತ್ತದೆ. ಅಲ್ಲದೇ ತಕ್ಷಣವೇ ಪ್ರಕಟಣೆಯನ್ನು (ವೆಬ್‌ಸೈಟ್) ನಲ್ಲಿ ಪ್ರಕಟಿಸುವ ಮೂಲಕ, ಕನಿಷ್ಠ 10,000/– ರೂ.ಗಳ ವೇತನವು ಗುತ್ತಿಗೆ ಕಾರ್ಮಿಕರಿಗೆ ದೊರೆಯುತ್ತದೆಂದು ದೇಶದಾದ್ಯಂತ ಮಾಧ್ಯಮಗಳ ಮೂಲಕ ಸುದ್ದಿ ಹರಡಿಸಲಾಗಿದೆ.

ವಸ್ತುಸ್ಥಿತಿಯೇನು? ನಿಯಮಗಳಿಗೆ ತಿದ್ದುಪಡಿಯಾಗಿ ಪ್ರಕಟಿಸುವಾಗ ಈ ನಿಯಮವನ್ನು ಕಾನೂನಿನ ಪ್ರಕಾರ ಜಾರಿಗೊಳಿಸಲು ಸಾಧ್ಯವಿಲ್ಲವೆಂಬುದು ಕಾರ್ಮಿಕ ಸಚಿವಾಲಯಕ್ಕೆ ತಿಳಿದೇ ಇತ್ತು. ಈ ನಿಯಮದ ನಂತರವೇ ಇರುವ ನಿಯಮದ ಮೇಲೆ ಹೇಳಿದ ಪರಿಚ್ಛೇದ 25(2)(v)(a)ರಲ್ಲಿ ಖಾಯಂ ನೌಕರರಿಗೆ ನೀಡುವ ವೇತನ ಮತ್ತು ಸೌಲಭ್ಯಗಳನ್ನು ಗುತ್ತಿಗೆ ಕಾರ್ಮಿಕರಿಗೆ ನೀಡಬೇಕೆಂದು ದಾಖಲೆಯಲ್ಲಿ ಕಳೆದ ನಾಲ್ಕು ದಶಕಗಳಿಂದಲೂ ಇದೆ.

ಸಮಾನ ಕೆಲಸಕ್ಕೆ ವೇತನ ನೀಡಬೇಕೆಂಬ ನಿಯಮ ಜಾರಿ ಮಾಡಿರುವ ಒಂದಾದರೂ ಉದ್ಯಮ ನೋಡಲು ದೊರಕುತ್ತದೆಯೇ? ಅದು ಸಾಧ್ಯವೇ ಇಲ್ಲ. ಏಕೆಂದರೆ, ಅದನ್ನು ಕಾನೂನಿನ ಪ್ರಕಾರ ನ್ಯಾಯಾಲಯದ ಮೂಲಕವೂ ಜಾರಿಗೊಳಿಸಲು ಸಾಧ್ಯವಿಲ್ಲ. ಈ ನಿಯಮಗಳನ್ನು ಮೂಲ ಕಾಯ್ದೆಯ ವ್ಯಾಪ್ತಿಗೆ ವರ್ಗಾಯಿಸುವ ವರೆಗೆ ಅವುಗಳನ್ನು ಕಾನೂನಿನ ಪ್ರಕಾರ ಜಾರಿಗೊಳಿಸಲಾಗುವುದಿಲ್ಲ. ಅದುವರೆಗೆ ಕಾರ್ಮಿಕರ ಶೋಷಣೆ ಮುಂದುವರೆಯುತ್ತದೆ.

ಕಾನೂನು ಮಂತ್ರಿಗಳ ಕಛೇರಿಯಾದ "ಶ್ರಮಶಕ್ತಿ ಭವನ" ದಲ್ಲಿ ಈ ನಿಯಮಗಳನ್ನು ಜಾರಿಗೊಳಿಸಲಾಗಿದೆಯೇ ಎಂದು ದಿ॥ 04.05.2016 ರಂದು ರಾಜ್ಯ ಸಭೆಯಲ್ಲಿ ಪ್ರಶ್ನಿಸಲಾಯಿತು. ಇದಕ್ಕೆ ಅವರು ಹೌದು ಎಂಬ ಉತ್ತರ ನೀಡಲಾಗಲಿಲ್ಲ, ಅದರಿಂದ ತಪ್ಪಿಸಿಕೊಂಡರು.

ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ರೂ.10,000/– ಕನಿಷ್ಠ ವೇತನ ನೀಡುವ ತಿದ್ದುಪಡಿ ಪ್ರಕಟಣೆಯ ಉದ್ದೇಶ, ಕಾರ್ಮಿಕರ ಮಧ್ಯೆ ಸರ್ಕಾರವು ಗುತ್ತಿಗೆ ಕಾರ್ಮಿಕರ ಕನಿಷ್ಠ ವೇತನದಲ್ಲಿ ಸುಧಾರಣೆ ಮಾಡುತ್ತಿದೆ ಎಂಬ ಸುಳ್ಳು ಭರವಸೆ ಮೂಡಿಸುವುದಾಗಿದೆ. ಇದಲ್ಲದೇ ಈಗಿರುವ ನಿಯಮಗಳನ್ನು ಹಾಗೆಯೇ ಉಳಿಸುವ ಮೂಲಕ "ಚಿಂತೆ ಮಾಡಬೇಡಿ, ನೀವು ಅವುಗಳನ್ನು ಜಾರಿಗೊಳಿಸಬೇಕಾಗಿಲ್ಲ" ಎಂಬ ಸಂದೇಶವನ್ನು ಮಾಲಕರಿಗೆ ನೀಡುತ್ತಿದೆ. ಇದು ಕಾರ್ಮಿಕ ವರ್ಗ ವಂಚಿಸುವುದಲ್ಲದೇ ಬೇರೇನನ್ನೂ ಅಲ್ಲ.

ನಿಜ, ಸರ್ಕಾರ ಮತ್ತು ಅದರ ಕಾರ್ಮಿಕ ಸಚಿವರು ಒಂದು ತುಂಡು ಸತ್ಯವನ್ನು ಹೇಳುತ್ತಿದ್ದಾರೆ ಎಂದು ಶ್ಲಾಘಿಸಲೇ ಬೇಕು! ಕಾಂಟ್ರಾಕ್ಟ್ ದುಡಿಮೆ(ನಿಯಂತ್ರಣ ಮತ್ತು ನಿರ್ಮೂಲನಾ) ಕಾಯ್ದೆ, 1970ನ್ನು ಸಮಗ್ರವಾಗಿ ಬದಲಿಸಲು ಅವರು ಹಗಲು–ರಾತ್ರಿಯೆನ್ನದೆ ಶ್ರಮಿಸುತ್ತಿದ್ದಾರೆ ಎಂಬ ಸತ್ಯವದು.

ಕೇಂದ್ರದಲ್ಲಿರುವ ಮತ್ತು ಹೆಚ್ಚಿನ ರಾಜ್ಯಗಳ ಸರಕಾರಗಳು ಖಾಯಂ ಹಾಗೂ ನಿರಂತರ ಸ್ವರೂಪದ ಬಹುಪಾಲು ಕೆಲಸಗಳನ್ನು ಗುತ್ತಿಗೀಕರಿಸುವುದರಲ್ಲಿ, ಅದಕ್ಕೆ ಪ್ರೋತ್ಸಾಹ ನೀಡುವುದರಲ್ಲಿ ತೊಡಗಿದ್ದಾರೆ. ಅದನ್ನು ಮುಂದುವರೆಸಿ ಆ ಕಾನೂನುಬಾಹಿರ ಕ್ರಮಗಳನ್ನು ಕಾನೂನುಬದ್ಧಗೊಳಿಸುವುದೇ ಅವರ ಹುನ್ನಾರ. ಈ ದಿಕ್ಕಿನಲ್ಲಿ ರಾಜಸ್ಥಾನ ಸರ್ಕಾರವು ಮುಂಚೂಣಿಯಲ್ಲಿದ್ದರೆ, ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ಸರ್ಕಾರಗಳ ಆ ದುಷ್ಪ್ರಕ್ರಮವನ್ನೇ ನಕಲು ಮಾಡುತ್ತಾ ರಾಜಸ್ಥಾನದ ಮಾದರಿಯ ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಬೇಕೆಂಬ ನಿರ್ದೇಶನವನ್ನು ಪ್ರಧಾನಮಂತ್ರಿಗಳ ಕಛೇರಿಯಿಂದ ಎಲ್ಲಾ ರಾಜ್ಯಗಳಿಗೆ ನೀಡಲಾಗಿದೆ. ಇದರ ಪ್ರಕಾರ 50ರ ವರೆಗೆ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವ ಗುತ್ತಿಗೆದಾರರಿಗೆ ಕಾಂಟ್ರಾಕ್ಟ್ ದುಡಿಮೆ(ನಿಯಂತ್ರಣ ಮತ್ತು ನಿರ್ಮೂಲನಾ) ಕಾಯ್ದೆ, 1970 ಇದರಿಂದ ವಿನಾಯ್ತಿ ನೀಡಬೇಕು. ಅಂದರೆ ಹೀಗಾಗಿ ಕನಿಷ್ಠ ಕೂಲಿ, ಸಾಮಾಜಿಕ ಭದ್ರತೆ ನಿಡಬೇಕಾದ ಕಾನೂನಿನ ಬಾಧ್ಯತೆ ಅವರಿಗಿರುವುದಿಲ್ಲ. ಶೇ. 90ರಷ್ಟು ಗುತ್ತಿಗೆದಾರರು 10,000ರೂ. ಕೂಲಿಯಷ್ಟೇ ಅಲ್ಲ, ಕನಿಷ್ಟ ಕೂಲಿಯನ್ನೂ ನೀಡಬೇಕಾಗಿಲ್ಲ!

ಈ ತಿದ್ದುಪಡಿಯ ಪರಿಣಾಮ:


- ಇನ್ನು ಮುಂದಕ್ಕೆ 50 ಮತ್ತು ಅದಕ್ಕಿಂತ ಕಡಿಮೆ ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳುವ ಸಂಸ್ಥೆಗಳು ನೊಂದಾವಣಿ ಮಾಡಿಸಿಕೊಳ್ಳಬೇಕಿಲ್ಲ ಮತ್ತು ಗುತ್ತಿಗೆದಾರರು ಪರವಾನಿಗಿ ಪಡೆಯಬೇಕಿಲ್ಲ.
- ಅಂತಹ ಸಂಸ್ಥೆಗಳು ಮತ್ತು ಗುತ್ತಿಗೆದಾರರು ಯಾವುದೇ ದಾಖಲೆಗಳನ್ನು ದಾಖಲಿಸಬೇಕಿಲ್ಲ.
- ಒಂದು ವೇಳೆ 50 ಕ್ಕಿಂತ ಹೆಚ್ಚು ಗುತ್ತಿಗೆ ಕಾರ್ಮಿಕರನ್ನು ನೇಮಿಸಿ ಗುತ್ತಿಗೆದಾರರು 50 ಕ್ಕಿಂತ ಕಡಿಮೆ ಸಂಖ್ಯೆಯ ಪ್ರತ್ಯೇಕ ಘಟಕಗಳನ್ನು ರಚಿಸಿಕೊಂಡು ಕಾಯ್ದೆಯ ಅನ್ವಯವನ್ನು ತಪ್ಪಿಸಿಕೊಳ್ಳಬಹುದು.
- ಗುತ್ತಿಗೆ ಕಾರ್ಮಿಕರಿಗೆ ಸಂಬಂಧಿಸಿದ ಹಾಜರಾತಿ ಪಟ್ಟಿ, ವೇತನ ದಾಖಲೆ ಮುಂತಾದ ದಾಖಲೆಗಳನ್ನು ನಿರ್ವಹಿಸಬೇಕಾಗಿಲ್ಲ, ಉದ್ಯೋಗ ಕಾರ್ಡ್‌ಗಳನ್ನು ನೀಡಬೇಕಿಲ್ಲ, ವೇತನ ಚೀಟಿಯನ್ನೂ ನೀಡಬೇಕಿಲ್ಲ, ಗುತ್ತಿಗೆ ಸಂಬಂಧಿತ ಯಾವುದೇ ತಿಳುವಳಿಕೆ ಪತ್ರವನ್ನು ಗುತ್ತಿಗೆದಾರರು ಪ್ರದರ್ಶಿಸಬೇಕಿಲ್ಲ.
- ಕಾರ್ಮಿಕ ಇಲಾಖೆಗೆ ಗುತ್ತಿಗೆದಾರರು ಯಾವುದೇ ವರದಿಯನ್ನು ಸಲ್ಲಿಸಬೇಕಿಲ್ಲ.
- ಅಂತಹ ಸಂಸ್ಥೆಗಳಲ್ಲಿ ಪ್ರಧಾನ ಮಾಲೀಕರು ನೇಮಿಸಿಕೊಂಡಿರುವ ನೇರ ಉದ್ಯೋಗಿಗಳು ನಿರ್ವಹಿಸುವಂತಹ ಅಥವಾ ಅದಕ್ಕೆ ಸಮಾನಾಂತರವಾದ ಕೆಲಸವನ್ನು ಗುತ್ತಿಗೆ ಕಾರ್ಮಿಕರು ನಿರ್ವಹಿಸುತ್ತಿದ್ದಲ್ಲಿ ಖಾಯಂ ಕಾರ್ಮಿಕರಿಗೆ ನೀಡಿದಂತೆ ಸಮಾನ ವೇತನಗಳ ದರ, ರಜಾ ಸೌಲಭ್ಯ, ಕೆಲಸದ ಅವಧಿ, ರಜಾ ದಿನಗಳನ್ನು ಗುತ್ತಿಗೆ ಕಾರ್ಮಿಕರಿಗೆ ನೀಡಬೇಕಿಲ್ಲ.
- ಗುತ್ತಿಗೆದಾರರು ತಮ್ಮ ಗುತ್ತಿಗೆ ಕಾರ್ಮಿಕರಿಗೆ ತಮ್ಮ ವೇತನ ನೀಡುವ ಸ್ಥಳದಲ್ಲಿ ಪ್ರಧಾನ ಮಾಲೀಕರ ಅಧಿಕೃತ ಪ್ರತಿನಿಧಿ ಹಾಜರಿರಬೇಕಿಲ್ಲ.
- ಕಡಿಮೆ ವೇತನ ಪಾವತಿ ಮಾಡಿದಲ್ಲಿ ಅಥವಾ ವೇತನ ಪಾವತಿ ಮಾಡದಿದ್ದಲ್ಲಿ ಪ್ರಧಾನ ಮಾಲೀಕರನ್ನು ಅದಕ್ಕೆ ಹೊಣೆಯಾಗಿಸಲು ಬರುವುದಿಲ್ಲ.
- ಗುತ್ತಿಗೆದಾರರು ತಮ್ಮ ಗುತ್ತಿಗೆ ಕಾರ್ಮಿಕರಿಗೆ ಕುಡಿಯುವ ನೀರು, ಶೌಚಾಲಯ ಮತ್ತು ಶುಚಿತ್ವ ಸೌಲಭ್ಯಗಳು ಮತ್ತು ಪ್ರಥಮ ಚಿಕಿತ್ಸಾ ಸೌಲಭ್ಯಗಳನ್ನು ನೀಡಬೇಕಿಲ್ಲ.

ಅಂದರೆ 1970ರ ಕಾಯ್ದೆಯಲ್ಲಿ ಗುತ್ತಿಗೆ ಕಾರ್ಮಿಕರಿಗೆ ಇದ್ದ ರಕ್ಷಣೆಗಳನ್ನೆಲ್ಲ ಕಿತ್ತು ಹಾಕುವ ತಿದ್ದುಪಡಿ ಇದು. ಈ ಕಾಯ್ದೆಯಿದ್ದಾಗಲೂ ಅದರ ಕಟ್ಟುನಿಟ್ಟಾದ ಜಾರಿಯೇನೂ ಇದ್ದಿರಲಿಲ್ಲ. ಆದ್ದರಿಂದ ಈ ಕಾರ್ಮಿಕರು ಈಗಾಗಲೇ ಅತೀವ ಶೋಷಣೆಗೊಳಪಟ್ಟಿದ್ದರು. ಆದರೂ ಕೆಲವೆಡೆ 1970 ಕಾಯ್ದೆಯನ್ನುಪಯೋಗಿಸಿ ಕಾರ್ಮಿಕ ಸಂಘಗಳನ್ನು ರಚಿಸಿಕೊಂಡು ಹೋರಾಟದ ಮುಖಾಂತರ ಸ್ವಲ್ಪ ಮಟ್ಟಿಗಿನ ನ್ಯಾಯವನ್ನು ಪಡೆಯಲು ಸಾಧ್ಯವಿತ್ತು. ಆದರೆ ಈಗ ನರೇಂದ್ರ ಮೋದಿ ಸರ್ಕಾರ ಗುತ್ತಿಗೆ ಕಾರ್ಮಿಕರ ಶೋಷಣೆಯನ್ನೇ ಕಾನೂನು ಬದ್ಧಗೊಳಿಸುತ್ತಿದೆ. ●


PEÁ½ZÀÁÝ

15.9% ಬಡ್ಡಿದರದಲ್ಲಿ ಟ್ರಾಕ್ಟರ್ ಸಾಲಗಳು
ಔರಂಗಾಬಾದ್‌ನ ಹೀರಾಬಾಯಿಯಂತಹ
ರೈತರನ್ನು ಸಾಲದಲ್ಲಿ ಸಿಲುಕಿಸಿದೆ.
ಆದರೆ ಅದೇ ವೇಳೆಗೆ
ಮರ್ಸಿಡಿಸ್ ಬೆಂಝ್ ಸಾಲಗಳು
ಔರಂಗಾಬಾದ್‌ನಲ್ಲಿ 7% ಬಡ್ಡಿದರದಲ್ಲಿ
ಹೋಗುತ್ತಿದ್ದವು. ಆದರೂ
ಈ ಎರಡೂ ಮಾರಾಟಗಳನ್ನು
ಗ್ರಾಮೀಣ ಪ್ರಗತಿಯ
ದ್ಯೋತಕಗಳೆಂದು ಕಾಣಲಾಗುತ್ತಿದೆ.

– ಪಿ.ಸಾಯಿನಾಥ್



ಕ್ಯಾಸ್ಟ್ರೋ ಕಥೆ 18



ಮೂಲ: ಇಗ್ನೇಶಿಯಸ್ ರಾಮೊನೆಟ್
ಸಂಗ್ರಹಾನುವಾದ : ಕೆ. ಪ್ರಕಾಶ್



ಸ್ಫೂರ್ತಿ ಮತ್ತು ವಿಶ್ವಾಸ ಹೆಚ್ಚಿಸಿದ ವಿಜಯಗಳು

ಹಾದಿ ತಪ್ಪಿದ 46 ದಿನಗಳ ನಂತರ, 1957 ಜನವರಿ 17 ರಂದು ಬಟಿಸ್ಟಾ'ನ ಭೂ ಮತ್ತು ನೌಕಾ ಪಡೆಗಳ ಮಿಶ್ರ ಕಾವಲಿನ ವಿರುದ್ಧ ಕ್ರಾಂತಿಕಾರಿಗಳಿಗೆ ಮೊದಲ ಜಯ ಲಭಿಸಿತು. ದಕ್ಷಿಣ ಸಮುದ್ರ ತಟದ ಸೈನಿಕ ಉಪಠಾಣೆಯೊಂದನ್ನು ಇವರು ಯಶಸ್ವಿಯಾಗಿ ವಶಪಡಿಸಿಕೊಂಡರು. ಇದೊಂದು ಸಣ್ಣ ಜಯವಾದರೂ ತೀರಾ ಅಗತ್ಯವಾದ ಮತ್ತು ಸ್ಫೂರ್ತಿ ತುಂಬಿದ ಜಯವಾಗಿತ್ತು. ಮುಂದೆ ಅಂತಿಮ ವಿಜಯದ ಸಾಧ್ಯತೆಗಳ ಬಗ್ಗೆ ಇದು ಖಾತ್ರಿಯನ್ನೊದಗಿಸಿತು.

ಸಿಯೆರ್ರಾ ಮೇಸ್ತ್ರಾ ಬೆಟ್ಟ ಸಾಲಿನ ತುದಿ ಮತ್ತು ಲಾ ಪ್ಲಾಟಾ'ಗಳನ್ನು ಪ್ರತ್ಯೇಕಗೊಳಿಸುವ ಮ್ಯಾಗ್ದಲಿನಾ ನದಿ ಬಳಿ ಬಂದು ನಿಂತ ಫಿಡೆಲ್ ತಂಡ, ಸ್ನಾನ ಮಾಡಿ ಎಷ್ಟು ದಿನಗಳಾಗಿತ್ತೋ! ಶುದ್ಧತೆಯ ಬಗ್ಗೆ ತಲೆಕೆಡಿಸಿಕೊಳ್ಳದೆ ಸಿಕ್ಕ ನೀರಲ್ಲಿ ಮುಳುಗೆದ್ದರು. ಬಟ್ಟೆಗಳನ್ನು ಬದಲಾಯಿಸಿದರು.

ಫಿಡೆಲ್ ತಂಡದಲ್ಲಿದ್ದ ಕೆಲವರಿಗೆ ಬಂದೂಕು ಹಿಡಿಯುವುದೇ ಮೊದಲ ಅನುಭವವಾಗಿತ್ತು. ಅವರಿಗೆ ತರಬೇತಿಯನ್ನು ಸಾಧ್ಯವಾದ ಮಟ್ಟಿಗೆ ನೀಡಲಾಯ್ತು. ಇವರ ಬಳಿ ಬಳಕೆ ಯೋಗ್ಯವಾದ ಕೇವಲ 23 ಆಯುಧಗಳಿದ್ದವು. ದೂರದರ್ಶಕಗಳನ್ನು ಹೊಂದಿದ್ದ ಒಂಭತ್ತು ರೈಫಲ್ಸ್, ಐದು ಸೆಮಿ–ಆಟೋಮ್ಯಾಟಿಕ್ ಮೆಷಿನ್ ಗನ್ಸ್, ನಾಲ್ಕು ಬೋಲ್ಟ್–ಆಕ್ಷನ್ ರೈಫಲ್ಸ್, ಎರಡು ಥಾಂಪ್ಸನ್ ಸಬ್‌ಮೆಷಿನ್ ಗನ್ಸ್, ಎರಡು ಸಬ್‌ಮೆಷಿನ್ ಗನ್ಸ್ ಮತ್ತು ಒಂದು 16 ಗೇಜ್ ಷಾಟ್‌ಗನ್.

ಜನವರಿ 14 ರ ಮಧ್ಯಾಹ್ನ ಲಾ ಪ್ಲಾಟಾ ಬಳಿಯ ಕೊನೆಯ ಬೆಟ್ಟವನ್ನು ಹತ್ತಿದರು. ಸಾಮಾನ್ಯವಾಗಿ ಯಾರೂ ಬಳಸದ ದುರ್ಗಮ ಹಾದಿಯನ್ನು ಇವರು ಸವೆಸುತ್ತಿದ್ದರು. ಇವರಿಗೆ ಮೆಲ್ಕಿಡೆಸ್ ಇಲಿಯಾಸ್ ಎಂಬೊಬ್ಬ ರೆಬಲ್ ರೈತ ದಾರಿತೋರಿಸುತ್ತಿದ್ದ. ಇವನನ್ನು ಇವರ ಜೊತೆಗೆ ಕಳುಹಿಸಿದ್ದು ಇವರ ಮಾರ್ಗದರ್ಶಕನಾಗಿದ್ದ ಯೂಟಿಮಿಯೊ ಎಂಬಾತ. ಈತ ಆ ಭಾಗದ ದೊಡ್ಡ ಜಮೀನ್ದಾರರ ವಿರುದ್ಧದ ಭೂಮಿಗಾಗಿನ ಹೋರಾಟದಲ್ಲಿ ತೊಡಗಿಸಿಕೊಂಡಿದ್ದ ಪ್ರಮುಖ ರೈತನಾಗಿದ್ದ. ಈತ ಫಿಡೆಲ್ ತಂಡ–ಕ್ಕೆ ತುಂಬಾ ವಿಧೇಯನಾಗಿದ್ದ. ಆದ್ದರಿಂದ ಇವನನ್ನು ತಮ್ಮ ತಂಡಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಮಾರ್ಗದರ್ಶಕನನ್ನಾಗಿ ಫಿಡೆಲ್ ನೇಮಿಸಿಕೊಂಡಿದ್ದರು. ಈ ಮಾರ್ಗದರ್ಶಕ ಮುಂದೆ ಕ್ಯಾಸಿಲ್ಲಾಸ್ ಎಂಬ ಬಟಿಸ್ಟಾನ ಸೈನಿಕನಿಗೆ ಸೆರೆಸಿಕ್ಕಿದ. ಆದರೆ ಅವರು ಇವನನ್ನು ಕೊಲ್ಲುವ ಬದಲು ಫಿಡೆಲ್‌ನನ್ನು ಕೊಲ್ಲಲು ನಿಯೋಜಿಸಿದರು. ಇದಕ್ಕಾಗಿ ಅವನಿಗೆ 10,000 ಡಾಲರ್‌ಗಳ ಹಣ ಮತ್ತು ಮಿಲಿಟರಿಯಲ್ಲಿ ಒಂದು ರ್‍ಯಾಂಕ್ ನೀಡುವ ಆಮಿಷವನ್ನು ನೀಡಿದರು. ಇದನ್ನು ನಿಭಾಯಿಸಲು ಆತ ಪ್ರಯತ್ನಿಸಿದನಾದರೂ ಅವನಿಗೆ ಫಿಡೆಲ್‌ನನ್ನು ಕೊಲ್ಲುವಷ್ಟು ಧೈರ್ಯ ಸಾಕಾಗಲಿಲ್ಲ. ಆದರೆ ಇವನು ಫಿಡೆಲ್‌ನ ನೆಲೆಗಳನ್ನು, ತಂಗುದಾಣಗಳನ್ನು ತೋರಿಸಿ ಕೊಡುವುದರಲ್ಲಿ ಬಟಿಸ್ಟಾನ ಸೈನಿಕರಿಗೆ ತುಂಬಾ ಪ್ರಯೋಜನಕಾರಿಯಾದ.

ಜನವರಿ 15 ರಂದು ಲಾ ಪ್ಲಾಟಾದ ಬಳಿಯಿದ್ದ ಸೈನ್ಯದ ಬ್ಯಾರಕ್‌ನ್ನು ಇವರು ಗುರುತಿಸಿದರಾದರೂ ಅಂದು ಅದರ ಮೇಲೆ ದಾಳಿ ಮಾಡಲಿಲ್ಲ. ಅಲ್ಲಿ ನಡೆಯುತ್ತಿದ್ದ ವ್ಯೂಹಗಳನ್ನು ಸರಿಯಾಗಿ ಗ್ರಹಿಸಲು ಸಮಯ ತೆಗೆದುಕೊಂಡರು. 16 ರಂದು ಮುಂಜಾನೆ ನದಿ ಪಕ್ಕದ ರಸ್ತೆಯಲ್ಲಿ ನಿಂತು ಸೈನಿಕ ಮಾಹಿತಿದಾರರಾದ ಇಬ್ಬರು ರೈತರನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಅವರಿಂದ ಕೆಲವು ಅಮೂಲ್ಯವಾದ ಮಾಹಿತಿಗಳನ್ನು ಸಂಗ್ರಹಿಸಿದರು. ಇವರಿಂದ ಅಲ್ಲಿರುವ ಸೈನಿಕ ಬ್ಯಾರಕ್‌ನಲ್ಲಿ 15 ಸೈನಿಕರಿದ್ದಾರೆಂದು ತಿಳಿಯಿತು. ಮತ್ತು ಆ ಪ್ರದೇಶದ ಅತ್ಯಂತ ಕಂಟಕನಾದ ಷಿಚೋ ಓಸೊರಿಯೊ ಆಗ ಅಲ್ಲಿ ಬರುವವನಿದ್ದ. ಇವನು ಆ ಪ್ರದೇಶದ ಬಹದೊಡ್ಡ ಜಹಗೀರಾದ ಲಾವಿಟಿ ಎಸ್ಟೇಟ್‌ನ ಮೇಲ್ವಿಚಾರಕನಾಗಿದ್ದ. ಇವನು ತನ್ನ ಅಹಂಕಾರ ಮತ್ತು ದರ್ಪಕ್ಕೆ ತಕ್ಕಂತೆ ಕುಡುಕನೂ ಆಗಿದ್ದ ಸಂಗತಿಯನ್ನು ತಿಳಿದು ಫಿಡೆಲ್ ಅದನ್ನು ತಮ್ಮ ಅನುಕೂಲಕ್ಕೆ ಬಳಸಲು ಯೋಜಿಸಿದರು. ತಾವು ಬಟಿಸ್ಟಾ ಸೈನ್ಯದ ಒಂದು ಭಾಗವಾಗಿದ್ದ ರೂರಲ್‌ಗಾರ್ಡ್‌ನವರೆಂದು ಅವನನ್ನು ವಂಚಿಸಿದರು. ಅದನ್ನು ಅವನು ನಂಬಿದನು.

ತಾನು ಬಟಿಸ್ಟಾ ಸೈನ್ಯದ ಕರ್ನಲ್ ಎಂಬಂತೆ, "ಕ್ರಾಂತಿಕಾರಿಗಳನ್ನು ಇನ್ನೂ ಹಿಡಿದಿಲ್ಲವೇಕೆ? ಅವರನ್ನು ಇನ್ನೂ ಕೊಲ್ಲದಿರುವುದೇತಕ್ಕೆ" ಎಂದು ತನಿಖೆ ಮಾಡಲು ಬಂದಿರುವುದಾಗಿ ಫಿಡೆಲ್ ಕೋಪಾವಿಷ್ಟರಾದಂತೆ ನಟಿಸುತ್ತಾ ಒಸೊರಿಯೊನನ್ನು ಗದರಿಸಿದರು. ಇವರ ಬಗ್ಗೆ ಯಾವುದೇ ಅನುಮಾನ ಪಡುವ ಪರಿಸ್ಥಿತಿಯಲ್ಲಿ ಅವನಿರಲಿಲ್ಲ. ಅವನು ಬಡಾಯಿ ಕೊಚ್ಚಿಕೊಳ್ಳುವ ರೀತಿಯಲ್ಲಿ ಅಲ್ಲಿರುವ ಸೈನಿಕ ಉಪಠಾಣೆಯ ಸೈನಿಕರು ಸರ್ವಕಾಲವೂ ಕುಡಿಯುತ್ತಾ, ತಿನ್ನುತ್ತಾ ಕಾಲಕಾಳೆಯುವ ನಿಷ್ಪ್ರಯೋಜಕರು ಎಂಬಂತೆ ಇವರಿಗೆ ಅನುಕೂಲವಾಗುವ ಮಾಹಿತಿಯನ್ನೆಲ್ಲಾ ನೀಡಿದ. ಹಾಗೆ ಹೇಳುತ್ತಲೇ ಕ್ರಾಂತಿಕಾರಿಗಳನ್ನು ನಾಶ ಮಾಡಬೇಕೆಂದೂ ಹೇಳಿದ. ಜೊತೆಗೆ ಆ ಪ್ರದೇಶದಲ್ಲಿರುವ ಇತರರು ಯಾರು ಬಟಿಸ್ಟಾನ ಪರವಿದ್ದಾರೆ ಅಥವಾ ವಿರೋಧವಿದ್ದಾರೆ ಎಂಬುದನ್ನು ಸಾಕಷ್ಟು ಅವನಿಂದ ಮಾಹಿತಿ ಪಡೆದುಕೊಂಡರು.

ಬ್ಯಾರಕ್‌ನಲ್ಲಿರುವ ಸೈನಿಕರು ತಮ್ಮ ಕರ್ತವ್ಯವನ್ನು ಮರೆತು, ಕ್ರಾಂತಿಕಾರಿಗಳನ್ನು ಎದುರಿಸಲು ಸಿದ್ದವಾಗಿಲ್ಲದಿರುವ ಸಂಗತಿಯನ್ನು ಪರೀಕ್ಷಿಸುವ ನೆಪದಲ್ಲಿ ಒಸೊರಿಯೊನನ್ನು ಬಂಧಿತ ಖೈದಿ ಎಂಬಂತೆ ಬಿಂಬಿಸುವ ತಂತ್ರಕ್ಕೆ ಅವನು ಒಪ್ಪಿಕೊಂಡನು. ಅವನನ್ನು ಮುಂದು ಮಾಡಿಕೊಂಡೇ ಬ್ಯಾರಕ್ ಬಳಿ ಬಂದರು. ಈ ತಂತ್ರವನ್ನು ಆತ ಅರಿಯುವಲ್ಲಿ ವಿಫಲನಾದನು.

ಸೈನ್ಯದ ಬ್ಯಾರಕ್‌ನ್ನು ಏನೇ ಆದರೂ ಫಿಡೆಲ್ ಗೆಳೆಯರು ವಶಪಡಿಸಿಕೊಳ್ಳಲೇಬೇಕಿತ್ತು. ಏಕೆಂದ–ರೆ ಇವರ ಬಳಿ ಕೆಲವೇ ಶಸ್ತ್ರಾಸ್ತ್ರಗಳಿದ್ದವು. ಸ್ವಲ್ಪವೇ ಮದ್ದು ಗುಂಡುಗಳಿದ್ದವು. ತುಂಬಾ ಎಚ್ಚರಿಕೆಯ ಕಾರ್ಯಾಚರಣೆ ಮಾಡಬೇಕಿತ್ತು. ಕಂಪೆನೇರೊ ಲೆಫ್ಟಿನೆಂಟ್ ಜೂಲಿಯೊ ಡಯಾಸ್, ಕ್ಯಾಮಿಲೋ ಸಿಯೆನ್ಫ್ಯೂಗೊಸ್, ಬೆನಿಟೆಝ್ ಮತ್ತು ಕ್ಯಾಲಿಕ್ಸ್‌ಟೊ ಮೊರೇಲ್ಸ್ ಬಲ ಬದಿಯಿಂದ ಸುತ್ತುವರಿದರು. ಫಿಡೆಲ್, ಯೂನಿವರ್ಸೊ ಸ್ಯಾಂಚೆಝ್, ಲೂಯಿ ಕ್ರೆಸ್ಪೊ, ಕ್ಯಾಲಿಕ್ಸ್‌ಟೊ ಗಾರ್ಷಿಯಾ, ಮ್ಯಾನ್ಯುಯೆಲ್ ಫಜಾರ್ಡೊ, ಪಿತಿ ಫಜಾರ್ಡೊ, ಮತ್ತು ಚೆ ಇವರುಗಳು ಮಧ್ಯದಿಂದ ದಾಳಿ ನಡೆಸಿದರು. ರಾಲ್ ಮತ್ತು ಆತನ ತಂಡ ಹಾಗೂ ಜುವಾನ್ ಅಲ್ಮೇಡಾ ಇವರುಗಳು ಎಡ ಬದಿಯಿಂದ ದಾಳಿ ನಡೆಸಿದರು. ಪಾಮ್ ಎಲೆಗಳ ಹೊದಿಕೆ ಹೊಂದಿದ್ದ ಬ್ಯಾರಕ್‌ಗಳನ್ನು ಕೇವಲ 40 ಮೀಟರ್‌ಗಳ ಅಳತೆಯಲ್ಲಿ ಸುತ್ತುವರಿದು ಅವರನ್ನು ಶರಣಾಗುವಂತೆ ಆದೇಶಿಸಿದರು. ಆದರೆ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಗುಂಡಿನ ಕಾಳಗ ಪ್ರಾರಂಭವಾಗುತ್ತಿದ್ದಂತೆ ಮಾಹಿತಿದಾರ ಒಸೊರಿಯೊನನ್ನು ಕೊಲ್ಲಲಾಯಿತು. ಅಂತಿಮವಾಗಿ ಬಟಿಸ್ಟಾನ ಸೈನಿಕರು ಪ್ರತಿರೋಧ ಒಡ್ಡಲಾರದೆ ಫಿಡೆಲ್ ತಂಡದ ಬುಲೆಟ್‌ಗಳು ಮತ್ತು ಮೆಕ್ಸಿಕನ್ ಗ್ರೆನೇಡ್‌ಗಳಿಗೆ ಇಬ್ಬರು ಬಲಿಯಾದರು, ಐವರು ಗಾಯಗೊಂಡರು ಮತ್ತು ಮೂವರು ಶರಣಾದರು. ಒಬ್ಬ ಮಾಹಿತಿದಾರ ತಪ್ಪಿಸಿಕೊಂಡ ಓಡಿದ. ಫಿಡೆಲ್ ತಂಡದಲ್ಲಿ ಯಾವುದೇ ನಷ್ಟವಾಗಲಿಲ್ಲ.

ಬಹಳ ಮುಖ್ಯವಾಗಿ ಸಾಕಷ್ಟು ಪ್ರಮಾಣದ ಶಸ್ತ್ರಾಸ್ತಗಳು – ಎಂಟು ಸ್ಪ್ರಿಂಗ್‌ಫೀಲ್ಡ್ಸ್, ಒಂದು ಥಾಂಪ್ಸನ್ ಮೆಷಿನ್ ಗನ್, 1000 ಸುತ್ತು ಗುಂಡುಗಳು, ಜೊತೆಗೆ ಕಾರ್ಟ್ರಿಡ್ಜ್ ಬೆಲ್ಟ್‌ಗಳು, ಇಂಧನ, ಚಾಕುಗಳು, ಬಟ್ಟೆಗಳು, ಆಹಾರ ಇತ್ಯಾದಿ ಇವರ ಕೈವಶವಾದವು. ಸೈನಿಕರ ನಿವಾಸಗಳಿಗೆ ಬೆಂಕಿಯಿಟ್ಟು ಇವರು ಅಲ್ಲಿಂದ ಹೊರಟರು. ಗಾಯಗೊಂಡ ಸೈನಿಕರ ಕುರಿತು ಒಂದಂಶವನ್ನು ಇಲ್ಲಿ ಗಮನಿಸಬೇಕು. ಬಟಿಸ್ಟಾನ ಸೈನ್ಯದ ನಿಲುವು ಹೇಗಿತ್ತೆಂದರೆ ಗಾಯಗೊಂಡ ಎದುರಾಳಿ ಯಾರಿಗೂ ಅವರು ಔಷದೋಪಚಾರ ನೀಡುತ್ತಿರಲಿಲ್ಲ, ಮಾತ್ರವಲ್ಲ ತಮ್ಮವರೇ ಸೈನಿಕರು ಸತ್ತರೂ ಅವರಿಗೆ ಕನಿಷ್ಟ ಗಮನ ಕೊಡುತ್ತಿರಲಿಲ್ಲ. ಆದರೆ ಫಿಡೆಲ್ ಮತ್ತು ತಂಡ ಎದುರಾಳಿ ಸೈನಿಕರು ಗಾಯಗೊಂಡರೆ ಅವರಿಗೂ ಸಹ ಶುಶ್ರೂಷೆ ನೀಡುತ್ತಿದ್ದರು. ಇಂತಹ ನಿಲುವು ಕ್ರಾಂತಿಕಾರಿ ಹೋರಾಟದ ಒಂದೊಂದು ಹಂತದಲ್ಲೂ ಇವರಿಗೆ ಸಹಾಯ ಮಾಡಿತು ಎಂಬುದನ್ನು ಚೆ' ನೆನಪಿಸಿಕೊಳ್ಳುತ್ತಾರೆ.

ಹಿಂದಿನ ದಿನ ಅಲ್ಲೊಂದು ಘಟನೆ ಸಂಭವಿಸಿತ್ತು. ಆ ಪ್ರದೇಶದ ಮೇಲೆ ಏರ್‌ಫೋರ್ಸ್ ವಿಮಾನಗಳು ಬಾಂಬ್ ದಾಳಿ ಮಾಡುತ್ತವೆ ಎಂದು ಪ್ರಚಾರ ಮಾಡಲಾಗಿತ್ತು. ಇದರಿಂದ ಬೆದರಿದ ರೈತರು ಬಂದರಿನ ಕಡೆ ಗುಳೆ ಹೊರಟಿದ್ದರು. ಆ ಮೂಲಕ ಅಲ್ಲಿನ ಜಮೀನ್ದಾರರು ರೈತರ ಭೂಮಿಗಳನ್ನು ಕಬಳಿಸುವ ಹುನ್ನಾರವಿತ್ತು. ಈ ಹಿನ್ನೆಲೆಯಲ್ಲಿ ಬಂಧಿಗಳಾಗಿದ್ದ ನಾಗರಿಕ ರೈತರನ್ನು ಕ್ರಾಂತಿಕಾರಿ ಪಡೆ ಬಿಡುಗಡೆಗೊಳಿಸಿತು. ಈ ರೀತಿಯಾಗಿ ಕ್ರಾಂತಿಕಾರಿಗಳ ಮೊದಲ ವಿಜಯವು ಸಂಭವಿಸಿತು. ನಂತರ ಜನವರಿ 17 ರಂದು ಕ್ರಾಂತಿಕಾರಿಗಳ ದಂಡು ಪಾಮ ಮೊಚಾ ದಿಕ್ಕಿಗೆ ಪ್ರಯಾಣ ಬೆಳೆಸಿತು. ●

ಲಾ ಪ್ಲಾಟಾ ಲ್ಲಿನ ಬಟಿಸ್ಟ ಸೈನ್ಯದ ಬ್ಯಾರಕ್‌ನ್ನು ಏನೇ ಆದರೂ ಫಿಡೆಲ್ ಗೆಳೆಯರು ವಶಪಡಿಸಿಕೊಳ್ಳಲೇಬೇಕಿತ್ತು. ಏಕೆಂದರೆ ಇವರ ಬಳಿ ಕೆಲವೇ ಶಸ್ತ್ರಾಸ್ತ್ರಗಳಿದ್ದವು. ತುಂಬಾ ಎಚ್ಚರಿಕೆ–ಯ ಕಾರ್ಯಾಚರಣೆ ಮಾಡಬೇಕಿತ್ತು. ಅದರಲ್ಲಿ ಅವರು ಯಶಸ್ವಿಯಾದರು. ಬಹಳ ಮುಖ್ಯವಾಗಿ ಸಾಕಷ್ಟು ಪ್ರಮಾಣದ ಶಸ್ತ್ರಾಸ್ತ್ರಗಳು – ಎಂಟು ಸ್ಪ್ರಿಂಗ್‌ಫೀಲ್ಡ್ಸ್, ಒಂದು ಥಾಂಪ್ಸನ್ ಮೆಷಿನ್ ಗನ್, 1000 ಸುತ್ತು ಗುಂಡುಗಳು, ಜೊತೆಗೆ ಕಾರ್ಟ್ರಿಡ್ಜ್ ಬೆಲ್ಟ್‌ಗಳು, ಇಂಧನ, ಚಾಕುಗಳು, ಬಟ್ಟೆಗಳು, ಆಹಾರ ಇತ್ಯಾದಿ ಇವರ ಕೈವಶವಾದವು.

ನಮ್ಮ ಚುರು-ಟ್ವೀಟ್

ಸೀತಾರಾಮ್ ಯೆಚೂರಿ|@SitaramYechury

#ಜುಮ್ಲಾಶಾಸ್ತ್ರದ ಪರಿಣಾಮ:
ಆಹಾರ ಬೆಲೆಯುಬ್ಬರ ಜೂನ್‌ನಲ್ಲಿ 7.79%,
ಬೇಳೆಕಾಳುಗಳು 26.86% ದುಬಾರಿ,
ತರಕಾರಿಗಳ ಬೆಲೆಗಳಲ್ಲಿ 14.74% ಏರಿಕೆ.
*
ಜನಸಾಮಾನ್ಯರಿಗೆ ವಿಪರೀತ ಆಹಾರ ಬೆಲೆಗಳ ನರಳಾಟ ಮುಂದುವರೆದಿದೆ.
ಜೂನ್‌ನಲ್ಲಿ ಸಗಟು ಬೆಲೆಯುಬ್ಬರ 8% ದಾಟಿದೆ.

ಹೊಸ ವಿಮಾನಯಾನ ಧೋರಣೆ: ಶ್ರೀಮಂತರಿಗೆ, ಕಾರ್ಪೊರೇಟ್‌ಗಳಿಗೆ ಮತ್ತು ವಿದೇಶೀ ಕಂಪನಿಗಳಿಗೆ ಸಬ್ಸಿಡಿ ಕೊಡಿಸುವ ಇನ್ನೊಂದು ದಾರಿ?

ಮೋದಿ ಸರಕಾರ ಇತ್ತೀಚೆಗೆ ರಾಷ್ಟ್ರೀಯ ನಾಗರಿಕ ವಿಮಾನಯಾನ ಧೋರಣೆ(ಎನ್‌ಸಿಎಪಿ)ಯನ್ನು ಪ್ರಕಟಿಸಿದೆ. ಈ ವಲಯಕ್ಕೆ ಸಂಬಂಧಪಟ್ಟ ಮೊತ್ತಮೊದಲ ಧೋರಣೆಯನ್ನು ರೂಪಿಸಿದ ಕೀರ್ತಿ ಈ 'ಅಚ್ಛೇ ದಿನ್' ಸರಕಾರಕ್ಕೆ ಸಲ್ಲುತ್ತದೆ ಎಂದು ಗುತ್ತೇದಾರಿ ಮಾಧ್ಯಮಗಳು ಹಾಡಿ ಹೊಗಳಿವೆ. ಇದು ನಾಗರಿಕ ವಿಮಾನಯಾನದಲ್ಲಿ ಒಳ್ಳೆಯ ದಿನಗಳನ್ನು ತರುವ ಧೋರಣೆ ಎಂದು ಅವರ ನಂಬಿಕೆ.

ಆದರೆ ಇದು ಕೂಡ ಶ್ರೀಮಂತ ವಿಭಾಗಗಳಿಗೆ ಸಬ್ಸಿಡಿ, ರಿಯಾಯ್ತಿಗಳನ್ನು ಕೊಟ್ಟು ಅದರಿಂದ ಪ್ರಯೋಜನಗಳು ಬಡವಿಭಾಗಗಳಿಗೆ ತೊಟ್ಟಿಕ್ಕುತ್ತವೆ ಎಂಬ ಸಿದ್ಧಾಂತವನ್ನೇ ಆಧರಿಸಿರುವಂತದ್ದು ಎಂಬುದು ಪರಿಣಿತರ ವಿಶ್ಲೇಷಣೆ(ಡಿ.ರಘುನಂದನ್, ನ್ಯೂಸ್‌ಕ್ಲಿಕ್). ಮೂಲರಚನೆಗಳಲ್ಲಿ ಮತ್ತು ಸೇವಾ ವಲಯಗಳಲ್ಲಿ ಕಾರ್ಪೊರೇಟ್‌ಗಳಿಗೆ ಮತ್ತು ಹೆಚ್ಚು ಆದಾಯದ ಗುಂಪುಗಳಿಗೆ ಸರಕಾರೀ ಖಜಾನೆಯಿಂದ ಹೂಡಿಕೆ, ತೆರಿಗೆ ವಿನಾಯ್ತಿ ಇತ್ಯಾದಿಗಳ ಮೂಲಕ ನೆರವು ನೀಡುವುದು, ಇದು ಸಂಪತ್ತು ಸೃಷ್ಟಿಮಾಡುತ್ತದೆ, ಜಿಡಿಪಿ ಬೆಳೆಯುತ್ತದೆ, ಇದರಿಂದ ವಿದೇಶಿ ನೇರ ಹೂಡಿಕೆಗಳು ಆಕರ್ಷಿತಗೊಂಡು 'ಒಳ್ಳೆಯ ದಿನಗಳು" ಬರುತ್ತವೆ! ಅವು ಕ್ರಮೇಣ ಅಷ್ಟೇನೂ ಆದಾಯಗಳಿಲ್ಲದ ವಿಭಾಗಗಳಿಗೂ ತಲುಪುತ್ತದೆ, ತಲುಪದಿದ್ದರೂ ಏನೋ ಒಳ್ಳೆಯದು ಆಗಿದ ಎಂಬ ಭಾವನೆ ಸೃಷ್ಟಿಸುತ್ತದೆ– ಇದು ನಮ್ಮ ಆಳರಸರ ಬಲವಾದ ನಂಬಿಕೆ.

ಇದನ್ನು ಜನಸಾಮಾನ್ಯರೂ ನಂಬುವಂತೆ ಮಾಡಲು ಇವೆನ್ನೆಲ್ಲ ಜನಸಾಮಾನ್ಯರ ಹೆಸರಿನಲ್ಲಿ ಮಾಡಲಾಗುತ್ತದೆ. ದೊಡ್ಡ ಕಂಪನಿಗಳಿಗೆ, ರಿಯಲ್ ಎಸ್ಟೇಟ್ ಕುಳಗಳಿಗೆ ಪ್ರಯೋಜನ ತರುವ ಭೂಸ್ವಾಧೀನವನ್ನು 'ರೈತರ–ಪರ' ಎನ್ನಲಾಯಿತು; ಭಾರೀ ದರಗಳ ಬುಲೆಟ್ ರೈಲುಗಳು ಕೂಡ ಸಾಮಾನ್ಯ ರೈಲು ಪ್ರಯಾಣಿಕರ ಒಳಿತಿಗೆ ಎಂದು ಹೇಳಲಾಯಿತು. ಅದೇ ರೀತಿ ಮೇಲ್ಮಧ್ಯಮ ವರ್ಗಗಳ'ಸ್ಮಾರ್ಟ್ ಸಿಟಿ'ಗಳ ಪರಿಕಲ್ಪನೆಯನ್ನು ಜನಸಾಮಾನ್ಯರಿಗೆ ಮಾರಲಾಗುತ್ತಿದೆ.

ಹೊಸ ವಿಮಾನಯಾನ ಧೋರಣೆ ಕೂಡ ಇದೇ ಮಾದರಿಯದ್ದು. ಸಾಮಾನ್ಯ ತೆರಿಗೆದಾರರ ಹಣದಿಂದ ಸಂಪನ್ನ ವಿಭಾಗಗಳಿಗೆ, ಕಾರ್ಪೊರೇಟ್‌ಗಳಿಗೆ ಮತ್ತು ವಿದೇಶಿ ಕಂಪನಿಗಳಿಗೆ ಸಬ್ಸಿಡಿಗಳನ್ನು ಕೊಟ್ಟು ವಿಮಾನಯಾನ ಅಭಿವೃದ್ಧಿ ತರುವುದು– ಇವೆಲ್ಲವೂ ವಿಮಾನವನ್ನು ದೂರದಿಂದ ಆಕಾಶದಲ್ಲೇ ನೋಡುವ ಜನಸಾಮಾನ್ಯರ ಒಳಿತಿಗೆ!

ನಾಗರಿಕ ವಿಮಾನಯಾನ ವಲಯದಲ್ಲಿ ಸರಕಾರ ಹಣ ಹೂಡಿದರೆ ಅದರಿಂದ ಉಂಟಾಗುವ ಆರ್ಥಿಕ ಮತ್ತು ಉದ್ಯೋಗವಕಾಶಗಳ ಬೆಳವಣಿಗೆ ಅಪಾರ ಎಂಬ ನಂಬಿಕೆ ಈ ಹೊಸ ಧೋರಣೆಯ ಆಧಾರಸ್ತಂಭ. ಆದ್ದರಿಂದ ಜನಸಾಮಾನ್ಯರ ಕಲ್ಯಾಣ ಯೋಜನೆಗಳಿಗೆ ನೀಡುವ 'ಅನುತ್ಪಾದಕ' ಸಬ್ಸಿಡಿಗಳನ್ನು ಕಡಿತ ಮಾಡಿ, ಅದರ ಹಲವು ಪಟ್ಟು ಸಬ್ಸಿಡಿಗಳನ್ನು ಈ ವಲಯಕ್ಕೆ ಹಾಕಿದರೆ ಎಷ್ಟು ಚೆನ್ನ! ಈ ಹೊಸ ವಿಮಾನಯಾನ ಧೋರಣೆ ಅದನ್ನೇ ಮಾಡ ಹೊರಟಿದೆ.

ಉದಾಹರಣೆಗೆ, ದೇಶದಲ್ಲಿರುವ ಒಟ್ಟು ಸುಮಾರು 450 ವಿಮಾನ ಪಟ್ಟಿಗಳು ಮತ್ತು ವಿಮಾನ ನಿಲ್ದಾಣಗಳಲ್ಲಿ 75ರಲ್ಲಿ ವಾಣಿಜ್ಯ ವ್ಯಹಾರಗಳು ನಡೆಯುತ್ತಿವೆ. ಆದರೆ ಅವುಗಳಲ್ಲಿ ಕೆಲವು ನಾಮಮಾತ್ರಕ್ಕೆ ಇರುವಂತವು. ನಮ್ಮ ರಾಜ್ಯದಲ್ಲಿ ಮೈಸೂರು ವಿಮಾನ ನಿಲ್ದಾಣ.ದಂತೆ. ಅಲ್ಲಿ ಹಿಂದೆ ಏರ್ ಇಂಡಿಯಾ ವಿಮಾನ ಓಡಿಸಿತು, ಮಲ್ಯರ ಕಿಂಗ್ ಫಿಶರ್ ಪ್ರತಿಷ್ಠೆಗೆಂದು ಸ್ವಲ್ಪ ಕಾಲ ಓಡಿತು. ಈಗ ಅದು ಮುಚ್ಚಿದೆ. ಇಂತಹ ವಿಮಾನ ನಿಲ್ದಾಣಗಳಲ್ಲಿ ಚೇತರಿಕೆ ತಂದು ಪ್ರಾದೇಶಿಕ ವಿಮಾನಯಾನಗಳನ್ನು ಪ್ರೋತ್ಸಾಹಿಸುವುದು ಈ ಹೊಸ ವಿಮಾನಯಾನ ಧೋರಣೆಯ ಒಂದು ಮುಖ್ಯ ಅಂಶ.

ಇದಕ್ಕೆ ಈ ಸರಕಾರದ ಯೋಜನೆಗಳೇನು? 500–600 ಕಿ.ಮೀಗಳ ಅಥವ ಒಂದು ಗಂಟೆಯ ವಿಮಾನಯಾನದ ಟಿಕೇಟಿನ ಗರಿಷ್ಟ ದರವನ್ನು 2500 ರೂ.ಗೆ ಸೀಮಿತಗೊಳಿಸುವುದು. ಅದಕ್ಕಿಂತ ಹೆಚ್ಚಿನ ಖರ್ಚನ್ನು ಸರಕಾರ ಭರಿಸುತ್ತದೆ–ವಯೆಬಿಲಿಟಿ ಗ್ಯಾಪ್ ಫಂಡಿಂಗ್(ವಿಜಿಎಫ್) ಎಂಬುದರ ಮೂಲಕ, ಅಂದರೆ ಈ ಯೋಜನೆ ಕಾರ್ಯಸಾಧ್ಯಗೊಳ್ಳಲ್ಲು ಅಗತ್ಯವಾದ ಹೆಚ್ಚಿನ ಖರ್ಚನ್ನು ಸರಕಾರೀ ಖಜಾನೆಯಿಂದ, ಅಂದರೆ ಜನಸಾಮಾನ್ಯರು ತೆರುವ ಪರೋಕ್ಷ, ನೇರ ತೆರಿಗೆ ಹಣವನ್ನು ಬಳಸಿ. ಜನಸಾಮಾನ್ಯರು ಇದಕ್ಕೆ ಕಳವಳ ಪಡುವ ಅಗತ್ಯವಿಲ್ಲ. ಏಕೆಂದರೆ ಅವರು ವಿಮಾನದಲ್ಲಿ ಸಂಚರಿಸಲು ಆಗದಿದ್ದರೂ ಒಟ್ಟಾರೆಯಾಗಿ ವಿಮಾನಯಾನ ಆರ್ಥಿಕ ಬೆಳೆಯುತ್ತದೆ, ವಿಮಾನ ನಿಲ್ದಾಣಗಳಲ್ಲಿ, ವಿಮಾನಗಳಲ್ಲಿ ಉದ್ಯೋಗಾವಕಾಶಗಳು ಉಂಟಾಗುತ್ತವೆ, ದೇಶದ ಜಿಡಿಪಿ ಬೆಳೆಯುತ್ತದೆ, ಇದರಿಂದ ಆಕರ್ಷಿತಗೊಂಡು ಡಾಲರುಗಳು ಇದಕ್ಕೂ, ಇದರ ಉಪವಿಭಾಗಗಳಿಗೂ ಹರಿದು ಬರುತ್ತವೆ. ದೇಶ ಧನ್ಯವಾಗುತ್ತದೆ!

ಸ್ವಿಸ್ ಬ್ಯಾಂಕುಗಳಲ್ಲಿ ಭಾರತೀಯ ಹಣದಲ್ಲಿ ದಾಖಲೆ ಇಳಿಕೆ! ಪ್ರತಿಯೊಬ್ಬ ಭಾರತೀಯನ ಖಾತೆಗೆ 5 ಲಕ್ಷ ರೂ. ಜಮಾ?

ಸ್ವಿಝರ್ಲೆಂಡಿನ ಬ್ಯಾಂಕುಗಳಲ್ಲಿ ಭಾರತೀಯರು ಇಟ್ಟ ಹಣ 2014ರಲ್ಲಿ 180 ಕೋಟಿ ಫ್ರಾಂಕ್‌ಗಳಿಂದ 2015ರಲ್ಲಿ 120 ಕೋಟಿ ಫ್ರಾಂಕ್‌ಗಳಿಗೆ ಭಾರೀ ಇಳಿಕೆ ದಾಖಲಿಸಿದೆ. ಇದು ಮೋದಿಯವರು ವಚನವಿತ್ತಂತೆ ಅವರ ಸರಕಾರ ವಿದೇಶಗಳಿಂದ ಕಪ್ಪು ಹಣ ವಾಪಾಸು ತರಿಸಲು ಕೈಗೊಂಡ ಕ್ರಮಗಳ ಫಲ ಎಂದು ಕೆಲವು ಬಿಜೆಪಿ ಮುಖಂಡರು ಬೆನ್ನು ತಟ್ಟಿಕೊಳ್ಳುತ್ತಿದ್ದಾರಂತೆ.

ಇದರಲ್ಲೇನೂ ವಿಶೇಷವಿಲ್ಲ, ಏಕೆಂದರೆ ಇದು 2006ರಿಂದಲೂ ಇಳಿಯುತ್ತಲೇ ಇದೆ ಎಂದು ಕೆಲವು ತಜ್ಞರು ಅಪಸ್ವರ ಎತ್ತಿದ್ದಾರೆ. ನವ–ಉದಾರೀಕರಣದ ನೀತಿಗಳ ಜಾರಿಯ ನಂತರ ಇದು 2006 ರ ವರೆಗೆ ಏರುತ್ತ ಹೋಗಿತ್ತು. 2006ರಲ್ಲಿ 420 ಕೋಟಿ ಫ್ರಾಂಕ್ ತಲುಪಿತ್ತು. ಆದರೆ ನಂತರ ಅದು ಸತತವಾಗಿ ಇಳಯುತ್ತ ಬಂದಿದೆ ಎಂಬ ಸಂಗತಿಯತ್ತ ಅವರು ಬೊಟ್ಟು ಮಾಡುತ್ತಾರೆ. ಈ ಇಳಿಕೆಗೆ ಕಾರಣ ಸರಕಾರ (ಆಗ ಯುಪಿಎ–1 ಸರಕಾರ) ಕಪ್ಪುಹಣದ ಬಗ್ಗೆ ಕಠಿಣ ನಿಲುಮೆ ತಳೆದಿದ್ದರಿಂದಲೂ ಅಲ್ಲ, ಕಪ್ಪುಹಣದ ಗೀಳು ಕಡಿಮೆಯಾದದ್ದರಿಂದಲೂ ಅಲ್ಲ. ಬದಲಿಗೆ ಎಫ್‌ಡಿಐ ಮೂಲಕ ಬಿಳಿಯಾಗಿ ಭಾರತಕ್ಕೆ ಮರಳಲು ಅದಕ್ಕೆ ಅವಕಾಶ ಸಿಕ್ಕಿದ್ದು ಮತ್ತು ಕಪ್ಪು ಹಣವನ್ನು ಇನ್ನೂ ಹೆಚ್ಚು 'ಸುರಕ್ಷಿತ'ವಾಗಿ ಪೇರಿಸಿಡಲು ಮಾರಿಶಸ್ ಮುಂತಾದ ಹೊಸ 'ತೆರಿಗೆ–ಮುಕ್ತ ಧಾಮ'ಗಳು ಸೃಷ್ಟಿ ಯಾದದ್ದು ಎನ್ನುತ್ತಾರೆ ಈ ತಜ್ಞರು.

ಬಿಜೆಪಿ ಮುಖಂಡರು ಹೇಳುವ ಪ್ರಕಾರ ಕಪ್ಪು ಹಣ ನಿಜವಾಗಿಯೂ ಮೂರನೇ ಒಂದರಷ್ಟು ಕಡಮೆಯಾಗಿದ್ದರೆ ಪ್ರತಿಯೊಬ್ಬ ಭಾರತೀಯನ ಖಾತೆಯಲ್ಲಿ ಮೋದಿಯವರು ವಚನವಿತ್ತ 15 ಕೋಟಿ ರೂ.ಗಳಲ್ಲಿ ಕನಿಷ್ಟ 5 ಕೋಟಿ ರೂ. ಜಮಾ ಆಗುವ 'ಒಳ್ಳೆಯ ದಿನ'ಗಳು ಬಂದೇ ಬಿಟ್ಟಿವೆ ಎಂದಾಯಿತು!

78 ಕೇಂದ್ರ ಮಂತ್ರಿಗಳಲ್ಲಿ 72 ಕೋಟ್ಯಾಧೀಶ್ವರರು


'ಕಡಿಮೆ ಸರಕಾರ, ಹೆಚ್ಚು ಆಳ್ವಿಕೆ' ಎಂಬ 'ಒಳ್ಳೆಯ ದಿನ'ಗಳ ಘೋಷಣೆಯ ಎರಡು ವರ್ಷಗಳ ನಂತರ ನಡೆದಿರುವ ಸಂಪುಟ ಪುನರ್‌ರಚನೆಯ ದಾಖಲೆ ಯುಪಿಎ–2 ಸಂಪುಟದ ಸಂಖ್ಯೆಗೆ ಅದು ಸವಾಲು ಹಾಕಿದೆ ಎಂಬುದಷ್ಟೇ ಅಲ್ಲ. ಒಟ್ಟು 78 ಮಂತ್ರಿಗಳಲ್ಲಿ 72 ಮಂದಿ ಕೋಟ್ಯಾಧೀಶ್ವರರು. ಒಟ್ಟು ಸಂಪುಟದ ಸದಸ್ಯರ ಸರಾಸರಿ ಘೋಷಿತ ಆಸ್ತಿ ಮೊತ್ತ ರೂ.12.94 ಕೋಟಿ.

ಹೊಸಬರಲ್ಲಿ ಪ್ರಖ್ಯಾತ ಪತ್ರಕರ್ತರಾಗಿದ್ದ ಎಂ.ಜೆ.ಅಕ್ಬರ್‌ರದ್ದು ಅತಿ ಹೆಚ್ಚು ಆಸ್ತಿಯಂತೆ: 44.90 ಕೋಟಿ ರೂ. 30ಕೋಟಿ ರೂ.ಗಿಂತ ಹೆಚ್ಚು ಆಸ್ತಿಯಿರುವ ಮಂತ್ರಿಗಳ ಸಂಖ್ಯೆ 9, ಅದರಲ್ಲಿ 113 ಕೋಟಿ ರೂ. ಆಸ್ತಿ ಹೊಂದಿರುವ ಹಣಕಾಸು ಮಂತ್ರಿಗಳದ್ದೇ ಮೊದಲ ಸ್ಥಾನ!

ಇಷ್ಟೇ ಅಲ್ಲ, 78ರಲ್ಲಿ 24 ಮಂತ್ರಿಗಳ ಮೇಲೆ ಕ್ರಿಮಿನಲ್ ಕೇಸುಗಳಿವೆ.

ಮಂತ್ರಿಗಳ ಸ್ವಯಂಘೋಷಣೆಗಳ ಆದಾರದಲ್ಲಿ ಎಡಿಆರ್(ಅಸೋಸಿಯೇಶನ್ ಫಾರ್ ಡೆಮಾಕ್ರಾಟಿಕ್ ರಿಫೋರ್ಮ್ಸ್–ಪ್ರಜಾಪ್ರಭುತ್ವ ಸುಧಾರಣೆಗಳ ಸಂಘ) ಮಾಡಿದ ಲೆಕ್ಕಾಚಾರದಲ್ಲಿ ಹೊರಬಂದ ಸಂಗತಿಗಳಿವು.


ಅರುಣಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಸರ್ಕಾ ಉರುಳಿಸಿ ಬಿಜೆಪಿ ಬೆಂಬಲಿತ ಸರ್ಕಾರದ ರಚನೆ ಮತ್ತು ಅಸ್ಸಾಂನಲ್ಲಿ ಬಿಜೆಪಿ ನೇತರತ್ವದ ಸರಕಾರದ ನಂತರ ಇಡೀ ಈಶಾನ್ಯ ಭಾರತದಲ್ಲೆ ಬಿಜೆಪಿ ಹರಡಲು ನಾರ್ತ್ ಈಸ್ಟ್ ಡೆಮಾಕ್ರೆಟಿಕ್ ಅಲಯನ್ಸ್ (ಈಶಾನ್ಯ ಪ್ರಜಾಸತ್ತಾತ್ಮಕ ಮೈತ್ರಿ)ನ ವಿಧ್ಯುಕ್ತ ಸ್ಥಾಪನೆಯ ದಿನವೇ ಅರುಣಾಚಲ ಪ್ರದೇಶದಲ್ಲಿ ರಾಜ್ಯಪಾಲರ ಕ್ರಮ ಕಾನೂನುಬಾಹಿರ ಎಂಥ ಸುಪ್ರಿಂ ಕೋರ್ಟ್ ತೀರ್ಪು. ಬಿಜೆಪಿಗೆ ಮತ್ತೊಂದು ಕಪಾಳ ಮೋಕ್ಷ, ಮತ್ತು ಈ ಮೈತ್ರಿಯ ಇನ್ನೊಂದು ಮುಖ್ಯ ಕೊಂಡಿ ಬಿಜೆಪಿ ಬೆಂಬಲಿತ ಮುಖ್ಯಮಂತ್ರಿ ತನ್ನ ಸ್ಥಾನ ಕಳಕೊಂಡ ಪರಿಸ್ಥಿತಿ –ಸುದ್ದಿ



ವ್ಯಂಗ್ಯಚಿತ್ರ: ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್ಸ್

'ಒಳ್ಳೆಯ ದಿನ'ಗಳ ಡೈರಿ

ವೇದರಾಜ ಎನ್.ಕೆ.



ಉಪದೇಶಕರ ದ್ವೇಷವೂ ದ್ವೇಷದ ಉಪದೇಶಕರೂ

ಪ್ರಧಾನ ಮಂತ್ರಿಗಳು ತಮ್ಮ ಇತ್ತೀಚಿನ ವಿದೇಶ ಭೇಟಿಯಲ್ಲಿ "ನಿಜವಾಗಿಯೂ ನಾವಿಂದು ಎಂತಹ ಜಗತ್ತಿನಲ್ಲಿ ಬದುಕಿದ್ದೇವೆ ಎಂದರೆ ದ್ವೇಷ ಮತ್ತು ಹಿಂಸಾಚಾರದ ಉಪದೇಶಕರು ನಮ್ಮ ಸಮಾಜದ ಹಂದರಕ್ಕೇ ಬೆದರಿಕೆಯೊಡ್ಡುತ್ತಿದ್ದಾರೆ" ಎಂದು ಕೀನ್ಯಾದ ಯುವಜನತೆಗೆ ಹೇಳಿರುವುದಾಗಿ ವರದಿಯಾಗಿದೆ. ತಕ್ಷಣವೇ ನಮ್ಮ ಮಾಧ್ಯಮಗಳು ಇದು ಇಸ್ಲಾಮೀ ಉಪದೇಶಕ ಝಕೀರ್ ನಾಯಕ್ ಕುರಿತು ಅವರು ಹೇಳಿದ್ದು ಎಂದು ವ್ಯಾಖ್ಯಾನ ಮಾಡಿವೆ.

ಇರಬಹದು, ಇಂತವರ 'ತೀವ್ರಗಾಮಿ ತತ್ವಗಳ' ಬಗ್ಗೆ ಎಚ್ಚರದಿಂದಿರಿ ಎಂದು ಅವರು ಯುವಜನರಿಗೆ ನೀಡಿರುವ ಉಪದೇಶವೂ ಸರಿಯಾದದ್ದೇ.

ಮೋದಿಯವರು ನಿರ್ದಿಷ್ಟ ಉಪದೇಶಕನ, ಅಥವ ತತ್ವದ ಹೆಸರು ಹೇಳಿಲ್ಲ. ಅಂದರೆ ಇದು ಒಂದು ಸಾರ್ವತ್ರಿಕವಾದ ಟಿಪ್ಪಣಿ. ಅದನ್ನು ಒಪ್ಪಬೇಕಾದ್ದೇ. ಆದರೆ ಇಲ್ಲಿ ಅವರ ನಾಡಿನಲ್ಲಿ ಅವರ ಸನಿಹದಲ್ಲೇ ಇಂತಹ ಉಪದೇಶಕರು ಇದ್ದಾರಲ್ಲವೇ, ಅವರ ಬಗ್ಗೆ ಮೋದಿಯವರ ನಿಲುವು ಕೂಡ ಇದೇ ಇರಬಹುದೇ ಎಂದು ಕೆಲವು 'ಕಿಡಿಗೇಡಿಗಳು' ಪ್ರಶ್ನೆ ಎತ್ತಿದ್ದಾರೆ.

ಅವರ ಪರಿವಾರದಲ್ಲೆ ಇಂತಹ 'ದ್ವೇಷದ ಉಪದೇಶಕರ' ಬಗ್ಗೆ ಕಳೆದ ಎರಡು ವರ್ಷಗಳಿಂದ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿತ್ತಲ್ಲಾ, ಅಗ ಪ್ರಧಾನಿಗಳಿಂದ ಈ ಉಪದೇಶ ಏಕೆ ಬರಲಿಲ್ಲ, ಹೋಗಲಿ, ಸಂಸತ್ತಿನಲ್ಲಿ ಇಂತವರ ವಿರುದ್ಧ ದೇಶದ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುವ ಭರವಸೆ ನೀಡಿ ಎಂದು ಹಲವು ಬಾರಿ ಕೇಳಿದರೂ ಎಕೆ ಅಂತಹ ಭರವಸೆ ಇದುವರೆಗೂ ಬಂದಿಲ್ಲ ಎಂದು ಈ 'ಕಿಡಿಗೇಡಿ'ಗಳು ಕೇಳುತ್ತಿದ್ದಾರೆ. ಬಿಜೆಪಿ ಸಂಸದ ಗಿರಿರಾಜ ಕಿಶೋರ್, ಮುಝಫ್ಫರ್‌ಪುರ್ ಹಿಂಸಾಚಾರದ ಆರೋಪಿ ಸಂಜೀವ ಬಲ್ಯಾನ್, ಅವರ ಸಂಪುಟದಲ್ಲೇ ಇರುವ ಮಹೇಶ ಶರ್ಮ ಇವರೆಲ್ಲರ ನುಡಿಮುತ್ತುಗಳು ಯಾವ ಕೆಟಗರಿಗೆ ಬರುತ್ತವೆ ಎಂದು ಅವರು ಕೇಳುತ್ತಿದ್ದಾರೆ.

ಅವರು ಅಷ್ಟಕ್ಕೇ ನಿಂತಿಲ್ಲ. 2002ರಲ್ಲಿ ಗುಜರಾತಿನಲ್ಲಿ ವ್ಯಾಪಕ ಹಿಂಸಾಚಾರದ ವೇಳೆಯಲ್ಲಿ ಸ್ವತ: ಅಲ್ಲಿಯ ಮುಖ್ಯಮಂತ್ರಿಗಳಾಗಿ ಅವರ 'ಉಪದೇಶ' ಈ ಕೆಟಗರಿಯಲ್ಲಿ ಬರುವುದಿಲ್ಲವೇ ಎಂದೂ ಅವರು ಕೇಳಿದ್ದಾರೆ!

ಏನೇ ಆಗಲಿ, ದ್ವೇಷದ ಉಪದೇಶಕರು ನಮ್ಮ ಸಮಾಜದ ಹಂದರಕ್ಕೆ ಬೆದರಿಕೆ ಒಡ್ಡಿರುವುದಂತೂ ನಿಜ, ಅದನ್ನು ತಡೆಯಲು ಪ್ರಾಮಾಣಿಕ ಪ್ರಯತ್ನ ಬೇಡವೇ ಎಂಬುದಷ್ಟೇ ಪ್ರಶ್ನೆ.

ಭಾರತದ ಜಿಡಿಪಿ ಬೆಳವಣಿಗೆ ದರದ ಬಗ್ಗೆ ಅಮೆರಿಕನ್ ಮಿತ್ರರಿಗೂ ಸಂದೇಹ!

ತಮ್ಮ ಅಮೆರಿಕನ್ ಮಿತ್ರರನ್ನು ಸಂತುಷ್ಟಗೊಳಿಸಲು ಪ್ರಧಾನಿಗಳಿಗೂ ಬಹಳ ಕಷ್ಟವಾಗುತ್ತಿರುವಂತೆ ಕಾಣುತ್ತಿದೆ. ಎಫ್‌ಡಿಐಗೆ ಮುಕ್ತ ಆಹ್ವಾನದಲ್ಲಿ ಹಿಂದೆಂದೂ ಯಾರೂ ತೋರದ '56 ಅಂಗುಲ ಧೈರ್ಯ' ತೆ–ೂರಿದರೂ ಆ ಮಿತ್ರರಿಗಿನ್ನೂ ತೃಪ್ತಿಯಿಲ್ಲ, ಆರ್ಥಿಕ ಸುಧಾರಣೆಗಳ ಮಾತಿಗೆ(ಬಡಾಯಿಗೆ?) ತಕ್ಕಂತಹ ಕೃತಿಯಿಲ್ಲ, ಬಹಳ ನಿಧಾನವಾಗಿ ಸಾಗುತ್ತಿದೆ ಎಂದು ಅಮೆರಿಕನ್ ವಿದೇಶಾಂಗ ಇಲಾಖೆಯ ಒಂದು ವರದಿ ಹೇಳಿರುವುದಾಗಿ ಪಿಟಿಐ ವರದಿ ಮಾಡಿದೆ.

ಇಷ್ಟೇ ಅಲ್ಲ, ಭಾರತದ ಜಿಡಿಪಿ ಬೆಳವಣಿಗೆ ದರ 7.5% ಎಂಬ ಭಾರತ ಸರಕಾರದ ಹೇಳಿಕೆ ಅತಿಶಯೋಕ್ತಿ ಇರಬಹುದು ಎಂದು ಅದು ಸಂದೇಹ ಪಟ್ಟಿದೆಯಂತೆ. ಅವರದ್ದು ಬಕಾಸುರನ ಹೊಟ್ಟೆ ಎಂದೇನೂ ಯಾರೂ, ಸುಬ್ರಮಣ್ಯ ಸ್ವಾಮಿಯವರು ಕೂಡ ಟ್ವೀಟ್ ಮಾಡಿಲ್ಲವಂತೆ

ಮೋದಿ ಸಂಪುಟದ ಭಾರೀ ಪುನರ್‌ರಚನೆ, 19 ಹೊಸ ಮಂತ್ರಿಗಳು. ಮಾನವ ಸಂಪನ್ಮೂಲ ಮಂತ್ರಿ, ಕಾನೂನು ಮಂತ್ರಿ ಮುಂತಾದವರ ಖಾತೆ ಬದಲಾವಣೆ –ಸುದ್ದಿ



ವ್ಯಂಗ್ಯ ಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಜಗತ್ತಿನ ದುಡಿಯುವ ಜನರ ಜೀವನ ದುರ್ಭರಗೊಳಿಸಿರುವ ಜಾಗತೀಕರಣ

ಜಾಗತೀಕರಣ ಒಳ್ಳೇದು ಮಾಡುತ್ತದೆ. ವಿಶ್ವದಲ್ಲಿ ಎಲ್ಲರಿಗೂ ಆರ್ಥಿಕವಾಗಿ ಪ್ರಯೋಜನವಾಗುವ ಜಾಗತೀಕರಣವು ಒಂದು ದಿಟ್ಟ ಹೆಜ್ಜೆ ಎಂಬ ಅಬ್ಬರದ ಪ್ರಚಾರ ಮಾಡಲಾಗಿತ್ತು. ಇದು, ಸುಳ್ಳಾಗಿದೆ. ಜಾಗತೀಕರಣ ಪ್ರಕ್ರಿಯೆಯ ಆರಂಭದಲ್ಲೇ ಅದೊಂದು ತಪ್ಪು ಅಭಿಪ್ರಾಯ ಎಂದು ಎಡ ಪಂಥೀಯ ಅರ್ಥಶಾಸ್ತ್ರಜ್ಞರು ಮಾತ್ರವಲ್ಲ, ಪಾಲ್ ಸ್ಯಾಮ್ಯುಎಲ್ಸನ್‌ಅವರಂತಹ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರೂ ಹೇಳಿದ್ದರು. ಅವರು ಕೊಟ್ಟ ಕಾರಣ ಸರಳವಾಗಿತ್ತು: ಚೀನಾದ ಅಥವಾ ಭಾರತದ ಸರಕು ಸಾಮಗ್ರಿಗಳನ್ನು ಅಮೆರಿಕಾ ಮುಕ್ತವಾಗಿ ಆಮದು ಮಾಡಿಕೊಂಡರೆ, ಅಮೆರಿಕಜ ಶ್ರಮಿಕರ ನೈಜ ವೇತನ ಅನಿವಾರ್ಯವಾಗಿ ಇಳಿಯುತ್ತದೆ. ಏಕೆಂದರೆ, ಉನ್ನತ ಮಟ್ಟದ ವೇತನ ಪಡೆಯುತ್ತಿದ್ದ ಅಮೆರಿಕದ ಶ್ರಮಿಕರು ಅವರಿಗಿಂತ ಕೆಳ ಮಟ್ಟದ ವೇತನ ಪಡೆಯುವ ಚೀನಾದ ಅಥವಾ ಭಾರತದ ಶ್ರಮಿಕರೊಂದಿಗೆ ಪೈಪೋಟಿ ಎದುರಿಸ ಬೇಕಾಗುತ್ತದೆ. ಈ ಕಾರಣದಿಂದಾಗಿ, ಅಮೆರಿಕಾ ಮತ್ತು ಇತರ ಮುಂದುವರೆದ ದೇಶಗಳ ಶ್ರಮಿಕರ ವೇತನ ಅನಿವಾರ್ಯವಾಗಿ ಕೆಳಗಿಳಿಯುತ್ತದೆ. ಈಅಂಶದ ಬಗ್ಗೆ ಮತ್ತು ಅದರ ಮೂಲ ಎಲ್ಲಿದೆ ಎಂಬುದರ ಬಗ್ಗೆ ಎಲ್ಲ ಅರ್ಥಶಾಸ್ತ್ರಜ್ಞರಿಗೂ ಸ್ಪಷ್ಟತೆ ಇತ್ತು. ಹಾಗಾಗಿ, ಜಾಗತೀಕರಣವು ವಿಶ್ವದ ಎಲ್ಲ ಶ್ರಮಿಕರಿಗೂ ಒಳಿತು ಮಾಡುವ ಸಾಧ್ಯತೆಯೇ ಇರಲಿಲ್ಲ. ಆದರೆ, ವೇತನದ ಮಟ್ಟ ಕೆಳಗಿರುವ ಚೀನಾ ಮತ್ತು ಭಾರತದಂತಹ ದೇಶಗಳ ಶ್ರಮಿಕರಿಗೆ ಜಾಗತೀಕರಣದಿಂದ ಪ್ರಯೋಜನವಾಗುತ್ತದೆ ಎಂಬ ನಿರೀಕ್ಷೆ ಇತ್ತು.

ಜಾಗತೀಕರಣದ ಈ ಸಮರ್ಥನೆಯನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಸರಕುಗಳ ಮತ್ತು ಬಂಡವಾಳದ ಚಲನೆ ಮುಕ್ತವಾಗಿರುವುದರಿಂದ ಬೇರೆ ಬೇರೆ ದೇಶಗಳ ಶ್ರಮಿಕರ ನಡುವೆ ಪೈಪೋಟಿ ಹೆಚ್ಚಾಗಿ, ಅದು ದೇಶ ದೇಶಗಳ ನಡುವೆ ಇರುವ ವೇತನಗಳ ಅಂತರವನ್ನು ಕೊನೆಗೊಳಿಸುತ್ತದೆ. ಪರಿಣಾಮವಾಗಿ, ಮೂರನೆ ಜಗತ್ತಿನ ಶ್ರಮಿಕರ ನೈಜವೇತನ ಹೆಚ್ಚಾಗುತ್ತದೆ ಹಾಗೂ ಮುಂದುವರೆದ ದೇಶಗಳ ಶ್ರಮಿಕರ ನೈಜವೇತನ ಇಳಿಯುತ್ತದೆ.

ಇದೇ ವಿಷಯವನ್ನು ಮಾರ್ಕ್ಸ್‌ವಾದಿ ಪರಿಭಾಷೆಯಲ್ಲಿ ಹೀಗೆ ಹೇಳಬಹುದು: ಆರ್ಥಿಕ ಚಟುವಟಿಕೆಗಳನ್ನು ಮುಂದುವರೆದ ದೇಶಗಳಿಂದ ತೃತೀಯ ಜಗತ್ತಿನ ದೇಶಗಳಿಗೆ (ಅಗ್ಗದ ವೇತನ ಇರುವ ಕಾರಣದಿಂದ) ವರ್ಗಾಯಿಸುವುದರಿಂದ ಈ ದೇಶಗಳ ಮೀಸಲು ಶ್ರಮಶಕ್ತಿಯ ಬಳಕೆಯಾಗುತ್ತದೆ ಮತ್ತು ಮುಂದುವರೆದ ದೇಶಗಳಲ್ಲಿ ಶ್ರಮಶಕ್ತಿಯ ಮೀಸಲು ಪಡೆ ದೊಡ್ಡದಾಗುತ್ತದೆ. ಈ ಬೆಳವಣಿಗೆಯಿಂದಾಗಿ, ಬೇರೆ ಎಲ್ಲಾ ಅಂಶಗಳು ಯಥಾಸ್ಥಿತಿಯಲ್ಲಿದ್ದಾಗ, ತೃತೀಯ ಜಗತ್ತಿನ ದೇಶಗಳಲ್ಲಿ ವೇತನಗಳು ಹೆಚ್ಚುತ್ತವೆ ಮತ್ತು ಮುಂದುವರೆದ ದೇಶಗಳಲ್ಲಿ ವೇತನಗಳು ಇಳಿಯುತ್ತವೆ. ಆದ್ದರಿಂದ, ಜಾಗತೀಕರಣದಿಂದಾಗಿ ಎಲ್ಲಾ ಶ್ರಮಿಕರಿಗೂ ಪ್ರಯೋಜನವಾಗದಿದ್ದರೂ ಮುಂದುವರೆದ ಮತ್ತು ಅಭಿವೃದ್ಧಿಶೀಲ ದೇಶಗಳ ಶ್ರಮಿಕರ ವೇತನದ ಅಂತರ ಕಡಿಮೆಯಾಗುತ್ತದೆ. ಈ ತರ್ಕದ ಪ್ರಕಾರ, ಎರಡೂ ಕಡೆಗಳಲ್ಲಿಯೂ ಶ್ರಮಿಕರ ಪರಿಸ್ಥಿತಿ ಹೀನಾಯವಾಗುವುದು ಶಕ್ಯವಿಲ್ಲ.

ಹದಗೆಟ್ಟ ಪರಿಸ್ಥಿತಿ

ಮುಂದುವರೆದ ದೇಶಗಳಲ್ಲಿ ಶ್ರಮಿಕರ ಜೀವನ ಹದಗೆಟ್ಟಿದೆ ಎಂದು ಅರ್ಥಶಾಸ್ತ್ರಜ್ಞ ಜೋಸೆಫ್ ಸ್ಟಿಗ್ಲಿಟ್ಜ್ ಇತ್ತೀಚೆಗೆ ಹೇಳಿದ್ದಾರೆ. ಅಮೆರಿಕದ ಸುಮಾರು 90% ಶ್ರಮಿಕರ ಇಂದಿನ ನೈಜವರಮಾನವು ಮೂವತ್ತು ವರ್ಷಗಳ ಹಿಂದಿದ್ದದ್ದಕ್ಕಿಂತ ಸ್ವಲ್ಪ ಜಾಸ್ತಿ ಇದೆ. ಅಮೆರಿಕದ ಶ್ರಮಿಕರ ಇಂದಿನ ಕನಿಷ್ಠ ಕೂಲಿಯು, ಅರುವತ್ತು ವರ್ಷಗಳ ಹಿಂದಿದ್ದದ್ದಕ್ಕಿಂತ ಸ್ವಲ್ಪ ಜಾಸ್ತಿ ಇದೆ.ಜಾಗತೀಕರಣದ ಆರಂಭದ ಅವಧಿಯಲ್ಲಿ ವೇತನಗಳ ಹೆಚ್ಚಳವಾದರೂ ತೀರ ಇತ್ತೀಚೆಗೆ (ಅಂ–ದರೆ, ಜಾಗತೀಕರಣದ ಉತ್ತುಂಗದಲ್ಲಿ) ವೇತನಗಳ ಪರಿಸ್ಥಿತಿ ಹದಗೆಟ್ಟಿದೆ.

ಅಂಕಿ ಅಂಶಗಳು ಹೇಳುವ ಬಹಳ ಮಹತ್ವದ ಇನ್ನೊಂದು ಸಂಗತಿ ಎಂದರೆ, ಇತ್ತೀಚಿನ ವರ್ಷಗಳಲ್ಲಿ ಅಮೆರಿಕದ ಬಿಳಿಯರ ಜೀವಿತಾವಧಿ(ಆಯಸ್ಸು) ದಿಢೀರನೆ ಕ್ಷೀಣಿಸುತ್ತಿದೆ. ಇದು, ಸೋವಿಯತ್ ಒಕ್ಕೂಟದ ಪತನಾನಂತರ ರಷ್ಯಾದಲ್ಲಿ ಜೀವಿತಾವಧಿ ದಿಢೀರನೆ ಇಳಿದಿದ್ದನ್ನು ನೆನಪಿಸುತ್ತದೆ. ಸಾವಿಗೆ ಕಾರಣವಾಗುವ ಯಾವುದೇ ಸಾಂಕ್ರಾಮಿಕ ರೋಗಗಳು ಇಲ್ಲದಿರುವಾಗ, ಮೊದಲನೆಯ ಸ್ಥಾನದಲ್ಲಿರುವ ಬಂಡವಾಳಶಾಹಿ ಅಮೆರಿಕಾದಲ್ಲಿ ಜೀವಿತಾವಧಿ ಇಳಿಯುತ್ತಿರುವುದು ಗಂಭೀರ ವಿಷಯ. ಅಂತಹ ಅಮೆರಿಕದ ಶ್ರಮಿಕರ ಜೀವನದಲ್ಲಿ ಆಗಿರುವ ಇಂತಹ ಬದಲಾವಣೆ, ಜಾಗತೀಕರಣವು ಎಷ್ಟರ ಮಟ್ಟಿಗೆ ಶ್ರಮಿಕರ ಜೀವನವನ್ನು ಹಾಳುಗೆಡವಿದೆ ಎಂಬುದನ್ನು ಪ್ರಮಾಣೀಕರಿಸುತ್ತದೆ.

ಹನುಮಂತ ಹಗ್ಗ ತಿನ್ನುತ್ತಿರುವಾಗ ...

ಅಬಿವೃದ್ಧಿ ಹೊಂದಿರುವ ಉಳಿದ ದೇಶಗಳ ಕತೆ–ಯೂ ಹೀಗೆಯೇ ಇದೆ. ಅಲ್ಲಿನ ಶ್ರಮಿಕರ ವ್ಯಥೆಯೂ ಹೀಗೆಯೇ ಇದೆ. ಜೀವನದ ಗುಣಮಟ್ಟದ ಬಗ್ಗೆ ಮಾತನಾಡುವಾಗ, ಅಮೆರಿಕ ಬಹಳ ಮುಂದಿದೆ ಎಂದು ಹೇಳುವುದು ಸಾಮಾನ್ಯ. ಆರ್ಥಿಕ ಅಭಿವೃದ್ಧಿಯಲ್ಲಿ ಅದು ಮೊದಲ ಸ್ಥಾನದಲ್ಲಿದೆ. ಮಿಲಿಟರಿ ಲೆಕ್ಕಾಚಾರದಲ್ಲಿ ಅದು ದೊಡ್ಡಣ್ಣ. 2008ರ ಬಿಕ್ಕಟ್ಟಿನ ನಂತರ ಈಗ ಅದು ಚೇತರಿಕೆಯ ಹಾದಿಯಲ್ಲಿರುವಂತೆ ಕಾಣುತ್ತಿದೆ. ಅಂತಹ ದೇಶದ ಶ್ರಮಜೀವಿಗಳ ಪರಿಸ್ಥಿತಿ ಹದಗೆಟ್ಟಿರುವುದು ಬಹಳ ಮಹತ್ವದ ವಿಷಯವೇ. ಬ್ರಿಟನ್‌ನಲ್ಲಿಯೂ, ಇತ್ತೀಚಿನ ವರ್ಷಗಳಲ್ಲಿ ಶ್ರಮಿಕರ ನೈಜ ವೇತನ ಇಳಿದಿದೆ. ಹಾಗಾಗಿ, ಜಾಗತೀಕರಣದ ಬಗ್ಗೆ ಅಲ್ಲಿನ ಶ್ರಮಿಕರಿಗೆ ಸಿಟ್ಟಿದ್ದದ್ದು ಆಶ್ಚರ್ಯವೇನಲ್ಲ. ಶ್ರಮಿಕರ ಕೋಪದ ಬಗ್ಗೆ ಎಡಶಕ್ತಿಗಳು ಕಾಳಜಿ ತೋರಿಸುತ್ತಿಲ್ಲ. ಬಲ ಪಂಥೀಯರು ಪರಿಸ್ಥಿತಿಯ ಲಾಭ ಪಡೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಬ್ರೆಕ್ಸಿಟ್ ಮತ್ತು ಅಮೆರಿಕದಲ್ಲಿ ಡೊನಾಲ್ಡ್ ಟ್ರಂಪ್ ಜನಪ್ರಿಯತೆಯ ಹಿಂದಿರುವ ಕಾರಣಗಳು ಸ್ಪಷ್ಟವಾಗಿವೆ.

> **ಜಾಗತೀಕರಣ ಒಳ್ಳೇದು ಮಾಡುತ್ತದೆ. ವಿಶ್ವದಲ್ಲಿ ಎಲ್ಲರಿಗೂ ಆರ್ಥಿಕವಾಗಿ ಪ್ರಯೋಜನವಾಗುವ ಜಾಗತೀಕರಣವು ಒಂದು ದಿಟ್ಟ ಹೆಜ್ಜೆ ಎಂಬ ಅಬ್ಬರದ ಪ್ರಚಾರ ಮಾಡಲಾಗಿತ್ತು.ಇದು, ಸುಳ್ಳಾಗಿದೆ. ಜಾಗತೀಕರಣದ ಬಲಗೈ ಆಗಿರುವ ಹಣಕಾಸೀಕರಣದ ಪ್ರಯೋಜನ ಪಡೆದಿರುವ ಮಧ್ಯಮ ವರ್ಗದವರನ್ನು ಬಳಸಿಕೊಂಡಿರುವ ಪ್ರಚಾರದ ಸದ್ದು ಗದ್ದಲಗಳಿಂದಾಗಿ, ಜಾಗತೀಕರಣವು ಮುಂದುವರೆದ ಹಾಗೂ ಹಿಂದುಳಿದ ದೇಶಗಳ ಜನಸಮೂಹದ ಜೀವನವನ್ನು ದುರ್ಭರಗೊಳಿಸಿದೆ ಎಂಬುದನ್ನು ಗುರುತಿಸಲು ನಮಗೆ ಸಾಧ್ಯವಾಗುತ್ತಿಲ್ಲ.**
>
> **–ಪ್ರೊ. ಪ್ರಭಾತ್ ಪಟ್ನಾಯಕ್**



ಮೂರನೆಯ ಜಗತ್ತಿನ ದೇಶಗಳಲ್ಲಿ ಶ್ರಮಿಕರ ಜೀವನ ದು:ಸ್ಥಿತಿಯಲ್ಲಿದೆ. ಅದನ್ನುಮೇಲೆ ತಿಳಿಸಿದ ರೀತಿಯಲ್ಲಿ ವಿವರಿಸಲಾಗದು. ಅದು ಬೇರೆಯೇ ಇದೆ.ಭಾರತ ಇದಕ್ಕೆ ಅತ್ಯುತ್ತಮ ಉದಾಹರಣೆಯಾಗಿ ನಿಲ್ಲುತ್ತದೆ.ಭಾರತದಲ್ಲಿ ಶ್ರಮಜೀವಿಗಳ ಪರಿಸ್ಥಿತಿ ಹದಗೆಟ್ಟಿರುವುದನ್ನು ಅವರ ಆಹಾರ ಬಳಕೆಯ ಅಂಕಿ ಅಂಶಗಳು ತಿಳಿಸುತ್ತವೆ.(ಹೋಲಿಕೆಯ ಉದ್ದೇಶಕ್ಕಾಗಿ, ಸ್ಯಾಂಪಲ್‌ಸರ್ವೆ ವರ್ಷಗಳಾದ 1993–94 ಮತ್ತು 2009–10, ಮತ್ತು ಬಡತನದ ಒರೆಗಲ್ಲಾಗಿ ಪ್ರತಿ ದಿನ ಪ್ರತಿ ವ್ಯಕ್ತಿಗೆ ಬೇಕಾಗುವ ಕನಿಷ್ಠ 2200ಮತ್ತು 2100ಕ್ಯಲೊರಿ ಪ್ರಮಾಣದ ಆಹಾರ ಬಳಕೆಯನ್ನು ಪರಿಗಣಿಸಲಾಗಿದೆ.) ಜಾಗತೀಕರಣದ ಜೊತೆಗೆ ಸಂಬಂಧ ಹೊಂದಿರುವ ನವ–ಉದಾರವಾದಿ ನೀತಿಗಳ ಆರಂಭದಲ್ಲಿ, ಅಂದರೆ 1993–94ರಲ್ಲಿ 2200 ಕ್ಯಲೊರಿಗಿಂತ ಕಡಿಮೆ ಪ್ರಮಾಣದ ಆಹಾರ ಬಳಸುತ್ತಿದ್ದ ಗ್ರಾಮೀಣ ಬಡವರ ಸಂಖ್ಯೆ ಶೇ.58.5 ಇತ್ತು. ಜಾಗತೀಕರಣದ ಜಾರಿಯ ಹದಿನಾರು ವರ್ಷಗಳ ಬಳಿಕ, ಅಂದರೆ, 2009–10ರಲ್ಲಿ ಇದೇ ಗ್ರಾಮೀಣ ಬಡವರ ಸಂಖ್ಯೆ ಶೇ.76ಕ್ಕೆ ಏರಿತ್ತು. ಹಾಗೆಯೇ, 1993–94ರಲ್ಲಿ, 2100 ಕ್ಯಲೊರಿಗಿಂತ ಕಡಿಮೆ ಪ್ರಮಾಣದ ಆಹಾರ ಬಳಸುತ್ತಿದ್ದ ಶೇ.57 ಪಟ್ಟಣದ ಬಡವರ ಸಂಖ್ಯೆ 2009–10ರಲ್ಲಿ ಶೇ.73ಕ್ಕೆ ಏರಿತ್ತು.

ಹಿಂದೆಂದೂ ಕಾಣದ ಮಟ್ಟದಲ್ಲಿ ಜಿಡಿಪಿ ಬೆಳವಣಿಗೆ ದರ ಇದೆಯೆಂದು ಹೇಳಿಕೊಳ್ಳುತ್ತಿದ್ದ ಸರ್ಕಾರಕ್ಕೆ ಈ ಪರಿಯ ಬಡತನದ ಅಂಕಿ ಅಂಶಗಳು ಮುಜುಗುರ ಉಂಟುಮಾಡಿದವು. ಸರ್ಕಾರವು, 2009–10 ವರ್ಷದಲ್ಲಿ ಬರ ಇದ್ದುದರಿಂದ ಆಹಾರ ಸೇವನೆ ಕಡಿಮೆಯಾಗಿತ್ತೆಂಬ ನೆಪ ಹೂಡಿ, ಸಮೃದ್ಧಿಯಾದ ಮಳೆ ಬೆಳೆಯಾಗಿದ್ದ 2011–12 ವರ್ಷ ಆಧರಿಸಿ ಹೊಸ ಸರ್ವೆ ನಡೆಸಿತು. ಈ ಸರ್ವೆ ಹೊರಹಾಕಿದ ಅಂಕಿ ಅಂಶಗಳ ಪ್ರಕಾರ, 2011–12 ವರ್ಷದಲ್ಲಿ ಗ್ರಾಮೀಣ ಬಡವರ ಪ್ರಮಾಣ 68% ಇತ್ತೆಂದೂ (1993–94ರಲ್ಲಿ ಶೇ.58.5 ಮತ್ತು 2009–10ರಲ್ಲಿ ಶೇ.76), ಹಾಗೂ ಪಟ್ಟಣದ ಬಡವರ ಸಂಖ್ಯೆ ಶೇ.65 ಇತ್ತೆಂದೂ(1993–94ರಲ್ಲಿ ಶೇ.57 ಮತ್ತು 2009–10ರಲ್ಲಿ ಶೇ.73) ವರದಿಯಾಗಿದೆ. ಇದು, ಜಾಗತೀಕರಣದ ಅವಧಿಯಲ್ಲಿ ಬಡತನ ಹೆಚ್ಚಿರುವುದನ್ನು ಸೂಚಿಸುತ್ತದೆ.

ಕಡಿಮೆ ಆಹಾರ ಸೇವನೆ ಅಥವಾ ಪೌಷ್ಟಿಕತೆಯ ಕೊರತೆಯ ಸಮಸ್ಯೆಯನ್ನು ಮುಚ್ಚಿಹಾಕುವ ಸಲುವಾಗಿ, ಜನಉತ್ತಮ ಸ್ಥಿತಿಯಲ್ಲಿರುವುದರಿಂದ ಅವರು ಅಹಾರಕ್ಕೆ ಖರ್ಚುಮಾಡುವುದಕ್ಕಿಂತ ಹೆಚ್ಚು ಹಣವನ್ನು ಆರೋಗ್ಯ, ಶಿಕ್ಷಣ ಮುಂತಾದವುಗಳಿಗೆ ಖರ್ಚು ಮಾಡುತ್ತಿದ್ದಾರೆ ಎಂದು ಸರ್ಕಾರ ಕೊಟ್ಟ ವಿವರಣೆ ಸುಳ್ಳು. ಏಕೆಂದರೆ, ಪ್ರಪಂಚದ ಎಲ್ಲೆಡೆಯಲ್ಲೂ, ಜನರ ನೈಜವರಮಾನ ಹೆಚ್ಚಿದಾಗ ಅವರ ಆಹಾರ ಧಾನ್ಯಗಳ ಒಟ್ಟು ಬಳಕೆ ಹೆಚ್ಚುತ್ತದೆ: ನೇರವಾಗಿ ಮತ್ತು ಪರೋಕ್ಷವಾಗಿ (ಪ್ರಾಣಿಗಳು ತಿನ್ನುವ ಆಹಾರವಾಗಿಯೂ) ಬಳಕೆಯಾಗುತ್ತದೆ. ಹಾಗಾಗಿ, ಜಾಗತೀಕರಣದ ಅವಧಿಯಲ್ಲಿ, ಭಾರತದಲ್ಲಿ ಆಹಾರ ಧಾನ್ಯಗಳ ಒಟ್ಟು ಬಳಕೆಯ ಇಳಿಕೆ ಮತ್ತು ಜನರ ಆಹಾರದಲ್ಲಿ ಕ್ಯಲೊರಿ ಮತ್ತು ಪ್ರೊಟೀನ್ ಅಂಶಗಳ ಕೊರತೆಯು ಅವರ ನೈಜವರಮಾನಗಳ ಇಳಿಕೆಯನ್ನು ಸೂಚಿಸುತ್ತದೆ. ಆರೋಗ್ಯ, ಶಿಕ್ಷಣ ಮುಂತಾದ ಅಗತ್ಯ ಸೇವೆಗಳ ತಲಾ ಬಳಕೆಯ ಇಳಿಕೆ ಮತ್ತು ಹಣದುಬ್ಬರದ ಏರಿಕೆ ಇವು ಜನರ ನೈಜವರಮಾನಗಳ ಇಳಿಕೆಯನ್ನು ದೃಢಪಡಿಸುತ್ತವೆ. ಇದನ್ನೇ ಬೇರೆಮಾತುಗಳಲ್ಲಿ ಹೇಳುವುದಾದರೆ, ಮುಂದುವರೆದ ದೇಶಗಳಲ್ಲಿ ಆಗಿರುವಂತೆ ವರಮಾನಗಳ ಇಳಿಕೆಯ ವಿದ್ಯಮಾನವು, ಭಾರತವೂ ಸೇರಿದಂತೆ ತೃತೀಯ ಜಗತ್ತಿನಎಲ್ಲ ದೇಶಗಳಲ್ಲೂ ಆಗಿದೆ.ಈ ಪರಿಸ್ಥಿತಿಯು, ಜಾಗತೀಕರಣದ ಸಮರ್ಥಕರ ತರ್ಕದೊಂದಿಗೆ ಹೊಂದಿಕೆಯಾಗುತ್ತಿಲ್ಲ. ಅವರ ತರ್ಕ ಹೀಗಿ–ತ್ತು: ‘ಜಾಗತೀಕರಣದಿಂದಾಗಿ ವೇತನದ ಮಟ್ಟ ಕೆಳಗಿರುವ ಚೀನಾ ಮತ್ತು ಭಾರತದಂತಹ ದೇಶಗಳ ಶ್ರಮಿಕರಿಗೆ ಪ್ರಯೋಜನವಾಗುತ್ತದೆ. ಮುಂದುವರೆದ ಮತ್ತು ತೃತೀಯ ಜಗತ್ತಿನ ಶ್ರಮಿಕರ ವೇತನಗಳ ಅಂತರ ಕಡಿಮೆಯಾಗುತ್ತದೆ.ಎರಡೂ ಕಡೆಗಳಲ್ಲಿಯೂ ಶ್ರಮಿಕರ ಪರಿಸ್ಥಿತಿ ಹೀನಾಯವಾಗುವುದು ಶಕ್ಯವಿಲ್ಲ’ ಎಂಬುದಾಗಿತ್ತು. ಆದರೆ, ಆದದ್ದೇ ಬೇರೆ. ಈ ಪರಿಸ್ಥಿತಿಯನ್ನು ವಿವರಿಸುವುದಾದರೂ ಹೇಗೆ?

ಕಿರು ಉತ್ಪಾದನೆಗಳಿಗೆ ಅವಕಾಶವಿಲ್ಲ

ಮುಂದುವರೆದ ದೇಶಗಳ ಉತ್ಪಾದನಾ ಚಟುವಟಿಕೆಗಳು ತೃತೀಯ ಜಗತ್ತಿನ ದೇಶಗಳಿಗೆ ವರ್ಗಾವಣೆಯಾಗಿಅಲ್ಲಿ ಉದ್ಯೋಗಗಳ ಸೃಷ್ಟಿಯೂ ಮತ್ತು ವೇತನಗಳ ಏರಿಕೆಯೂ ಆಗುತ್ತವೆ ಎಂಬುದೇ ಜಾಗತೀಕರಣದ ಸಾರವೂ ಮತ್ತು ಅದರ ಹಿಂದಿರುವ ತರ್ಕವೂ ಆಗಿತ್ತು. ಆದರೆ, ಬಂಡವಾಳಿಗರು ಕಿರು ಉತ್ಪಾದನೆಗಳ ಅವಕಾಶಗಳನ್ನು ಕಬಳಿಸುವ ಅಂಶವನ್ನು ಜಾಗತೀಕರಣದ ತರ್ಕ ಗಮನಿಸಲಿಲ್ಲ. ಅನೇಕ ಮಂದಿ ಕಿರುಉತ್ಪಾದಕರು ತಮ್ಮ ಪಾರಂಪರಿಕ ಕಸುಬು ತೊರೆದು ಉದ್ಯೋಗ ಅರಸಿ ನಗರಗಳತ್ತ ವಲಸೆ ಹೋಗಿರುವುದರಿಂದ ನಿರುದ್ಯೋಗಿಗಳ ಸಂಖ್ಯೆ ಏರಿದೆ. ಅವರಿಗೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಉದ್ಯೋಗದ ಅವಕಾಶಗಳು ಇಲ್ಲವಾಗಿವೆ. ಏಕೆಂದರೆ, ತಂತ್ರಜ್ಞಾನದ ಆವಿಷ್ಕಾರಗಳು ಶ್ರಮಿಕರ ಉತ್ಪಾದಕತೆ ಹೆಚ್ಚಿಸುವುದರ ಜೊತೆಗೆ ಉದ್ಯೋಗಗಳು ಕಡಿಮೆಯಾಗುವಂತೆ ಮಾಡುತ್ತವೆ.

ಇಲ್ಲೊಂದು ವಿಷ ವೃತ್ತ ನಿರ್ಮಾಣವಾಗುತ್ತದೆ. ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿದಷ್ಟೂ ಶ್ರಮಿಕರ ವೇತನಗಳು ಇದ್ದಲ್ಲೇ ಉಳಿಯುತ್ತವೆ ಇಲ್ಲವೇ ನೈಜ ವೇತನದ ಲೆಕ್ಕದಲ್ಲಿ ಇಳಿಯುತ್ತವೆ. ಶ್ರಮಿಕರ ಉತ್ಪಾದಕತೆ ಹೆಚ್ಚುತ್ತಿರುವ ಸಮಯದಲ್ಲಿ ವೇತನಗಳು ಇದ್ದಲ್ಲೇ ಉಳಿದರೆ ಅಥವಾ ನೈಜ ವೇತನಗಳು ಇಳಿದರೆ ಉತ್ಪತ್ತಿಯಲ್ಲಿ ಹೆಚ್ಚುವರಿ ಮೌಲ್ಯದ ಭಾಗವೂ ಹೆಚ್ಚುತ್ತದೆ (share of surplus in output).ಹೆಚ್ಚುವರಿ ಮೌಲ್ಯದ ಈ ಫಲ, ದೇಶೀಯ ಉದ್ಯೋಗ ಹೆಚ್ಚಿಸುವ ಉತ್ಪಾದನೆಗಳನ್ನು ಕೊಳ್ಳಲು ಬಳಕೆಯಾಗುವುದಿಲ್ಲ. (ಇಂತಹ ಉತ್ಪಗಳನ್ನು ವೇತನದ ವರಮಾನವಿರುವವರು ಕೊಳ್ಳುತ್ತಾರೆ). ಹಾಗಾಗಿ, ಕೊಳ್ಳುವ ಶಕ್ತಿಯು ಶ್ರಮಿಕರಿಂದ ಹೆಚ್ಚುವರಿ ಮೌಲ್ಯದ ಬಳಕೆದಾರರತ್ತ ವಾಲುತ್ತದೆ. ಇದು ಉದ್ಯೋಗಗಳ ಕುಗ್ಗುವಿಕೆಗೆ ಕಾರಣವಾಗುತ್ತದೆ. ಈ ಪ್ರಕ್ರಿಯೆ ಹೀಗೆಯೇ ಸಾಗುತ್ತದೆ.

ಒಂದು ಬಿಕ್ಕಟ್ಟು ಆಳವಾಗುತ್ತಾ ಹೋದಂತೆ ಈ ವಿಷ ವೃತ್ತವೂ ವಿಸ್ತಾರವಾಗುತ್ತಾ ಇನ್ನೂ ಹೆಚ್ಚಿನ ಪ್ರಮಾಣದ ನಿರುದ್ಯೋಗ ಉಂಟುಮಾಡಿ ಶ್ರಮಿಕರನ್ನು ಬಡತನಕ್ಕೆ ತಳ್ಳುತ್ತದೆ. ಉದಾರವಾದಿ ಅರ್ಥಶಾಸ್ತ್ರಜ್ಞ ಪಾಲ್ ಸ್ಯಾಮ್ಯುಎಲ್ಸನ್ ಭಾವಿಸಿದ್ದಂತೆ ಜಾಗತೀಕರಣದ ಹಾನಿಯು ಮುಂದುವರೆದ ದೇಶಗಳ ಶ್ರಮಿಕರಿಗೆ ಮಾತ್ರ ಸೀಮಿತವಾಗಲಿಲ್ಲ. ಅದು ತೃತೀಯ ಜಗತ್ತಿನ ಶ್ರಮಿಕರ ಬೆನ್ನು ಮೂಳೆಯನ್ನೇ ಮುರಿದಿದೆ.

ಹೀಗೆ ಹೇಳಿದ್ದನ್ನು ಜಾಗತೀಕರಣವು ಸಮಸ್ತ ಶ್ರಮಿಕರ ಮೇಲೂ ಸಮವಾಗಿ ಅಡ್ಡ ಪರಿಣಾಮ ಬೀರಿದೆ ಎಂದು ಭಾವಿಸಬಾರದು. ಐ ಟಿ ವಲಯ ಮತ್ತು ಸೇವಾ ವಲಯದಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತಿವೆ. ಭಾರತದ ಐ ಟಿ ವಲಯದಲ್ಲಿ ದುಡಿಯುತ್ತಿರುವವರ ಜೀವನ ಮಟ್ಟ ಉತ್ತಮವಾಗಿದೆ. ಇವರಿಗೆ ಸೇವೆ ಒದಗಿಸುವ ಸೇವಾ ವಲಯದ ಇನ್ನೊಂದು ವಿಭಾಗದ ವರಜೀವನವು ಇವರನ್ನು ಅವಲಂಬಿಸಿದೆ. ಮಧ್ಯಮ ವರ್ಗದವರೆಂದು ಗುರುತಿಸಲಾಗಿರುವ ‘ಇವರ ಸಂ–ಖ್ಯೆ ಸಾಕಷ್ಟು ದೊಡ್ಡದು. ಇವರು ಜಾಗತೀಕರಣದ ಸಮರ್ಥಕರು. ಪ್ರತಿಭಾವಂತರಿಂದ ‘ಕೂಡಿದ ಈ ವಿಭಾಗವು ಮಾಧ್ಯಮಗಳಲ್ಲಿ ಹೆಚ್ಚಿನ ಪ್ರಚಾರ ಪಡೆಯುತ್ತದೆ. ಹಾಗಾಗಿ, ಇವರು ಅಭಿಪ್ರಾಯಗಳ ನಿರ್ಮಾಪಕರಾಗಿದ್ದಾರೆ. ಆದ್ದರಿಂದ, ಜಾಗತೀಕರಣದ ಪ್ರಯೋಜನೆಗಳನ್ನು ಪ್ರಸಾರ ಮಾಡಲು ಇವರನ್ನು ಬಳಸಿಕೊಳ್ಳಲಾಗುತ್ತಿದೆ.

ಶ್ರಮಿಕ ವರ್ಗದ ಒಂದು ವಿಭಾಗವಾಗಿರುವ ಇವರ ಜೀವನ ಮಟ್ಟ ಉತ್ತಮವಾಗಿರುವುದು ಮತ್ತು ಅದೇ ಕಾರಣದಿಂದ ಅವರು ಜಾಗತೀಕರಣವನ್ನು ಬೆಂಬಲಿಸುತ್ತಿರುವ ಅಂಶಗಳನ್ನು ಬಳಸಿಕೊಂಡು ಜಾಗತೀಕರಣದಿಂದ ಭಾರತದ ಇಡೀಜನತೆಗೆ ಪ್ರಯೋಜನವಾಗುತ್ತದೆ ಎಂಬ ತಪ್ಪು ಕಲ್ಪನೆ ಮೂಡಿಸಲಾಗುತ್ತಿದೆ. ಪ್ರಪಂಚದ ಬೇರೆಡೆಗಳಲ್ಲಿಯೂ, ಜಾಗತೀಕರಣದ ಬಲಗೈ ಆಗಿರುವ ಹಣಕಾಸೀಕರಣದ ಪ್ರಯೋಜನ ಪಡೆದಿರುವ ಮಧ್ಯಮ ವರ್ಗದವರನ್ನು ಬಳಸಿಕೊಂಡು ಜಾಗತೀಕರಣವನ್ನು ಹಾಡಿ ಹೊಗಳಲಾಗುತ್ತಿದೆ. ಈ ಪ್ರಚಾರ ಎಬ್ಬಿಸಿರುವ ಸದ್ದು ಗದ್ದಲಗಳಿಂದಾಗಿ, ಜಾಗತೀಕರಣವು ಮುಂದುವರೆದ ಹಾಗೂ ಹಿಂದುಳಿದ ದೇಶಗಳ ಜನಸಮೂಹದ ಜೀವನವನ್ನು ದುರ್ಭರಗೊಳಿಸಿದೆ ಎಂಬುದನ್ನು ಗುರುತಿಸಲು ನಮಗೆ ಸಾಧ್ಯವಾಗುತ್ತಿಲ್ಲ.

(‘ಪೀಪಲ್ಸ್ ಡೆಮಾಕ್ರಸಿ’ ಪತ್ರಿಕೆಯಲ್ಲಿ ಪ್ರಕಟವಾಗಿರುವ ಪ್ರೊ.ಪ್ರಭಾತ್ ಪಟ್ನಾಯಕ್ ಅವರ ಲೇಖನದ ಭಾವಾನುವಾದ.

ಭಾಷಾಂತರ: ಕೆ.ಎಂ ನಾಗರಾಜ್)


ಪರ್ಯಾಯ ದಾರಿಯ ಪ್ರಯತ್ನದಲ್ಲಿ ಕೇರಳ ಎಲ್‌ಡಿಎಫ್‌ನ ಮೊದಲ ಬಜೆಟ್



ಜುಲೈ 8 ರಂದು ಕೇರಳದ ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಸರಕಾರದ ಮೊದಲ ಬಜೆಟ್ ಮಂಡಿಸಲಾಯಿತು. 2016–17ರ ತಾತ್ಕಾಲಿಕ ಬಜೆಟನ್ನು ಹಿಂದಿನ ಯುಡಿಎಫ್ ಸರಕಾರ ಮಂಡಿಸಿದ್ದರಿಂದ ಇದು ಈ ವರ್ಷದ ಪರಿಷ್ಕೃತ ಬಜೆಟ್. ಹಣಕಾಸು ಮಂತ್ರಿ ಡಾ. ಟಿ.ಎಂ.ಥಾಮಸ್ ಐಸಾಕ್ ಮಂಡಿಸಿದ ಬಜೆಟ್ ಕೊಲ್ಲಿ ಬಿಕ್ಕಟ್ಟು, ಅಡಿಕೆ, ರಬ್ಬರ್ ಮುಂತಾದ ನಗದು ಬೆಳೆಗಳ ಬೆಲೆಗಳಲ್ಲಿ ತೀವ್ರ ಇಳಿಕೆ ಮತ್ತು ಹಿಂದಿನ ಯುಡಿಎಫ್ ಸರಕಾರದ ದುರಾಡಳಿತವೂ ಸೇರಿದಂತೆ ಹಲವು ಕಾರಣಗಳಿಂದಾಗಿ ರಾಜ್ಯದಲ್ಲಿ ಉಂಟಾಗಿರುವ ತೀವ್ರ ಹಣಕಾಸು ಬಿಕ್ಕಟ್ಟಿನಿಂದ ಹೊರಬರಲು ಕ್ರಮಗಳನ್ನು ಯೋಜಿಸಿರುವುದಲ್ಲದೆ ಬಡವಿಭಾಗಗಳಿಗೆ ಕಲ್ಯಾಣ ಕ್ರಮಗಳನ್ನು ವಿಸ್ತರಿಸುವ ಯೋಜನೆಗಳನ್ನೂ ಮಂಡಿಸಿದೆ.

ನವ–ಉದಾರವಾದ ಹಾಕಿದ ಬೇಲಿಗಳನ್ನು ದಾಟುವ ಪ್ರಯತ್ನವನ್ನು ಈ ಎಲ್‌ಡಿಎಫ್ ಬಜೆಟ್ ಮಾಡಿದೆ ಎಂದು ಪರಿಣಿತರೊಬ್ಬರು ಈ ಪರಿಷ್ಕೃತ ಬಜೆಟನ್ನು ವಿಶ್ಲೇಷಿಸುತ್ತ ಹೇಳಿದ್ದಾರೆ. ಇದಕ್ಕೆ ಅದು ದ್ವಿವಿಧ ಕಾರ್ಯತಂತ್ರವನ್ನು ಬಳಸಿದೆ. ಒಂದು ಬಜೆಟಿನ ಮಿತಿಯೊಳಗೆ ಮತ್ತು ಇನ್ನೊಂದು ಬಜಟಿನ ಆಚೆ ಹೊಸ ಹಣಕಾಸು ಅವಕಾಶವನ್ನು ಕಲ್ಪಿಸಿಕೊಂಡು.

ಬಜೆಟಿನಲ್ಲಿ 'ನಿಧಾನಗತಿ–ವಿರೋಧಿ ಪ್ಯಾಕೇಜ್'ನ ಪ್ರಸ್ತಾವವಿದೆ. ಇದಕ್ಕೆ 12,000 ಕೋಟಿ ರೂ.ಗಳನ್ನು ಬಜೆಟ್ ಮತ್ತು ಬಜೆಟ್ ಹೊರಗಿನಿಂದ ಅಂದರೆ ಕೆಐಐಎಫ್‌ಬಿ(ಮೂಲರಚನೆ ಹೂಡಿಕೆ ನಿಧಿ ಮಂಡಳಿ) ಬಾಂಡ್‌ಗಳ ಮೂಲಕ ಹೊಂದಿಸಲಾಗುವುದು.



ಇದರಡಿಯಲ್ಲಿ ರಸ್ತೆಗಳು, ಸೇತುವೆಗಳು ಮತ್ತು ಐಟಿ ಪಾರ್ಕ್‌ಗಳಂತಹ ಅಭಿವೃದ್ಧಿ ಮತ್ತು ಮೂಲರಚನೆಯ ಪ್ರಾಜೆಕ್ಟುಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಕೇರಳ ಹಣಕಾಸು ಮಂತ್ರಿಗಳು ಹೇಳಿದ್ದಾರೆ.

ಸಾಮಾಜಿಕ ಭದ್ರತೆ, ಪ್ರಗತಿ ಮತ್ತು ಅಭಿವೃದ್ಧಿಯ ಮೇಲೆ ಈ ಬಜೆಟ್ ಗಮನ ಕೇಂದ್ರೀಕರಿಸಿದೆ ಎಂದ ಮುಖ್ಯಮಂತ್ರಿ ವಿಜಯನ್ ಜನಸಾಮಾನ್ಯರ ಮೇಲೆ ಹೊರೆ ಹಾಕದೆ ಆದಾಯವನ್ನು ಹೆಚ್ಚಿಸುವ ರೀತಿಯಲ್ಲಿ ರೂಪಿಸಲಾಗಿದೆ, ಇದು ಶಿಕ್ಷಣ ಮತ್ತು ಆರೋಗ್ಯ ವಲಯಗಳಲ್ಲಿ ಸರಕಾರದ ಮಧ್ಯಪ್ರವೇಶಕ್ಕೆ ಒತ್ತು ನೀಡಿದೆ ಎಂದಿದ್ದಾರೆ.

ತೆರಿಗೆ ಆದಾಯವನ್ನು ಪ್ರತಿವರ್ಷ 25ಶೇ.ದಷ್ಟು ಹೆಚ್ಚಿಸಲು ಹಲವು ಕ್ರಮಗಳನ್ನು ಕೈಗೊಳ್ಳಲಾಗುವುದು. ಇದರಲ್ಲಿ ಭ್ರಷ್ಟಾಚಾರದ ನಿರ್ಮೂಲನೆಯೂ ಸೇರಿದೆ.

ಮುಂದಿನ ಐದು ವರ್ಷಗಳಲ್ಲಿ 1 ಲಕ್ಷ ಕೋಟಿ ರೂ. ಹೂಡಿಕೆಗಳನ್ನು ಆಕರ್ಷಿಸಲು ಕ್ರಮಗಳನ್ನು ಕೈಗೊಳ್ಳಲಾಗುವುದು.

ಎಲ್ಲ ಕಲ್ಯಾಣ ಪೆನ್ಷನ್‌ಗಳ ಮೊತ್ತವನ್ನು 1000ರೂ.ಗೆ ಏರಿಸಲಾಗಿದೆ. ಇದನ್ನು ಎಲ್ಲ ಫಲಾನುಭವಿಗಳಿಗೆ ಒಂದು ತಿಂಗಳ ಮುಂಗಡದೊಂದಿಗೆ ವಿತರಿಸಲಾಗುವುದು ಎಂದು ಹಣಕಾಸು ಮಂತ್ರಿಗಳು ಹೇಳಿದರು.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕಾರ್ಮಿಕರನ್ನು ಪುಕ್ಕಟೆ ರೇಶನ್ ಸ್ಕೀಮಿನಲ್ಲಿ ಸೇರಿಸಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಲಾಗುವುದು. ಇದಕ್ಕೆ ಹೆಚ್ಚಿನ 300 ಕೋಟಿ ರೂ.ಗಳನ್ನು ಒದಗಿಸಲಾಗಿದೆ, ಅವಶ್ಯಕ ಸರಕುಗಳ ಬೆಲೆಯೇರಿಕೆಗಳನ್ನು ತಡೆಯಲು 75 ಕೋಟಿ ರೂ.ಗಳನ್ನು ತೆಗೆದಿಡಲಾಗಿದೆ.

ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಲು ವಿಶೇಷ ಗಮನ ನೀಡಲಾಗಿದೆ. ಉನ್ನತ ಶಿಕ್ಷಣಕ್ಕೆ 723.53 ಕೋಟಿ ನೀಡಲಾಗಿದೆ. ಇಷ್ಟು ಹಣ ಹಿಂದೆ-ಂದೂ ಕೊಡಲಾಗಿಲ್ಲ ಎನ್ನಲಾಗಿದೆ. 'ಅಂತರ್ರಾಷ್ಟ್ರೀಯ ಉನ್ನತಶಿಕ್ಷಣ ವಲಯ'ಗಳನ್ನು ರಾಜ್ಯದ ಹಲವೆಡೆಗಳಲ್ಲಿ ಆರಂಭಿಸಲಾಗುವುದು. ಸಾಮಾನ್ಯಶಿಕ್ಷಣಕ್ಕೆ ಇದಕ್ಕೆ ಮುಂದಿನ ಐದು ವರ್ಷಗಳಲ್ಲಿ 1074.62 ಕೋಟಿ ರೂ.ಗಳನ್ನು ನೀಡಲಾಗಿದೆ. ಕೋಝಿಕೋಡ್‌ನ ನಾಡಕಾವು ಸರಕಾರೀ ಶಾಲೆಯಲ್ಲಿ ನಡೆಸಿದ ಗುಣಮಟ್ಟ ಹೆಚ್ಚಳ ಕಾರ್ಯಕ್ರಮದ ಆಧಾರದ ಮೇಲೆ 100 ಸರಕಾರೀ ಶಾಲೆಗಳನ್ನು ಅಂತರ್ರಾಷ್ಟ್ರೀಯ ಮಟ್ಟಕ್ಕೆ ಏರಿಸಲಾಗುವುದು.

ತೆರಿಗೆ ಆದಾಯ ಹೆಚ್ಚಿಸುವ ಕ್ರಮಗಳಾಗಿ ಪ್ಯಾಕ್ಡ್ ಗೋಧಿ ಉತ್ಪನ್ನಗಳು ಮತ್ತು ಬಾಸ್ಮತಿ ಅಕ್ಕಿಯ ಮೇಲೆ 5ಶೇ. ತೆರಿಗೆ ಮತ್ತು ಬ್ರಾಂಡೆಡ್ ರೆಸ್ಟೋರೆಂಟ್‌ಗಳಲ್ಲಿ ಕೊಡಲಾಗುವ ಪಿಝ್ಝಾ ಮುಂತಾದ ಆಹಾರಗಳಿಗೆ 14.5ಶೇ. 'ಕೊಬ್ಬು ತೆರಿಗೆ' ವಿಧಿಸಲಾಗಿದೆ. ಇವೆರಡು ಕ್ರಮಗಳಿಂದ ಅನುಕ್ರಮವಾಗಿ 60 ಕೋಟಿ ರೂ. ಮತ್ತು 10 ಕೋಟಿ ರೂ. ಸಂಗ್ರಹವಾಗುವ ನಿರೀಕ್ಷೆ ಇದೆ. ಇದಲ್ಲದೆ ಬೇರೆ ರಾಜ್ಯಗಳಿಂದ ಕೊಬ್ಬರಿ ಎಣ್ಣೆಯ ಹೆಸರಲ್ಲಿ ಬರುವ ಅಡುಗೆ ಎಣ್ಣೆಗಳ ಹರಿವನ್ನು ತಡೆಯಲು ಕೊಬ್ಬರಿ ಎಣ್ಣೆಯ ಮೇಲೆ 5ಶೇ. ತೆರಿಗೆ ವಿಧಿಸಲಾಗಿದೆ. ಇದರಿಂದ ಬರಬಹುದಾದ ಹೆಚ್ಚಿನ 150 ಕೋಟಿರೂ. ಆದಾಯವನ್ನು ರಾಜ್ಯದಲ್ಲಿ ತೆಂಗು ಖರೀದಿ ಬೆಲೆಯನ್ನು 25ರೂ.ನಿಂದ 27 ರೂ.ಗೆ ಏರಿಸಲು ಬಳಸಿಕೊಳ್ಳಲಾಗುವುದು ಎಂದು ಹಣಕಾಸು ಮಂತ್ರಿಗಳು ಹೇಳಿದರು.

ಈ ಬಜೆಟಿನ ಒಂದು ಅತ್ಯಂತ ಗಮನಾರ್ಹ ಸಂಗತಿಯೆಂದರೆ ಕೃಷಿ ಮತ್ತು ಉತ್ಪಾದನಾ ವಲಯದ ಆಧುನೀಕರಣಕ್ಕೆ ನೀಡಿರುವ ಒತ್ತು ಎಂದು ಇನ್ನೊಬ್ಬ ಪರಿಣಿತರು ವಿಶ್ಲೇಷಿಸಿದ್ದಾರೆ. ನವ-ಉದಾರವಾದಿ ಧೋರಣೆಗಳ ಅಡಿಯಲ್ಲಿ ನರಳುತ್ತಿರುವ ಸಣ್ಣ ಉತ್ಪಾದಕರು ಕಾಯುತ್ತಿದ್ದ ಮೂಲಭೂತ ಬದಲಾವಣೆಯನ್ನು ಈ ಬಜೆಟ್ ತರುವ ಪ್ರಯತ್ನ ಮಾಡಿದೆ ಎಂದು ಅವರು ಹೇಳುತ್ತಾರೆ.

ಇದನ್ನು ಅದು ಉತ್ಪಾದನಾ ಹೆಚ್ಚಳ, ಸಂಸ್ಕರಣ ಉದ್ದಿಮೆಗಳ ಸ್ಥಾಪನೆ ಮತ್ತು ಮಾರುಕಟ್ಟೆ ಜಾಲಗಳ ಬೆಳವಣಿಗೆಗೆ ಸಣ್ಣ ಉತ್ಪಾದಕರನ್ನು ವಿವಿಧ ಸಮೂಹಗಳು ಮತ್ತು ಸಹಕಾರಿಗಳ ಮೂಲಕ ಅಣಿನೆರೆಸುವ ದಾರಿಯಿಂದ ಸಾಧಿಸಲು ಪ್ರಯತ್ನಿಸಿದೆ. ಇದು ರೈತಾಪಿ ಜನಗಳು ಮತ್ತು ಗ್ರಾಮೀಣ ಕಾರ್ಮಿಕ ವರ್ಗವನ್ನು ಜರ್ಝರಿತಗೊಳಿಸಿರುವ ನವ–ಉದಾರವಾದಿ ಆರ್ಥಿಕ ಧೋರಣೆಗಳ ಮಾದರಿಗಿಂತ ಭಿನ್ನವಾದ ಪರ್ಯಾಯ ಅಭಿವೃದ್ಧಿ ದಾರಿಯಲ್ಲಿ ಬೆಂಬಲಿಸುವ ಮತ್ತು ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಸರಕಾರದ ಒಂದು ಅತ್ಯಂತ ಮೂಲಭೂತ ಕೊಡುಗೆ ಎಂದು ಹೇಳಲಾಗಿದೆ.

ಕಳೆದ ವರ್ಷ ಯುಡಿಎಫ್ ಸರಕಾರ ಕೃಷಿಗೆ ಮಾಡಿದ ಖರ್ಚು 307 ಕೋಟಿರೂ. ಈ ವರ್ಷ ಅದನ್ನು 600 ಕೋಟಿಗೆ ಏರಿಸಲಾಗಿದೆ. ○

ಪಂಚಾಯತು ಚುನಾವಣೆಗಳಿಗೆ ಶೈಕ್ಷಣಿಕ ಅರ್ಹತೆಯ ಶರತ್ತಿನ ಬಗ್ಗೆ ಮರುಪರಿಶೀಲಿಸಲು ರಾಜ್ಯ ಸರಕಾರಗಳಿಗೆ ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗದ ನೋಟೀಸು: ಎಐಡಿಡಬ್ಲ್ಯುಎ ಸ್ವಾಗತ

ಪಂಚಾಯತು ಚುನಾವಣೆಗಳಿಗೆ ಸ್ಪರ್ಧಿಸಲು ಕನಿಷ್ಟ ಶೈಕ್ಷಣಿಕ ಅರ್ಹತೆಗಳನ್ನು ವಿಧಿಸಿರುವ ಕ್ರಮವನ್ನು ಮರುಪರಿಶೀಲಿಸಬೇಕೆಂದು ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗ ರಾಜಸ್ಥಾನ ಮತ್ತು ಹರಿಯಾಣ ಸರಕಾರಗಳಿಗೆ ಸರಕಾರಗಳಿಗೆ ಹೇಳಿದೆ.

ಈ ಸರಕಾರಗಳು ವಿಧಿಸಿದ ಶರತ್ತುಗಳಿಂದಾಗಿ ಪಂಚಾಯತುಗಳ ಮುಖ್ಯಸ್ಥರಾಗಿ ಉತ್ತಮ ಕೆಲಸ ಮಾಡಿ ಶ್ಲಾಘನೆಗಳನ್ನು , ಮಾನ್ಯತೆಗಳನ್ನು ಪಡೆದಿದ್ದ ಹಲವರು ಈ ಬಾರಿ ಚುನಾವಣೆಗಳಲ್ಲಿ ಸ್ಪರ್ಧಿಸಲಾಗಿರಲಿಲ್ಲ. ಇವರಲ್ಲಿ ಹೆಚ್ಚಿನವರು ಬಡವಿಭಾಗಗಳಿಗೆ, ಮುಖ್ಯವಾಗಿ ಪರಿಶಿಷ್ಟ ಜಾತಿ/ಪಂಗಡಗಳಿಗೆ ಸೇರಿದವರು. ಅವರಿಗೆ ಶೈಕ್ಷಣಿಕ ಅರ್ಹತೆ ಇರದಿರುವುದಕ್ಕೆ ಅವರಿಗೆ ಅದ–ಕ್ಕೆ ಅವಕಾಶಗಳನ್ನು ಲಭ್ಯಗೊಳಿಸದ್ದೇ ಕಾರಣ ಎಂಬುದನ್ನು ಇಲ್ಲಿ ಗಮನಿಸಬೇಕು.

ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗ ಈ ಎರಡೂ ರಾಜ್ಯಗಳಿಗೆ ನೋಟೀಸು ಜಾರಿ ಮಾಡಿದೆ. ಇದರಲ್ಲಿ ಎರಡು ಅಂಶಗಳನ್ನು ಹೇಳಲಾಗಿದೆ. 1. ಪರಿಶಿಷ್ಟ ಜಾತಿಗಳ ಜನರ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಧೋರಣೆಯ ಬಗ್ಗೆ ನಿರ್ಧಾರಗಳನ್ನು ಕೈಗೊಳ್ಳುವ ಮೊದಲು ಈ ಸರಕಾರಗಳು ಆಯೋಗದೊಡನೆ ಸಮಾಲೋಚನೆ ನಡೆಸಬೇಕಿತ್ತು. ಅದನ್ನು ಅವು ಮಾಡಿಲ್ಲ. 2. ಈ ಸರಕಾರಗಳು ಪಂಚಾಯತೀ ರಾಜ್ಯ ಕಾನೂನಿಗೆ ಮಾಡಿರುವ ತಿದ್ದುಪಡಿಗಳು ಪರಿಶಿಷ್ಟ ಸಮುದಾಯದ ಹಲವರನ್ನು ಚುನಾಯಿತರಾಗುವ, ಸಾರ್ವಜನಿಕ ಪ್ರತಿನಿಧಿಗಳಾಗುವ ಹಕ್ಕಿನಿಂದ ಹೊರತು ಪಡಿಸಿವೆ.

ಈ ನೋಟೀಸನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಸ್ವಾಗತಿಸಿದೆ. ಈ ಸಂಘಟನೆ ಸುಪ್ರಿಂ ಕೋರ್ಟಿಗೆ ಸಲ್ಲಿಸಿದ ಅಂಶಗಳಲ್ಲಿ ಹಲವನ್ನು ಆಯೋಗ ಬಳಸಿಕೊಂಡಿದೆ ಎಂಬ ಸಂಗತಿಯ ಬಗ್ಗೆ ತೃಪ್ತಿ ವ್ಯಕ್ತಪಡಿಸಿರುವ ಜನವಾದಿ ಮಹಿಳಾ ಸಂಘಟನೆ ಈ ಎರಡೂ ಸರಕಾರಗಳು ಹಿಂತೆಗೆದುಕೊಳ್ಳಬೇಕು ತಮ್ಮ ಪ್ರತಿಗಾಮಿ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಪುನರುಚ್ಚರಿಸಿದೆ.

ಗುಜರಾತ: ದಲಿತರ ಮೇಲೆ 'ಗೋರಕ್ಷಕ'ರ ಹಲ್ಲೆ–ಡಿಎಸ್‌ಎಂಎಂ ಖಂಡನೆ

ಗುಜರಾತಿನ ಸೋಮನಾಥ ಜಿಲ್ಲೆಯ ಮೋಟ ಸಮಧಿಯಾಲ ಗ್ರಾಮದಲ್ಲಿ ಏಳು ದಲಿತರ ಮೇಲೆ ಭೀಕರ ಹಲ್ಲೆ ನಡೆಯಿತು. ಹಲ್ಲೆ ನಡೆಸಿದವರು 'ಗೋರಕ್ಷಕ 'ಪಡೆಯವರು. ಜುಲೈ 11ರಂದು ಅವರು ಕಬ್ಬಿಣದ ಸಲಾಕೆಗಳಿಂದ ಒಂದು ದಲಿತ ಕುಟುಂಬದ ಏಳು ಮಂದಿಯ ಮೇಲೆ ಹಲ್ಲೆ ನಡೆಸಿದರು.

46 ವರ್ಷದ ಬಾಲು ಸರ್ವೈಯ ಮತ್ತು ಆತನ ಮಗ 26 ವರ್ಷದ ವಶ್ರಂ ಹತ್ತಿರದ ಬೇದಿಯ ಹಳ್ಳಿಯಿಂದ ತಂದಿದ್ದ ಸತ್ತ ದನದ ಚರ್ಮ ಸುಲಿದು ತೆಗೆಯುತ್ತಿದ್ದಾಗ ಕೆಲವರು ಬಿಳಿ ಕಾರಿನಲ್ಲಿ ಬಂದು ಗೋಹತ್ಯೆ ಏಕೆ ಮಾಡುತ್ತಿದ್ದೀರಾ ಎಂದು ಬಡಿಯಲಾರಂಭಿಸಲಾರಂಭಿಸಿದರು. ನಾವು ಅದನ್ನು ಕೊಂದಿಲ್ಲ, ಸತ್ತ ದನದ ಚರ್ಮ ತೆಗೆಯುವ ನಮ್ಮ ಕೆಲಸ ಮಾಡುತ್ತಿದ್ದೇವೆ ಎಂದರೂ ಕೇಳದೆ ಕಬ್ಬಿಣದ ಸಲಾಕೆಗಳು ಮತ್ತು ಆ ಇಬ್ಬರು ಚರ್ಮ ತೆಗೆಯಲು ಬಳಸುತ್ತಿದ್ದ ಚಾಕುವಿನಿಂದ ಹಲ್ಲೆ ಮಾಡಿದರು ಎಂದು ಈ ಇಬ್ಬರು ಈಗ ಪೋಲಿಸರಿಗೆ ದೂರು ಸಲ್ಲಿಸಿದ್ದಾರೆ.

ಹೀಗೆ ಮಾಡಿದ ಎಲ್ಲರನ್ನು ಬಂಧಿಸಿ ಎಸ್/ಎಸ್‌ಟಿ ಅತ್ಯಾಚಾರಗಳ ತಡೆ ಕಾನೂನಿನ ಅಡಿಯಲ್ಲಿ ವಿಚಾರಣೆಗೆ ಒಳಪಡಿಸಬೇಕು ಎಂದು ದಲಿತ ಶೋಷಣ ಮುಕ್ತಿ ಮೋರ್ಚಾ(ಡಿಎಸ್‌ಎಂಎಂ) ಆಗ್ರಹಿಸಿದೆ, ರಾಜ್ಯ ಸರಕಾರ ಈ ಏಳು ಮಂದಿಗೆ ಪರಿಹಾರ ಕೊಡಬೇಕು, ಅವರೇ ವೈದ್ಯಕೀಯ ಚಿಕಿತ್ಸೆಯ ವೆಚ್ಚವನ್ನು ಭರಿಸಬೇಕು ಎಂದು ಅದು ಆಗ್ರಹಿಸಿದೆ. ಇತ್ತೀಚಿನ ಎರಡು ವರ್ಷಗಳಲ್ಲಿ ಇಂತಹ ಹಲ್ಲೆಗಳು ಹೆಚ್ಚುತ್ತಿವೆ, ಎಲ್ಲ ಪ್ರಗತಿಪರ ಶಕ್ತಿಗಳು, ವ್ಯಕ್ತಿಗಳು ಇದರ ವಿರುದ್ಧ ದನಿಯೆತ್ತಬೇಕು ಎಂದು ಡಿಎಸ್‌ಎಂಎಂ ಕರೆ ನೀಡಿದೆ.

ಒಡಿಶಾ: ಮಾವೋವಾದಿಗಳ ಬೇಟೆಯ ಹೆಸರಲ್ಲಿ ಬಡ ಆದಿವಾಸಿಗಳ ಬೇಟೆ

ಜುಲೈ 8 ರಂದು ಒಡಿಶಾದ ಕೊಂದಮಲ್ ಜಿಲ್ಲೆಯ ಗುಮುದಿಮಹದಲ್ಲಿ ಸಿಆರ್‌ಪಿಎಫ್ ಮತ್ತು ರಾಜ್ಯ ವಿಶೇಷ ಕಾರ್ಯಾಚರಣೆಗಳ ಗುಂಪು(ಎಸ್‌ಒಜಿ) ಮಾವೋವಾದಿಗಳ ವಿರುದ್ಧ ಎಂದು ನಡೆಸಿದ ಒಂದು ಕಾರ್ಯಾಚರಣೆಯಲ್ಲಿ ಒಂದು ಮಗುವೂ ಸೇರಿದಂತೆ ಆರು ಆದಿವಾಸಿ ಜನಗಳನ್ನು ಕೊಂದಿವೆ. ಇದರಲ್ಲಿ ಹಲವಾರು ಆದಿವಾಸಿಗಳು ಗಂಭೀರವಾಗಿ ಗಾಯಗೊಂಡಿದ್ದು ಅವರಿಗೆ ಸರಿಯಾದ ವೈದ್ಯಕೀಯ ನೆರವೂ ಸಿಗುತ್ತಿಲ್ಲ.

ಈ ಘಟನೆಯನ್ನು ಸಿಪಿಐ(ಎಂ) ಒಡಿಶಾ ರಾಜ್ಯಸಮಿತಿ ಬಲವಾಗಿ ಖಂಡಿಸಿದೆ. ಇದು ಮಾವೋವಾದಿಗಳ ವಿರುದ್ಧ ಕಾರ್ಯಾಚರಣೆಯ ಹೆಸರಲ್ಲಿ ನವೀನ್ ಪಟ್ನಾಯಕ್ ಸರಕಾರ ಅಮಾಯಕ ಆದಿವಾಸಿಗಳನ್ನು ಕೊಲ್ಲುತ್ತಿರುವ ಇತ್ತೀಚಿಗಿನ ಮೂರನೇ ಘಟನೆ. ಈ ಮೊದಲು ಇದೇ ಜಿಲ್ಲೆಯ ಕೊಟಗಡ ಪೋಲಿಸ್ ಠಾಣೆ–ಯ ಮಿತಿಯಲ್ಲಿ, ನಂತರ ಕಾಳಹಾಂಡಿ ಜಿಲ್ಲೆಯ ಕಲ್ಹಾಟ್ ಕಾಡುಗಳಲ್ಲಿ ಆದಿವಾಸಿಗಳ ಮೇಲೆ ದಾಳಿ ಮಾಡಲಾಗಿತ್ತು.

ಇಂತಹ ಘಟನೆಗಳ ನಂತರ ಹಣಕಾಸು ನೆರವಿನ ಘೋಷಣೆಗಳು ಆಗುತ್ತವೆ. ಆದರೆ ಇಂತಹ ಘಟನೆಗಳು ಮುಂದುವರೆಯುತ್ತಲೇ ಇರುತ್ತವೆ. ಒಡಿಶ ಸರಕಾರ ಇಂತಹ ಕೃತ್ಯಗಳಿಗೆ ಹೊಣೆಗಾರರಾದ ಭದ್ರತಾ ಸಿಬ್ಬಂದಿಯನ್ನು ಕೊಲೆ ಕೇಸಿನಲ್ಲಿ ವಿಚಾರಣೆಗೊಳಪಡಿಸಬೇಕು ಮತ್ತು ಇದಕ್ಕೆ ತುತ್ತಾದ ಪ್ರತಿ ಕುಟುಂಬಕ್ಕೆ 20ಲಕ್ಷ ರೂ.ಗಳ ಪರಿಹಾರವನ್ನು ಕೊಡಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಸಿಪಿಐ(ಎಂ) ನಿಯೋಗವೊಂದು ಬೆಹ್ರಾಂಪುರದ ಎಂಕೆಸಿಜಿ ಮೆಡಿಕಲ್ ಕಾಲೇಜ್ ಆಸ್ಪತ್ರೆಗೆ ಭೇಟಿ ನೀಡಿದಾಗ ಗಂಭೀರವಾಗಿ ಗಾಯಗೊಂಡ ಆದಿವಾಸಿಗಳನ್ನು ನೆಲದ ಮೇಲೆಯೇ ಮಲಗಿಸಿರುವುದು ಕಂಡು ಬಂತು. ಇದಕ್ಕೆ ನಿಯೋಗ ಬಲವಾದ ಆಕ್ಷೇಪವನ್ನು ವ್ಯಕ್ತಪಡಿಸಿತು.



ಮೌಢ್ಯಾಚರಣೆಗಳ ನಿರ್ಭಂಧಕ್ಕೆ ವಿಳಂಬವೇಕೆ...... ಪುಟ 3 ರಿಂದ

ಕಾಂಗ್ರೆಸ್ ಸರ್ಕಾರ 'ಮೌಢ್ಯತೆ ಆಚರಣೆಗಳ ಪ್ರತಿಬಂಧಕ ಕಾಯ್ದೆ'ಯನ್ನು ಅಂಗೀಕರಿಸಿತು. ಅಂತಹುದರ ಮಾದರಿಯಲ್ಲೇ ಕರ್ನಾಟಕದಲ್ಲಿಯೂ ಕಾಯ್ದೆಯನ್ನು ಜಾರಿಗೆ ತರುವ ಭರವಸೆಯನ್ನು ಪ್ರಗತಿಪರರಿಗೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ನೀಡಿ, ಚಾಲನೆಯನ್ನು ಕೊಟ್ಟರು. ಆದರೆ ಕಳೆದ ಮೂರು ವರ್ಷಗಳಲ್ಲಿಯೂ ಮಸೂದೆಯ ಕರಡು ಅಂಗೀಕರಿಸಲು ಇಂಚಿಂಚೂ ಹೋರಾಡಬೇಕಾದ ಸ್ಥಿತಿ ಇದೆ ಇರುವುದು ವಾಸ್ತವಕ್ಕೆ ಹಿಡಿದ ಕನ್ನಡಿ.

ಆಕ್ಷೇಪ –ಅನಗತ್ಯ ವಿಳಂಬಕ್ಕೆ ಕಾರಣವಾಗದಿರಲಿ

ಮೊನ್ನೆ ಬುಧವಾರ (2016ರ ಜುಲೈ 13) ದ ಸಚಿವ ಸಂಪುಟ ಸಭೆಯಲ್ಲಿ ಕರಡು ಮಸೂದೆಯೊಂದನ್ನು ಚರ್ಚೆಗಾಗಿ ಮಂಡಿಸಲಾಯಿತಾದರೂ ವಸ್ತು ಕೇಂದ್ರೀತವಾಗಿ ಚರ್ಚೆ ನಡೆಯಲಿಲ್ಲ. ಇದಕ್ಕೆ ಮೊದಲೇ ಕೆಲವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು ಪ್ರಕಟವಾಯಿತು. ಡಿ.ಕೆ. ಶಿವಕುಮಾರ್‌ರಂತಹವರು ಈ ಮಸೂದೆ ಅಂಗೀಕರಿಸಿದರೆ ಕೆಲ ಮಠಾದೀಶರು ಹುಯಿಲೆಬ್ಬಿಸಿ ಮುಂದೆ ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ಗೆಲ್ಲದಂತೆ ಮಾಡುವರೆಂಬ 'ಭೀತಿ' ವ್ಯಕ್ತ ಪಡಿಸಿದ್ದರು. ಹಾಗೇ ಕಾಗೋಡು ತಿಮ್ಮಪ್ಪ, ರಮೇಶಕುಮಾರ್‌ರಂತಹ ಹಿರಿಯ ಸಚಿವರೂ ಕೆಲ ಅಂಶಗಳಿಗೆ ಆಕ್ಷೇಪ ಎತ್ತಿದ್ದಾರೆಂದು ತಿಳಿದಿದೆ. ಹೀಗಾಗಿ ಅದನ್ನು ಪೂರ್ಣ ಪರಿಶೀಲಿಸಿ ಮರು ಮಂಡಿಸಲು ಮುಖ್ಯಮಂತ್ರಿಗಳು ಸೂಚಿಸಿದ್ದಾರೆ. ಅದಕ್ಕಾಗಿ ಕಾಗೋಡುರವರ ಅಧ್ಯಕ್ಷತೆಯಲ್ಲಿ ಒಂದು ಉಪಸಮಿತಿ ರಚನೆ ಮಾಡಿದ್ದಾರೆ. ಆದರೆ ಇದಕ್ಕೆ ಕಾಲಮಿತಿಯಿಲ್ಲ ಎಂಬುದು ಕಾಂಗ್ರೆಸ್‌ನ ವಿದ್ಯಮಾನ ಬಲ್ಲವರಿಗೆ ಆತಂಕ, ಅನುಮಾನಗಳನ್ನು ಹುಟ್ಟಿಸದೇ ಇಲ್ಲ.

ಹಾಲಿಯಾಗಿ ಸರ್ಕಾರದ ಮುಂದೆ ವಿಶ್ವವಿದ್ಯಾಲಯದ ಕಾನೂನು ಕಾಲೇಜ್‌ನ ತಜ್ಞರಿಂದ ಒಂದು ಕರುಡು ಮಸೂದೆ ಪ್ರತಿ ಇದೆ. ಮತ್ತೊಂದು ಮಹಾರಾಷ್ಟ್ರ ಸರ್ಕಾರ ಅಂಗೀಕರಿಸಿದ ಕಾಯ್ದೆ. ಕೇರಳ ಸರ್ಕಾರದ ಕರಡು ಮಸೂದೆ ಪ್ರತಿಗಳೂ ಅಲ್ಲಿವೆ. ವಿಶೇಷವಾಗಿ ಸುಪ್ರಿಂಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾದ ಶ್ರೀ ಶಿವರಾಜ ಪಾಟೀಲರ ನೇತೃತ್ವದ ಪ್ರಗತಿಪರರು ರೂಪಿಸಿದ 'ಕರ್ನಾಟಕ ಅಮಾನವೀಯ ಆಚರಣೆಗಳ ನಿಷೇಧಕ ಪ್ರತಿಬಂಧಕ ಮಸೂದೆ– 2016' ಕರಡು ಸಂಪುಟದ ಮುಂದಿದೆ. ಈ ಕರಡು ಮಸೂದೆ ರೂಪಿಸುವಾಗ ಅಪಾಯಕಾರಿ ಹಾಗೂ ಹಾನಿಕಾರಕ – ಹಾನಿಕಾರವಲ್ಲದ ನಿರಪಾಯಕಾರಿ ಆಚರಣೆಗಳು, ಧಾರ್ಮಿಕ ನಂಬಿಕೆಗಳು, ಮುಖ್ಯವಾಗಿ ಮಾನವ ಶೋಷಣೆಗೆ ಕಾರಣವಾಗುವ, ಮೌಢ್ಯ ಆಚರಣೆಗಳು, ಇವುಗಳ ಪರಿಣಾಮಗಳ ಬಗ್ಗೆ ಸೂಕ್ಷ್ಮತೆಗಳನ್ನು ಲಕ್ಷಿಸಿ, ಜನಹಿತವನ್ನು ಆಧಾರವಾರಿಸಿ, ಎಲ್ಲಾ ಅಂಶಗಳನ್ನೂ ವಿಸ್ತೃತವಾಗಿ ತಜ್ಞರಿಂದ, ಸಾಮಾಜಿಕ ಕ್ರಿಯಾಶೀಲರಿಂದ ಚರ್ಚಿಸಲ್ಪಟ್ಟು ಜಾಗೃತಿಯಿಂದ ರೂಪಿಸಲಾಗಿದೆ. ಸಮಚಿತ್ತ, ಸಮತೋಲನ ಹಾಗೂ ಪ್ರಾಯೋಗಿಕ ಅಂಶಗಳನ್ನು ಈ ಕರಡು ಮಸೂದೆ ಒಳಗೊಂಡಿದೆ.

ಬೇಕಿರುವುದು ಗೊಂದಲವಲ್ಲ

ಹೀಗಿರುವಾಗ ಸರ್ಕಾರದ ಮುಂದಿರುವ ಎಲ್ಲಾ ಕರಡುಗಳನ್ನು ಮತ್ತೊಮ್ಮೆ ಪರಿಶೀಲಿಸಿ, ಈಗ ಸಿದ್ಧಗೊಳಿಸಿಕೊಂಡ ಪ್ರಾಸ್ತಾಪಿತ ಮಸೂದೆಯ ಎಲ್ಲಾ ಅಂಶಗಳನ್ನು ಮಥಿಸಿ ಅಂಗೀಕಾರಕ್ಕೆ ಮಂಡಿಸಬೇಕಾದುದು ಅಗತ್ಯವಾಗಿದೆ. ಮಡೆಸ್ನಾನ, ಪಂಕ್ತೀಭೇಧದಂತಹ ಆಚರಣೆಗಳನ್ನು ಜುಲೈ 8 ರಂದು ಮಂಡಿಸಿದ ಕರಡಿನಲ್ಲಿ ಇಲ್ಲ ಎನ್ನಲಾಗುತ್ತಿದೆ. ಈಗ ತಿಳಿದಿರುವಂತೆ ಸರಕಾರದ ಮುಂದಿರುವ ಕರಡಿನಲ್ಲಿ ಕೊಂಡ ಹಾಯುವ ಆಚರಣೆಯನ್ನು ನಿಷೇಧಿಸುವ ಪ್ರಸ್ತಾಪವಿದೆ. ಅಲ್ಲದೇ ಜಲ ಸಂಪನ್ಮೂಲಗಳನ್ನು ಪತ್ತೆ ಮಾಡಲು ವಾಸ್ತು ತಜ್ಞರೆನಿಸಿಕೊಂಡವರ ಮತ್ತು ಜೋತಿಷಿಗಳ ಸಲಹೆ ಪಡೆಯಬಹುದು ಎಂಬ ಅಂಶವೂ ನುಸುಳಿದೆ. ಈ ಅಂಶಗಳನ್ನು ಬಹಳ ಎಚ್ಚರಿಕೆಯಿಂದ ಪರಿಶೀಲಿಸಬೇಕು. ಕೊಂಡ ಹಾಯುವ ಆಚರಣೆ ಅನಾದಿ ಕಾಲದ ಆಚರಣೆಯಾಗಿದ್ದು ಅಗ್ನಿ ಸಂಸ್ಕೃತಿಯ ಯಜಮಾನಿಕೆಗೆ ವಿರೋಧವಾಗಿ, ಜಲ ಸಂಸ್ಕೃತಿಯ ಭಾಗವಾಗಿ ರೂಢಿಯಲ್ಲಿರುವುದಾಗಿದೆ. ಅದು ಅವೈಧಿಕ ಆಚರಣೆಯಾಗಿದೆ. ಇದು ಭಾರತದ ಉದ್ದಗಲಕ್ಕೂ ಜನ ಸಾಮಾನ್ಯರಲ್ಲಿ ಚಾಲ್ತಿಯಲ್ಲಿರುವುದಾಗಿದೆ. ಇಂತಹದ್ದನ್ನು ನಿಷೇಧಿಸಬೇಕಿಲ್ಲ. ಹಾಗೆ ಜಲಸಂಪನ್ಮೂಲಗಳ ಶೋಧನೆಗೆ ವಾಸ್ತು ಪಂಡಿತರು, ಜೋತಿಷಿಗಳನ್ನು ಆಧರಿಸಬಹುದು ಎಂಬ ರಿಯಾಯಿತಿ ಅಂತಿಮವಾಗಿ ಮೌಢ್ಯತೆಯನ್ನೇ ನಂಬಿ ಪಾಲಿಸಲು ಅನುಮತಿ ಮಾತ್ರವಲ್ಲ, ಅಂತಹ 'ಪರಿಣಿತರ' ಸುಲಿಗೆಗೂ ಅಧಿಕೃತ ಅವಕಾಶ ನೀಡುತ್ತದೆ. ಇಂದು ನೀರಿನ ಮೂಲಗಳನ್ನು ಅರಿಯಲು ಪಾರಂಪರಿಕವಾದ, ವೈಜ್ಞಾನಿಕವಾದ ಜ್ಞಾನ ಇದೆ, ಪರಿಕರಗಳೂ ಇವೆ. ನಮ್ಮ ಕೃಷಿಕರು ಭೂ ಪ್ರದೇಶ, ಅಲ್ಲಿಯ ವಾತಾವರಣವನ್ನು ಅವಲೋಕಿಸಿ ಜಲ ಮೂಲಗಳನ್ನು ಗುರುತಿಸುವ ಪಾರಂಪರಿಕ ಜ್ಞಾನ ಹೊಂದಿದ್ದಾರೆ. ಈಗಿರುವ ಮಸೂದೆಯ ಆ ಅಂಶವನ್ನು ತೆಗೆಯುವುದು ಅಗತ್ಯ. ಇಲ್ಲಿ ಪ್ರಶ್ನೆ ಏಳುವುದೇನೆಂದರೆ ಇಂತಹ ಅಂಶಗಳುಳ್ಳ ಕರಡನ್ನು ಯಾರು ತಯಾರಿಸಿ ನೀಡದರು? ಅವರ ಹಿನ್ನೆಲೆ, ಹಿತಾಸಕ್ತಿ ಏನು ಎಂಬುದು. ಬೇಕೆಂದೇ ಅನುಮಾನಗಳು, ಅಡ್ಡಿಗಳು ಬರಬೇಕೆಂಬ ಉದ್ದೇಶ ಅವರಿಗಿದೆಯೇ? ಹಾಗಾದರೆ ಸರಕಾರ ಅಂತಹವರಿಗೆ ಯಾಕೆ ವಹಿಸಬೇಕಿತ್ತು? ಆ ಕರಡಿಗೆ ನೀಡಿರುವ ಹೆಸರೂ ಕೂಡ ಅತ್ಯಂತ ಗೊಂದಲ ಹುಟ್ಟಿಸುವಂತಿದೆ. ಸರಕಾರ ಚರ್ಚೆಗೆ ಎತ್ತಿಕೊಂಡ ಆ ಕರಡನ್ನಾಗಲೀ, ಮುಂದಿರುವ ಕರಡುಗಳನ್ನಾಗಲೀ ನಮ್ಮ ಮಂತ್ರಿ ಮಹೋದಯರು ಮನಃಪೂರ್ವಕವಾಗಿ ಅಧ್ಯಯನ ಮಾಡಿರುವರೇ?

ಹಾದಿ ತಪ್ಪದಿರಲಿ

ಮಡೆಸ್ನಾನ, ಪಂಕ್ತಿಭೇಧದಂತಹ ಅಮಾನವೀಯವಾದ, ಮಾನವನ ಘನತೆಗೆ ಧಕ್ಕೆ ತರುವ, ಅಸಂವಿಧಾನಾತ್ಮಕ ಆಚರಣೆಗಳಾಗಿದ್ದು, ಅವನ್ನೂ ನಿರ್ಭಧಿಸುವ ಅಂಶವನ್ನು ಒಳಗೊಳ್ಳುವುದು ಅಗತ್ಯ. ಇಂತಹುದಕ್ಕೆ ತಾತ್ವಿಕ, ಬದ್ಧತೆಯೂ ಬೇಕು. ಇಲ್ಲವಾದಲ್ಲಿ ಎಲ್ಲಾ ರೀತಿಯ ಯಥಾಸ್ಥಿತಿವಾದಿಗಳು, ಪ್ರತಿಗಾಮಿಗಳು ವಿವಿಧ ಒತ್ತಡ ಹಾಗೂ ಜನರನ್ನು ಹಾದಿ ತಪ್ಪಿಸುವ ಕುತಂತ್ರಗಳು ಮೇಲುಗೈ ಪಡೆಯುತ್ತವೆ. ಆದ್ದರಿಂದ ರಾಜ್ಯ ಸರ್ಕಾರ, ಸಿದ್ದರಾಮಯ್ಯನವರು ಮತ್ತು ಮಂತ್ರಿಮಂಡಲ ಕೇವಲ ಓಟಿನ ಲೆಕ್ಕಾಚಾರದಲ್ಲಿಯೇ ನಿರ್ಧರಿಸದೇ ನಿಷ್ಠುರ ನಿಲುವಿನಿಂದ ಸಮಾಜದ ಬೆಳವಣಿಗೆ, ಮಾನವನ ಘನತೆಯನ್ನು ಎತ್ತಿ ಹಿಡಿದು, ಮುಗ್ಧ ಭಕ್ತರೂ, ಜನ ಸಾಮಾನ್ಯರೆಲ್ಲರನ್ನೂ ರಕ್ಷಿಸುವ ಸಂವಿಧಾನಬದ್ಧ ಕರ್ತವ್ಯ ನಿರ್ವಹಿಸಬೇಕು. ಇಂತಹ ಮಸೂದೆ ಜಾರಿಗೊಳಿಸಿದರೆ ಕಾಂಗ್ರೆಸ್ ಸೋಲುವುದು ಎಂಬುದು ಸಕಾರಣವೇ ಅಲ್ಲ. ಕಾಂಗ್ರೆಸ್ ಸೋಲುವುದಿದ್ದರೆ ಅದು ತನ್ನ ಜನವಿರೋಧಿ ನೀತಿಗಳಿಂದ, ದುರಾಡಳಿತ, ಭ್ರಷ್ಟತೆ, ಜನಪೀಡಕ ಪ್ರವೃತ್ತಿಗಳಿಂದ. ಇವನ್ನು ಬಿಡದೇ ಕೇವಲ ಮೌಢ್ಯಗಳ ಪ್ರತಿಬಂಧಕ ಕಾಯ್ದೆ ಕಾರಣವಾಗುವುದು ಎಂಬುದು ಅಧಿಕಾರದಾಹಿಗಳ ವಂಚಕತನದ ಮಾತೇ ಸರಿ.

ಸಾರ್ವಜನಿಕರ ಮುಂದೆ ತರಲಿ

ಈ ಮಸೂದೆ ಜಾರಿಗೆ ತರಲು ಮುಖ್ಯಮಂತ್ರಿಗಳು, ಸಂಪುಟದಲ್ಲಿ ಮಹದೇವಪ್ಪ, ಆಂಜನೇಯ, ಜಯಚಂದ್ರರವರು ಧೃಡವಾಗಿರುವುದಾಗಿ ವರದಿಯಾಗಿದೆ. ಡಿಕೆಶಿಯವರಿಗೆ ಅಧಿಕಾರದ ಕನಸು ಬಿಟ್ಟರೆ ಸಮಾಜದ ದೀರ್ಘ ಹಿತ ಚಿಂತನೆ ಕಾಡದು. ಉಳಿದಂತೆ ಕಾಗೋಡು ಮತ್ತು ರಮೇಶ್‌ಕುಮಾರವರು ಇನ್ನಷ್ಟೂ ಆಳವಾಗಿ ಚಿಂತಿಸುವುದು ಅಗತ್ಯ. ಕಾಯ್ದೆ ತರಬೇಕೆನ್ನುವಾಗ ಮಹಾರಾಷ್ಟ್ರದ ಮಾದರಿಯನ್ನು ಅನುಸರಿಸುವ ಮಾತುಗಳೂ ಕೇಳುತ್ತಿವೆ. ಆ ಕಾಯ್ದೆಯೂ ಹಲವು ಸೀಮಿತ ವ್ಯಾಪ್ತಿಯನ್ನು ಹೊಂದಿದೆ. ಹೀಗಾಗಿ ಕರ್ನಾಟಕದಲ್ಲಿ ರೂಪಿಸುವುದು ಕಾಯ್ದೆ ವಿಶಿಷ್ಟವೂ, ವಿಶಾಲವೂ ಆಗುವ ಸಾಧ್ಯತೆಗಳಿವೆ. ಅದರತ್ತ ನಮ್ಮದೇ ಮಸೂದೆ ರಚನೆಗೆ ಸರಕಾರ ಮುಂದಾಗಬೇಕು. ಹಾಗೆಯೇ ಈ ಉದ್ದೇಶಿತ ಮಸೂದೆ ಹೇಗಿದೆ ಎಂಬುದು ಸಾರ್ವಜನಿಕರಿಗೆ ತಿಳಿದಿಲ್ಲ. ಇಂತಹ ಮಹತ್ವದ ವಿಷಯವನ್ನು ಕೇವಲ ಸಂಪುಟದ ವಿಷಯವಾಗಿ ಗುಪ್ತವಾಗಿಡುವ ಅಗತ್ಯವೇ ಇಲ್ಲ. ಆ ಕರಡನ್ನು ಬಹಿರಂಗವಾಗಿ ಪ್ರಕಟಿಸಿ ಸಾರ್ವಜನಿಕರ ಚರ್ಚೆಗೆ ಇಡಬೇಕು. ಅಲ್ಲಿನ ಸಲಹೆ, ಸೂಚನೆಗಳನ್ನು ಪರಿಶೀಲಿಸಿ ಗಣಿಸಬೇಕು. ಇದರತ್ತ ಮುಕ್ತ ಚರ್ಚೆಯಾಗಿ ನಾಡಿನ ಜನರ ಹಿತ ರಕ್ಷಿಸುವ ಕಾಯ್ದೆ ಬರಲಿ, ಶೋಷಣೆ ತಪ್ಪಲಿ ಎನ್ನುತ್ತಾರೆ ಈ ಆಂದೋಲನದಲ್ಲಿ ಪೂರ್ಣವಾಗಿ ತೊಡಗಿಸಿಕೊಂಡಿರುವ ನಿಡುಮಾಮಿಡಿ ಶ್ರೀಗಳು.



ಕೃಪೆ : ಪಿ. ಮಹಮ್ಮದ್, ವಿಜಯ ಕರ್ನಾಟಕ

ಸಾರ್ವಜನಿಕ ಒತ್ತಡದ ಅಗತ್ಯ

ನಿಜ, ಇಂದು ಕಾಂಗ್ರೆಸ್, ಬಿಜೆಪಿ, ಜೆ.ಡಿಎಸ್ ನಂತಹ ಪಕ್ಷಗಳಲ್ಲಿ ಬಹಳಷ್ಟು ಜನ ಮೌಢ್ಯತೆ ಆಚರಣೆಗಳನ್ನೇ ಅಳವಡಿಸಿಕೊಂಡ, ಪ್ರತಿ ನಡೆ ನುಡಿಗೂ ಜೋತಿಷಿಗಳ ಮುಂದೆ ಮಂಡಿಯೂರುವ ನಾಯಕರೇ ಹೆಚ್ಚು. ತಮ್ಮ ವೈಫಲ್ಯಗಳನ್ನು, ಜನಾದೇಶವನ್ನು ಅದೃಷ್ಟದ ಮೇಲೆ ಹಾಕಿ ಬಿಡಬಹುದಲ್ಲಾ! ಹಾಗಾಗಿಯೇ ಅವರೆಲ್ಲಾ ಮೌಢ್ಯತೆ ಬಲಿಯಬೇಕು ಎಂದೇ ಬಯಸುತ್ತಾರೆ. ಇವರೆಲ್ಲ ಕೊಳತು ನಾರುವ ಪಾಳೇಗಾರಿ ಅಂಶಗಳಿಗೆ ಜೋತು ಬಿದ್ದವರು. ಮಸೂದೆ ತಂದರೆ ಸೋಲಬಹುದು ಎಂಬ ಭವಿಷ್ಯವನ್ನೂ ಡಿಕೆಶಿ ಯಂತಹ ಪಾಳೇಗಾರಿ ಪಳಿಯುಳಿಕೆಗಳಿಗೆ ಜೋತಿಷಿಗಳೇ ಹೇಳಿರಬೇಕು! ಆದ್ದರಿಂದ ಇಂತಹವರಿಗೆ ಮಸೂದೆ ತರದೇ ಇದ್ದರೆ ಸೋಲುವುದು ಖಚಿತ ಎಂಬ ಸಂದೇಶವನ್ನು ಜನತೆ ರವಾನಿಸಬೇಕು. ಅಂದರೆ ಪ್ರಗತಿಪರ ಅಂಶಗಳ ಮಸೂದೆ ಶೀಘ್ರದಲ್ಲೇ ಮಂಡಿಸಿ, ಅಂಗೀಕರಿಸಲು ರಾಜ್ಯದಲ್ಲಿ ಜನರ ಆಂದೋಲನ ವಿಸ್ತೃತವಾಗಿ ಪುಟಿದೇಳಬೇಕು. ●

ಅಂಗನವಾಡಿ ನೌಕರರ ಅಖಿಲ ಭಾರತ ಕರಾಳ ದಿನಾಚರಣೆ.......... ಪುಟ 16 ರಿಂದ

ನಡೆಸಬಾರದು ಎಂದು ಆಗ್ರಹಿಸಲಾಯಿತು.

ವಯಸ್ಸನ್ನು ನಿಗದಿ ಮಾಡದೇ ಸೇವಾ ಜೇಷ್ಠತೆಯ ಆಧಾರದ ಮೇಲೆ ಪರಿಗಣಿಸಿ, ಸಹಾಯಕಿಯರು ಕಾರ್ಯಕರ್ತೆಯಾಗಿ ಬಡ್ತಿಗೆ ಇರುವ ನಿಯಮಗಳನ್ನು ಸಡಿಲಿಸಬೇಕು, ನೌಕರರಿಗೆ ಪ್ರಮುಖ ಶಸ್ತ್ರ ಚಿಕಿತ್ಸೆಗಳಾಗುವಾಗ ಒಂದು ಲಕ್ಷ ಹಣ ಹಾಗೂ ವೇತನ ಸಹಿತ ರಜೆ ಕೊಡಬೇಕು, ನಿವೃತ್ತರಾದ–ಮೃತರಾದ ನೌಕರರ ಮಕ್ಕಳಿಗೆ ಅನುಕಂಪದ ಆಧಾರದಲ್ಲಿ ಕೆಲಸ ಕೊಡಬೇಕು, ನೌಕರರಿಗೆ ಸೇವಾ ನಿಯಮಾವಳಿಗಳನ್ನು ರೂಪಿಸಬೇಕೆಂದು, ಇದಕ್ಕಾಗಿ ಕೂಡಲೇ ಸರ್ಕಾರಿ ಆದೇಶ ನೀಡಬೇಕೆಂದು ಆಗ್ರಹಿಸಿದರು.

ರಾಜ್ಯದ 25 ಜಿಲ್ಲೆಗಳಲ್ಲಿ ಹಾಗೂ 125ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ಸುಮಾರು 38 ಸಾವಿರಕ್ಕೂ ಹೆಚ್ಚಿನ ಕಾರ್ಯಕರ್ತೆಯರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಸುಮಾರು 110 ಕಡೆ ಭೂತ ದಹನ ಮಾಡಲಾಗಿದೆ ಮತ್ತು ಪ್ರತಿಭಟನೆ ನಡೆದ ಎಲ್ಲಾ ಕಡೆಗಳಿಂದಗೂ ಸರಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ಪ್ರತಿಭಟನೆಯ ನೇತೃತ್ವವನ್ನು ಕಲಬುರಗಿ ಜಿಲ್ಲೆಯಲ್ಲಿ ರಾಜ್ಯ ಅಧ್ಯಕ್ಷರಾದ ಶಾಂತ ಘಂಟೆ, ಗೌರಮ್ಮ ಪಾಟೀಲ್, ಮೈಸೂರು – ರಾಜ್ಯ ಪ್ರಧಾನ ಕಾರ್ಯದರ್ಶಿ ಸುನಂದಾ, ಪುಷ್ಪ, ಕಾವೇರಮ್ಮ ವಿಜಯಪುರ: ಭಾರತಿ ವಾಲಿ, ಭೀಮಸಿ ಕಲಾದಗಿ, ಸುರೇಖಾ ರಜಪೂತ, ಸುನಂದಾ ನಾಯಕ, ಸುವರ್ಣ ಹಲಗಣಿ, ಲಕ್ಷ್ಮಣ ಹಂದ್ರಾಳ, ಮಳಸಿದ್ದ ನಾಯಕ, ಮಲ್ಲಪ್ಪ ಬಗಲಿ, ಜಯಶ್ರೀ ಪೂಜಾರಿ, ಶೈಲಾ ಕಟ್ಟಿ, ಮಾಲಾ ಜಾಧವ, ಎಸ್.ಎನ್. ಜಮಾದಾರ, ಕಮಲಾ ಕಾರ್ಕೂನ, ಶಕುಂತಲಾ ನಾಯಕ, ಸುನಂತಾ ಅವಟಿ, ಗೀತಾ ಬನಪಟ್ಟಿ, ಯಾದಗಿರಿ: ಸುರೇಖ, ಬೀದರ್ – ಶ್ರೀದೇವಿ ಚೂಡೆ, ಉತ್ತರ ಕನ್ನಡ – ಯಮುನಾ ಗಾಂವ್ಕರ್, ಬಳ್ಳಾರಿ – ಕೆ.ನಾಗರತ್ನ, ಶಕುಂತಲಾ, ಈರಮ್ಮ, ಕೋಲಾರ – ಮುನಿರಾಜಮ್ಮ, ಚಿಕ್ಕಬಳ್ಳಾಪುರ – ಲಕ್ಷ್ಮೀ ದೇವಮ್ಮ, ತುಮಕೂರು – ಸೈಯದ್ ಮುಜೀಬ್, ಗಂಗಮ್ಮ ಎ., ಗುಲ್ಬರ್, ಕಮಲಾ, ಗೌರಮ್ಮ, ರಾಮಚಂದ್ರು, ರಾಘವೇಂದ್ರ, ವಿದ್ಯಾಪ್ರಭ, ಪ್ರೇಮ, ಜಬೀನಾ, ಅನ್ನಪೂರ್ಣ, ಗೌರಮ್ಮ ಸಿದ್ದಗಂಗಮ್ಮ, ಶಂಕುತಲಾ, ಶೋಭಾ, ಪಾರ್ವತಮ್ಮ, ಮೆಹತಾಜ್, ಮಂಜುಳ, ಮುತ್ತುರಾಜ್, ಕುಮಾರ್ ಹಾಸನ – ರಾಘವೇಂದ್ರ, ಮಂಜಮ್ಮ, ರಾಯಚೂರು – ಪದ್ಮ, ವರಲಕ್ಷ್ಮಿ, ಕೊಪ್ಪಳ – ಶಿವಮ್ಮ, ಕಲಾವತಿ, ಬಾಗಲಕೋಟೆ – ದಾಸರ್, ಪೂಜಾರ್, ಬೆಳಗಾವಿ – ದೊಡ್ಡವ್ವ ಪೂಜಾರ್, ಗೈಬು ಜೈನ್‌ಖಾನ್, ಮಂಡ್ಯ – ಜಯಲಕ್ಷ್ಮಿ, ಮಂಜುಳಾರಾಜ್, ದಕ್ಷಿಣ ಕನ್ನಡ – ಬಿ.ಎಂ.ಭಟ್, ರವಿಕಲಾ, ಉಡುಪಿ – ಸುಶೀಲ ನಾಡ, ಗೀತಾ ಶೆಟ್ಟಿ, ಬೆಂಗಳೂರು – ಟಿ.ಲೀಲಾವತಿ, ನಳಿನಾಕ್ಷಿ, ಶಾಂತಮ್ಮ, ಇಂದ್ರಾಣಿ, ಚಾಮರಾಜನಗರ – ಸುಜಾತ, ಪಾರ್ವತಮ್ಮ, ಜೆ.ಸುರೇಶ್, ಗದಗ – ದುಂಡವ್ವ, ಮಾರುತಿ ಚಿಟಗಿ, ಎಮ್.ಸಿ.ಸಿದ್ದಿಪಾಟೀಲ, ಶಿವಾನಂದ ಬೋಸ್ಲೆ, ಸಾವಿತ್ರಿ ಸಬನಿಸ್, ಗಿರಿಜಾ ಮಮ್ಮಿಗಟ್ಟಿ, ಗಿ.ವಿ.ಹೂಗಾರ, ವಿಜಯಾ ಪಾಟೀಲ, ಅಕ್ಕಮ್ಮ ನರೇಗಲ್, ಪಾರ್ವತಿ ಬಿನ್ನಾಳ, ಸುಮಂಗಲಾ ಗಿಡ್ಡಮಲ್ಲಣ್ಣವರ, ಡಿ.ಎಚ್. ರಡ್ಡೇರ, ಕವಿತಾ ಬಡಿಗೇರ, ಎಸ್.ಎಂ.ಕೋಳಿವಾಡ, ಶಿವಮೊಗ್ಗ – ಶಶಿಕಲಾ, ನಾರಾಯಣ್, ಕೊಡಗು – ಭಾಗೀರಥಿ, ಸುಮಿತ್ರಾ, ರಮೇಶ್ ಮತ್ತಿತರ ಮುಖಂಡರ ನೇತೃತ್ವದಲ್ಲಿ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಅಂಗನವಾಡಿ ಕಾರ್ಯಕರ್ತರು ಪ್ರತಿಭಟನಾ ಪ್ರದರ್ಶನ ನಡೆಸಿದರು. ●

JANASHAKTHI KANNADA VARA PATRIKE JULY 24, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026
RNI No. KARKAN /2006/17926 Posted on every Satuarday
Licensed to Post without prepayment License No. WPP-283

ಅಂಗನವಾಡಿ ನೌಕರರ ಅಖಿಲ ಭಾರತ 'ಕರಾಳ ದಿನಾಚರಣೆ'

ಕರ್ನಾಟಕದಲ್ಲಿ 25 ಜಿಲ್ಲೆಗಳಲ್ಲಿ 38 ಸಾವಿರ ನೌಕರರ ಪ್ರತಿಭಟನೆ





ಅಂಗನವಾಡಿ ನೌಕರರನ್ನು ಕಾರ್ಮಿಕರೆಂದು ಪರಿಗಣಿಸಬೇಕು, ಕನಿಷ್ಟ ವೇತನವನ್ನು ಮತ್ತು ಪೆನ್ಷನ್ ಸೌಲಭ್ಯ ಕೊಡಬೇಕು ಎಂಬ ಬೇಡಿಕೆಗಳನ್ನು ಕಿವಿಗೆ ಹಾಕಿಕೊಳ್ಳದ ಕೇಂದ್ರ ಸರ್ಕಾರದ ಧೋರಣೆಯ ವಿರುದ್ಧ ದೇಶ್ಯಾದ್ಯಂತ 24 ರಾಜ್ಯಗಳಲ್ಲಿ 6 ಲಕ್ಷಕ್ಕೂ ಹೆಚ್ಚು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಜುಲೈ 11ರಂದು ಕರಾಳ ದಿನವನ್ನು ಆಚರಿಸಿದರು.

ಈ ಪ್ರತಿಭಟನೆಯ ಇತರೆ ಬೇಡಿಕೆಗಳೆಂದರೆ ಅಂಗನವಾಡಿ ಕೇಂದ್ರಗಳನ್ನು ಶಿಶುಪಾಲನಾ ಕೇಂದ್ರ **(Day Care Center)**ಗಳನ್ನಾಗಿ ಪರಿವರ್ತಿಸಬೇಕು. ಐಸಿಡಿಎಸ್‌ನ್ನು ಪ್ರತ್ಯೇಕ ನಿರ್ದೇಶನಾಲಯವನ್ನಾಗಿ ಮಾಡಬೇಕು, ICDS ಯೋಜನೆಯನ್ನು ಖಾಯಂ ಮಾಡಬೇಕು ಮತ್ತು ಇತರೆ ಬೇಡಿಕೆಗಳ ಮೇಲೆ ದೇಶವ್ಯಾಪಿ ಪ್ರತಿಭಟನೆ ನಡೆದಿದೆ. ಹಲವು ವರ್ಷಗಳಿಂದ ಅಂಗನವಾಡಿ ನೌಕರರು ಹೋರಾಟ ನಡೆಸುತ್ತಿದ್ದಾರೆ. ಆದರೆ ಉದಾರೀಕರಣದ ನೀತಿಗಳ ಭಾಗವಾಗಿ ಈ ಯೋಜನೆಯನ್ನು ಪುನರ್‌ರಚಿಸುವ ಮತ್ತು ಬಲಪಡಿಸುವ ಹೆಸರಿನಲ್ಲಿ ಮಿಷನ್ ಮೋಡಾಗಿ ಪರಿವರ್ತಿಸಲಾಗುತ್ತಿದೆ. ಇದನ್ನು ಅಂಗನವಾಡಿ ನೌಕರರು ಬಲವಾಗಿ ವಿರೋಧಿಸಿದ್ದಾರೆ.



ಕರ್ನಾಟಕ ರಾಜ್ಯ ಸರಕಾರ ಬೇರೆ ರಾಜ್ಯಗಳಲ್ಲಿ ಇದನ್ನು ಜಾರಿ ಮಾಡದಿದ್ದರೂ ನಮ್ಮ ರಾಜ್ಯದಲ್ಲಿ ಮಿಷನ್ ಮೋಡನ್ನು ಜಾರಿ ಮಾಡಲು ಹೊರಟಿದೆ. 'ಕರ್ನಾಟಕ ರಾಜ್ಯ ಮಕ್ಕಳ ಅಭಿವೃದ್ಧಿ ಸಂಸ್ಥೆ' ಎಂದು ನೊಂದಾವಣಿ ಮಾಡಿಸಿ, ಇದರಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಸಹಾಯವನ್ನು ತೆಗೆದುಕೊಳ್ಳಲು ತೀರ್ಮಾನಿಸಿದೆ. ಮಿಷನ್ ಮೋಡ್ ಎಂದರೆ ಒಂದು ನಿರ್ದಿಷ್ಟ ಗುರಿಯಿರುವ ಕಾರ್ಯಕ್ರಮ. ಆ ಗುರಿಯನ್ನು ಸಾಧಿಸಿದ ನಂತರ ಈ ಯೋಜನೆಯ ಪರಿಸ್ಥಿತಿ ಏನು ಎಂಬುದರ ಬಗ್ಗೆ ಚರ್ಚೆಯಿಲ್ಲ.

ಕೇಂದ್ರ ಸರ್ಕಾರದ ಐಸಿಡಿಎಸ್ ಮಿಷನ್ ಮೋಡ್‌ನಲ್ಲಿ ಯೋಜನೆಗಾಗಿರುವ ಎಪಿಐಪಿ (Annual Programme Implimentation Plan)ನ್ನು ಪ್ರತ್ಯೇಕ ಸೊಸೈಟಿ, ಎನ್.ಜಿ.ಓ. ಗಳ ಪಾಲ್ಗೊಳ್ಳುವಿಕೆ ಅಂಗನವಾಡಿ ಕೇಂದ್ರಗಳಲ್ಲಿ ಪೌಷ್ಠಿಕತೆಯ ಬಗ್ಗೆ ಉಚಿತ ಸಲಹೆ, ಆಹಾರದ ವಸ್ತುಗಳ ಬದಲಿಗೆ ನಗದು ವರ್ಗಾವಣೆ, ಪೂರ್ವ ಪ್ರಾಥಮಿಕ ಶಿಕ್ಷಣದ ಭಾಗವಾಗಿ ಖಾಸಗಿ ಕಾನ್ವೆಂಟ್‌ಗಳಿಗೆ ಹಣ ವರ್ಗಾವಣೆಯಂತಹ ಶಿಫಾರಸ್ಸುಗಳಿವೆ.

ಸಂಖ್ಯೆ: ಮಮಇ/ಐಸಿಡಿ/ಕೆಡಿಪಿ/14/2015–16ರ ಕರ್ನಾಟಕ ಸರ್ಕಾರದ ನಡಾವಳಿಗಳು ಹಾಗೂ 15–16ನೇ ಸಾಲಿನ ವಾರ್ಷಿಕ ಯೋಜನೆ ಈ ಪ್ರಸ್ತಾಪಗಳು ICDS ಯೋಜನೆಗೆ ಪೂರಕವಲ್ಲ, ಆದ್ದರಿಂದ ಈ ಪ್ರಸ್ತಾವನೆಗಳು ಸರ್ಕಾರ ಹಿಂದಕ್ಕೆ ಪಡೆಯಬೇಕು ಎಂದು ಕರ್ನಾಟಕದಾದ್ಯಂತ ಜೂನ11ರಂದು ನಡೆದ 'ಕರಾಳ ದಿನಾಚರಣೆ'ಯ ಸಮದರ್ಭದಲ್ಲಿ ಪ್ರತಿಭಟನಾಕಾರರು ಆಗ್ರಹಿಸಿದರು.

2016 ಫೆಬ್ರವರಿ 15 ರಂದು ದೇಶದ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಹಣಕಾಸು ಸಚಿವರಾದ ಅರುಣ್ ಜೇಟ್ಲಿರವರ ಬಳಿ ಮಾರ್ಚ್ 10 ರಂದು ಇಲಾಖಾ ಸಚಿವರಾದ ಶ್ರೀಮತಿ ಮೇನಕಾ ಗಾಂಧಿಯವರ ಬಳಿ ಹಾಗೂ ರಾಜ್ಯದಲ್ಲಿ ಹಲವು ಬಾರಿ ಇಲಾಖಾ ಕಾರ್ಯದರ್ಶಿಗಳು, ನಿರ್ದೇಶಕರು ಬಳಿ ಹಾಗೂ ಮೇ 4 ರಂದು ಇಲಾಖಾ ರಾಜ್ಯ ಸಚಿವರಾದ ಶ್ರೀಮತಿ ಉಮಾಶ್ರೀಯವರ ಬಳಿ ಸಂಘಟನೆಯ ನಿಯೋಗ ಚರ್ಚಿಸಿದೆ. ಆದರೂ ಕೂಡಾ ಸರ್ಕಾರ ಬೇಡಿಕೆಗಳನ್ನು ಈಡೇರಿಸುವ ಬದಲಿಗೆ ಯೋಜನೆಯನ್ನು ಮತ್ತಷ್ಟು ಉದಾರೀಕರಿಸುತ್ತದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ಲೀಟರ್ ಪೆಟ್ರೋಲ್ ಬೆಲೆ 16.50 ರೂ. ಇದಕ್ಕೆ ಭಾರತ ಸರ್ಕಾರ 54.25 ರೂ.ಗಳನ್ನು ತೆರಿಗೆ, ಸೆಸ್‌ಗಳನ್ನು ವಿಧಿಸಿ ಇಂದು 70–75 ರೂ. ಗಳಿಗೇರಿದೆ. ಇದರಿಂದ ಪ್ರತಿಯೊಂದು ವಸ್ತು ಮತ್ತು ಸೇವೆಯ ಬೆಲೆಗಳು ಹೆಚ್ಚಿರುವುದರಿಂದ 3,000 ರಿಂದ 6,000 ರೂ. ಗಳಿಗೆ ದುಡಿಯುವ ಅಂಗನವಾಡಿ ನೌಕರರ ಜೀವನ ತುಂಬಾ ದುಸ್ತರವಾಗಿದೆ.

ಈಗಾಗಲೇ ರಾಜ್ಯ ಸರ್ಕಾರ ಒಪ್ಪಿರುವಂತೆ ನಗರದ ಅಂಗನವಾಡಿ ಕಾರ್ಯಕರ್ತೆಯಿರಗೆ ಡಿ.ಎ. ಸೇರಿದಂತೆ 200/– ರೂ.ಗಳ ಟಿ.ಎ., ಡಿ.ಎ., 1300/– ಮಿನಿ ಅಂಗನವಾಡಿ ಕೇಂದ್ರಗಳನ್ನು ಪೂರ್ಣ ಅಂಗನವಾಡಿ ಕೇಂದ್ರಗಳಾಗಿ ಪರಿವರ್ತಿಸಬೇಕು, ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ರಾಜ್ಯ ಸರ್ಕಾರದಿಂದ ಅಂಗನವಾಡಿ ಕಾರ್ಯಕರ್ತೆಯರಿಗೆ ಕೊಡುವ ಎಲ್ಲಾ ಸವಲತ್ತುಗಳನ್ನು ವಿಸ್ತರಿಸಬೇಕು, ಸೇವಾ ಜೇಷ್ಠತೆ ಆಧಾರದಲ್ಲಿ ಗೌರವಧನ, ಕನಿಷ್ಠ ಕೂಲಿ, 2016–17 ರಲ್ಲಿ ನಿವೃತ್ತಿಯಾಗುವ ನೌಕರರಿಗೆ 50,000–30,000 ಇಂಡಗಂಟು ಕೊಡಬೇಕು. ನಿವೃತ್ತಿಯ ಮೊದಲೇ ಕೆಲಸ ಬಿಡುವವರಿಗೆ 50,000–30,000 ಇಡಗಂಟು, ಮೇಲ್ವಿಚಾರಕಿಯರ ಹುದ್ದೆಗಳಿಗೆ, ಯಾವುದೇ ಲಿಖಿತ ಪರೀಕ್ಷೆಗಳನ್ನು

ಪುಟ 15 ಕ್ಕೆ

ಹೆಚ್.ಆರ್. ನವೀನ್‌ಕುಮಾರ್





JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**